## ಅಧ್ಯಾಯ 4

# ಆದಾಮ ಮತ್ತು ಹವ್ವಳರ ಕುಟುಂಬ

ಆದಿಕಾಂಡ 2:7-3:24 ವಾಕ್ಯಭಾಗವು ಆದಾಮ ಹಾಗೂ ಹವ್ವಳರು ಏದೆನ್ ತೋಟದ ಒಳಗಿರುವದರ ಕಥೆಯನ್ನು ಹೇಳುತ್ತದೆ. ಅವರು ದೇವರ ಲೋಕದಲ್ಲಿ ಆತನ ನಿಯಮಗಳ ಪ್ರಕಾರ ಜೀವಿಸುವದಕ್ಕೆ ವಿಫಲರಾದರು ಮತ್ತು ತೋಟದಿಂದ ತೊಲಗಿಸಲ್ಪಟ್ಟರು, ಆದ್ದರಿಂದ 4:1-24 ವಾಕ್ಯಭಾಗವು ಪ್ರಥಮ ದಂಪತಿಗಳು ಭೂಲೋಕದ ಪರದೈಸಿನ ಹೊರಗಡೆಯಲ್ಲಿ ಹೊಂದಿದ ಅನುಭವಗಳನ್ನು ತಿಳಿಸುತ್ತದೆ. ಹವ್ವಳು ಇಬ್ಬರು ಪುತ್ರರಿಗೆ ಜನ್ಮ ನೀಡಿದಳು: ಕಾಯಿನ ಮತ್ತು ಹೇಬೆಲ. ಅವರ ಜೀವಿತಗಳ ಮೂಲಕವಾಗಿ, ನಾವು ಪುನಃ ಪಾಪದ ದುರಂತಕರ ಫಲವನ್ನು ಮತ್ತು ಆದಾಮ ಹಾಗೂ ಹವ್ವಳರ ಮನೆಯಲ್ಲಿ ಅದರ ವಿನಾಶಕಾರಿ ಪರಿಣಾಮಗಳನ್ನು ಕುರಿತು ನೋಡುತ್ತೇವೆ: ಕಿರಿಯ ಮಗನು ಆತನ ಅಣ್ಣನಿಂದ ಕೊಲ್ಲಲ್ಪಡುತ್ತಾನೆ.

ಆದಿಕಾಂಡದ ಲೇಖಕನು ಪಾಫವು ಹೇಗೆ ವ್ಯಾಪಕವಾಗಿ ಸಮಾಜದಲ್ಲಿ ಹಬ್ಬಿತು, ಕಾಯಿನನ ಸಂತಾನದವರಲ್ಲೊಬ್ಬನು ಕೊಲೆಯ ಕುರಿತು ಹೆಚ್ಚಳಪಟ್ಟುಕೊಂಡು ಅದನ್ನು ಹೆಚ್ಚುಕಡಿಮೆ ಒಂದು ಸನ್ಮಾನದ ಕೃತ್ಯವೇನೋ ಎಂಬಂತೆ ಹೇಳಿಕೊಂಡು ತಿರುಗಾಡುತ್ತಿರುವಷ್ಟರ ಮಟ್ಟಿಗೆ ಪಾಪವು ಹಬ್ಬಿಕೊಂಡಿತ್ತು ಎಂಬುದನ್ನು ವರದಿ ಮಾಡುತ್ತಾನೆ. ಅಂತಿಮವಾಗಿ, ಅಧ್ಯಾಯದ ಅಂತ್ಯದ ವೇಳೆ (4:25, 26), ವಾಕ್ಯದಲ್ಲಿ ಒಂದು ಆಶಾಕಿರಣವು ಕಾಣಿಸಿಕೊಳ್ಳುತ್ತದೆ. ಆದಾಮ ಮತ್ತು ಹವ್ವಳರಿಗೆ ಮೂರನೆಯ ಮಗುವು ಜನಿಸುತ್ತದೆ; ಮತ್ತು ಆತನ ಮುಖಾಂತರವಾಗಿ, ಜನರು ಯೆಹೋವನ ಹೆಸರನ್ನು ಹೇಳಿಕೊಳ್ಳಲಾರಂಭಿಸಿದರು.

## ತೋಟದ ಹೊರಗೆ (4:1-16)

### ಕಾಯಿನ ಮತ್ತು ಹೇಬೆಲರ ಜನನಗಳು (4:1, 2)

**[1]ಆ ಪುರುಷನು ತನ್ನ ಹೆಂಡತಿಯಾದ ಹವ್ವಳನ್ನು ಕೂಡಲು ಆಕೆ ಗರ್ಭಿಣಿಯಾಗಿ ಕಾಯಿನನನ್ನು ಹೆತ್ತು - ಯೆಹೋವನ ಅನುಗ್ರಹದಿಂದ ಗಂಡುಮಗುವನ್ನು ಪಡೆದಿದ್ದೇನೆ ಎಂದು ಹೇಳಿದಳು. [2]ತರುವಾಯ ಅವನ ತಮ್ಮನಾದ ಹೇಬೆಲನನ್ನು ಹೆತ್ತಳು. ಹೇಬೆಲನು ಕುರಿಕಾಯುವವನಾದನು; ಕಾಯಿನನು ವ್ಯವಸಾಯಮಾಡುವವನಾದನು.**

**ವಚನ 1.** ಅಧ್ಯಾಯವು **ಆ ಪುರುಷನು ತನ್ನ ಹೆಂಡತಿಯಾದ ಹವ್ವಳನ್ನು ಕೂಡಲು** ಎಂಬುದರೊಂದಿಗೆ ಆರಂಭಗೊಳ್ಳುತ್ತದೆ. ವಾಕ್ಯವು ಅಕ್ಷರಶಃ ಆದಾಮನು ತನ್ನ ಹೆಂಡತಿಯನ್ನು "ತಿಳಿದನು" (יָדַע, *ಯಾದಾ*) ಎಂದು ಹೇಳುತ್ತದೆ (ನೋಡಿರಿ KJV). ಈ ಇಬ್ರಿಯ ಪದವು ಆದಿಕಾಂಡದಲ್ಲಿ ಲೈಂಗಿಕ ಸಂಬಂಧಗಳನ್ನು ಸೂಚಿಸುವದಕ್ಕೆ ಬಳಸಲ್ಪಡುವ ಸಾಮಾನ್ಯವಾಗಿರುವ ಸೌಮ್ಯೋಕ್ತಿಯಾಗಿರುತ್ತದೆ (4:1, 17, 25; 19:8; 24:16; 38:26).

ಅದರರ್ಥವು ಆತನು ಆಕೆಯನ್ನು ಒಂದು ಹೆಚ್ಚು ನಿಕಟವಾದ ವಿಧದಲ್ಲಿ ಅರಿತುಕೊಂಡನು ಎಂದಷ್ಟೇ ಆಗಿದೆ.

**ಆಕೆ ಗರ್ಭಿಣಿಯಾಗಿ** ಒಬ್ಬ ಮಗುವನ್ನು **ಹೆತ್ತು** ಆತನನ್ನು ಅವಳು **ಕಾಯಿನ** (קַיִן, *ಕ್ವಾಯಿನ)* ಎಂದು ಕರೆದಳು. "ಕಾಯಿನ" ಎಂಬ ಹೆಸರಿನ ಮೂಲಪದವು ಅಸ್ಪಷ್ಟವಾಗಿರುತ್ತದೆ, ಮತ್ತು ಅದನ್ನು ಬಹುಶಃ ವ್ಯುತ್ಪತ್ತಿಶಾಸ್ತ್ರಕ್ಕನುಗುಣವಾಗಿರುವ ಮೂಲ ಪದವಾದ קין *(ಕ್ವಿನ್)* ಎಂಬುದರೊಂದಿಗೆ ಸಂಬಂಧಗೊಳಿಸಬಾರದೆಂದು ತೋರುತ್ತದೆ, ಆ ಪದದ ಅರ್ಥವು "ಒಮ್ಮೃತಕ್ಕೆ ಪ್ರಯತ್ನಿಸು" ಎಂದಾಗಿರುತ್ತದೆ. ಬದಲಾಗಿ, 4:1ನೇ ವಚನವು - ಶಬ್ದಾಡಂಬರದಲ್ಲಿ ಅದೇ ಉಚ್ಚರಣೆಯ ಪದವನ್ನು ಬಳಸುತ್ತಾ - ಅದನ್ನು ಬೇರೊಂದು ಮೂಲ ಪದವಾದ קָנָה *(ಕ್ವಾನಾಹ)* ಎಂಬುದರೊಂದಿಗೆ ಸಂಬಂಧಗೊಳಿಸುತ್ತದೆ, ಈ ಪದದ ಅರ್ಥವು "ಪಡೆದಿರು" ಅಥವಾ "ಪ್ರಸವಿಸು" ಎಂದಾಗಿರುತ್ತದೆ.[1]

ಕಾಯಿನನ ಜನಿಸಿದಾಗ ಹವ್ವಳು ನೀಡಿದ ಪ್ರತಿಕ್ರಿಯೆಯು NASBಯಲ್ಲಿ ಈ ಕೆಳಗಿನಂತೆ ಅನುವಾದಿಸಲ್ಪಟ್ಟಿರುತ್ತದೆ: **ಯೆಹೋವನ ಅನುಗ್ರಹದಿಂದ ಗಂಡುಮಗುವನ್ನು ಪಡೆದಿದ್ದೇನೆ.** "ಗಂಡುಮಗು" ಎಂಬುದನ್ನು ಅನುವಾದಿಸಿರುವ ಇಬ್ರಿಯ ಪದವಾದ אִישׁ *(ಇಶ್)* ಎಂಬುದು ಸಾಮಾನ್ಯವಾಗಿ "ಪುರುಷ" ಎಂದು ಅನುವಾದಿಸಲ್ಪಟ್ಟಿರುತ್ತದೆ (ನೋಡಿರಿ KJV; NRSV; NIV; ESV). "ಪುತ್ರ" ಅಥವಾ "ಮಗು" ಎಂಬುದರ ಬದಲಾಗಿ, ಹವ್ವಳು ಈ ಪದವನ್ನು ಏಕೆ ಬಳಸಿದಳು? ಬಹುಶಃ ಆಕೆಯು ತಾನು "ಒಬ್ಬ ನರ"ನಿಂದ (אִישׁ, *ಇಶ್)* ತೆಗೆದು ರೂಪಿಸಲ್ಪಟ್ಟು ಅನಂತರದಲ್ಲಿ ಒಬ್ಬ "ನಾರಿ" (אִשָּׁה, *ಇಶಶಹಾ*; 2:23) ಎಂದು ಕರೆಯಲ್ಪಟ್ಟಿದ್ದರ ಆಧಾರದಲ್ಲಿ ಶಬ್ದಾಡಂಬರವನ್ನು ಬಳಸುತ್ತಿರಬಹುದಾಗಿದೆ. ಈಗ, ಒಬ್ಬ ಸ್ತ್ರೀಯಾಗಿದ್ದ (*ಇಶಶಹಾ*) ಅವಳು ಒಬ್ಬ "ಪುರುಷ"ನಿಗೆ *(ಇಶ್)* ಜನ್ಮ ನೀಡಿದ್ದಳು.[2] ಪೌಲನು ಈ ಪರಸ್ಪರಾವಲಂಬನೆಯ ಸಂಬಂಧವನ್ನು ಜ್ಞಾಪಿಸುತ್ತಾ ಹೀಗೆ ಬರೆದನು, "ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು; ಹಾಗೆಯೇ ಪುರುಷನು ಸ್ತ್ರೀ ಮೂಲಕವಾಗಿ ಹುಟ್ಟುತ್ತಾನೆ" (1 ಕೊರಿಂಥ 11:12; NIV).

ಈ ವಚನದಲ್ಲಿ ಅನುವಾದಿಸುವದಕ್ಕೆ ಕಠಿಣವಾಗಿರುವ ಭಾಗವೆಂದರೆ אֶת *(ಎಥ್)* ಎಂಬ ಪದವೇ, ಇದು ಬಹುಪಾಲು ಆಂಗ್ಲ ಆವೃತ್ತಿಗಳಲ್ಲಿ ಉಪಸರ್ಗವಾದ "ಯೊಂದಿಗೆ" ಎಂಬುದಾಗಿ ಅನುವಾದಿಸಲ್ಪಟ್ಟಿದೆ. NASBಯಲ್ಲಿ, "ಯೊಂದಿಗೆ" ಮುಂಚೆ "ಸಹಾಯ" ಎಂದು ಇರುತ್ತದೆ, ಅದು ಇಬ್ರಿಯ ವಾಕ್ಯದಲ್ಲಿ ಕಾಣಿಸಿಕೊಳ್ಳುವದಿಲ್ಲ. ಪಂಚಪುಸ್ತಕದ ಅತ್ಯಂತ ಹಳೆಯ ಹಾಗೂ ಅತ್ಯಂಥ ನಿಖರವಾದ ಅರಾಮಿಕ್, ಅಂದರೆ ತಾರ್ಗುಮ್ ಆಪ್ ಒಂಕೆಲೊಸನಲ್ಲಿರುವ ಭಾವಾನುವಾದದಲ್ಲಿ, "ಯೆಹೋವನ ಸಮ್ಮುಖದಿಂದ" ಎಂದಿರುತ್ತದೆ,[3] ಹೊಸ ಶಿಸುವನ್ನು ಯೆಹೋವನಿಂದ ಬಂದ ವರದಾನ ಎಂದು ಗುರುತಿಸುವದಾಗಿದೆ. ವಾಕ್ಯಭಾಗದ ಈ ಅರ್ಥೈಸುವಿಕೆಯೊಂದಿಗೆ LXX ಸಹಮತ ಹೊಂದಿರುತ್ತದೆ. ಅದರಲ್ಲಿ διά τοῦ θεοῦ (*ಡಿಯಾ ಟೊವ ಥೆಯೊವು*, "ದೇವರ ಮೂಲಕ") ಎಂದಿರುತ್ತದೆ, ಅದು ಹವ್ವಳು ಮಗುವನ್ನು ದೇವರ ಮಧ್ಯಸ್ಥಿಕೆಯ ಮೂಲಕವಾಗಿ ಪಡೆದುಕೊಂಡಳು ಎಂದು ಸೂಚಿಸುವದಾಗಿದೆ.

ತಾರ್ಗುಮ್ ಆಪ್ ಒಂಕೆಲೊಸನ ಭಾವಾನುವಾದವು ಇಬ್ರಿಯ ವಾಕ್ಯದಲ್ಲಿ ಸ್ವಲ್ಪ ವ್ಯತ್ಯಾಸವಾದ ಮಾತುಗಳಿರುವದಾಗಿ ಸೂಚಿಸುತ್ತದೆ: מֵאֵת *(ಮೆಎಥ್).* ಮೂಲಭೂತ ಸಮಸ್ಯೆಯು ಏನೆಂದರೆ MT ತರ್ಜುಮೆಯಲ್ಲಿ "ಯೊಂದಿಗೆ" (אֵת, *ಎಥ)* ಎಂಬ ಸ್ವರಾಕ್ಷರ ಅಂಶಗಳಿರುವದಿಲ್ಲ ಇಬ್ರಿಯ "ಇಂದ" (-מִ, *ಮೆ*) ಎಂಬ ಉಚ್ಚರಣೆಯೂ ಇರುವದಿಲ್ಲ; ಬದಲಾಗಿ, ನೇರವಾದ ವಸ್ತುವಿನ ಸೂಚಕ ಅಂಶಗಳನ್ನು ಅಥವಾ ಈ ಮುಂಚಿನ ನಾಮಪದವಾದ (אֶת, *ಎಥ್)* ಎಂಬುದರ ಏಕಾನ್ವಯ ಪದವೊಂದನ್ನು ಹೊಂದಿರುತ್ತದೆ. ವಾಕ್ಯವು ಇರುವ ಪ್ರಕಾರ

ಅದರರ್ಥವು ಹೀಗಿರುವದು ಎಂದಾಗುತ್ತದೆ: "ನಾನು ಒಬ್ಬ ಪುರುಷನನ್ನು ಪಡೆದಿದ್ದೇನೆ: ಯೆಹೋವನು." ಇದರಿಂದಾಗಿ ಕೆಲವು ಪಂಡಿತರು ಹೇಳುವಂತಾಗಿದ್ದೇನೆಂದರೆ ಹವ್ವಳು ತಾನು ವಾಗ್ದಾನ ಮಾಡಲ್ಪಟ್ಟ ವಿಮೋಚಕನಿಗೆ, "ಯೆಹೋವನಿಗೆ" ಜನ್ಮ ನೀಡಿದ್ದೇನೆಂದು ಭಾವಿಸಿಕೊಂಡಿದ್ದಳು, ಮತ್ತು ಆಕೆಯು "ಕಾಯಿನನ ಜನನದೊಂದಿಗೆ ದಂಡನೆಯಿಂದ ತಕ್ಷಣವೇ ವಿಮುಕ್ತಿಯನ್ನು ಪಡೆಯಲಿದ್ದಳು"[4] ಎಂಬದೆ.

ತಾರ್ಗುಮ್ ಆಪ್ ಫಿಲಿಷ್ಟಿಯು ಒಂದು ವಿಧದಲ್ಲಿ ಇದೇ ರೀತಿಯ ತಿಳುವಳಿಕೆಯನ್ನು ಮುಂದಿಡುತ್ತಾ, ಹವ್ವಳು ಹೀಗೆ ಹೇಳಿದಳೆಂದು ಹೇಳುತ್ತದೆ, "ನಾನು ಒಬ್ಬ ಪುರುಷನನ್ನು, ಯೆಹೋವನು ದೂತನನ್ನು ಹೊಂದಿಕೊಂಡಿದ್ದೇನೆ."[5] ಈ ಅನುವಾದವು ಆದಿಕಾಂಡದಲ್ಲಿ ಯೆಹೋವನು ದೂತನು ಹೆಚ್ಚುಕಡಿಮೆ ಸ್ವತಃ ಯೆಹೋವನಿಗೆ ಸಮಾನಾರ್ಥಕವಾಗಿರುತ್ತದೆ, ಆತನ ಪರವಾಗಿ ಮಾತಾಡುವವನು ಮತ್ತು ಆತನನ್ನು ಪ್ರತಿನಿಧಿಸುವವನು ಎಂಬುದನ್ನು ಪ್ರತಿಫಲಿಸುವದಾಗಿದೆ (16:7-13; 21:17-20; 22:11-18; 31:11-13; 48:15, 16).

ಕ್ರಿ.ಶ. ೮೦೦ರಲ್ಲಿ ವ್ಯಂಜನಾತ್ಮಕ ಇಬ್ರಿಯ ವಾಕ್ಯದೊಳಗೆ ಸ್ವರಾಕ್ಷರಗಳನ್ನು ಸೇರ್ಪಡೆಗೊಳಿಸಿದ Masoretesನು, "ಯೊಂದಿಗೆ" (אֶת, *ಎಥ)* ಎಂಬ ಉಪಸರ್ಗದ ಬದಲಾಗಿ ನೇರವಾದ ಸಕರ್ಮಕವನ್ನು (אֵת, *ಎಥ್)* ಬಳಸಿದ್ದು ನಿಖರವಾದದ್ದೋ ಎಂಬುದು ನಮಗೆ ತಿಳಿಯಲು ಸಾಧ್ಯವಿಲ್ಲ. ಕಾಯಿನನ ಜನನದಿಂದಾಗಿ ಹವ್ವಳಲ್ಲಾದ ಆನಂದದ ವಿಷಯದಲ್ಲಿ ನಿರ್ದಿಷ್ಟವಾಗಿ ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲವಾದರೂ, ಕಾಯಿನನ ಜನನದಲ್ಲಿ "ಯೆಹೋವನು" ಯಾವದೋ ರೀತಿಯಲ್ಲಿ ಪಾತ್ರ ವಹಿಸಿದ್ದಾನೆಂಬುದಾಗಿ ಆಕೆಯಿ ನಿಶ್ಚಯವಾಗಿಯೂ ಯೋಚಿಸಿದ್ದಳು (ನೋಡಿರಿ 29:31; 30:22; 33:5; 48:9; ಯೋಬನು 31:15; ಕೀರ್ತನೆ 127:3; 139:13; ಯೆರೆಮೀಯ 1:5). ಆಕೆಯ ದೃಷ್ಟಿಯಲ್ಲಿ, ಈ ಹೊಸದಾಗಿ ಹುಟ್ಟಿದ ಮಗುವು "ಯೆಹೋವನು" (ಆತನ ಪ್ರತಿನಿಧಿ ಎಂಬ ಅರ್ಥದಲ್ಲಿ) ಎಂದಾದರೂ ಆಗಿರಬಹುದು ಅಥವಾ ಆತನು "ಯೆಹೋವನಿಂದ," "ಯೆಹೋವನ ಮುಖಾಂತರ" ದೊರೆತವನಾಗಿದ್ದನು, ಅಥವಾ "ಯೆಹೋವನ ಸಹಾಯದೊಂದಿಗೆ" ದೊರೆತವನಾಗಿದ್ದನು, ಬಹುಪಾಲು ಆಂಗ್ಲ ಅನುವಾದಗಳು ಇಬ್ರಿಯ ವಾಕ್ಯವನ್ನು ಹೀಗೆಯೇ ಅನುವಾದಿಸಿರುತ್ತವೆ. ಪ್ರಕರಣವು ಏನೇ ಆಗಿದ್ದರೂ ಸರಿಯೇ, ಹವ್ವಳು ತನ್ನ ಚೊಚ್ಚಲು ಮಗುವಿನ ವಿಷಯದಲ್ಲಿ ಪಟ್ಟ ಸಂತೋಷ ಮತ್ತು ಇಟ್ಟುಕೊಂಡಿದ್ದ ಕನಸುಗಳು ಭಗ್ನಗೊಳ್ಳಲಿದ್ದವು, ಮತ್ತು ಈ ಗಂಡು ಮಗುವಿನ ವಿಷಯದಲ್ಲಿ ಆಕೆಗಿದ್ದ ನಿರೀಕ್ಷೆಯು ನಿರರ್ಥಕವಾಗಲಿತ್ತು. ಆಕೆಯ ಶ್ರಮೆಯನ್ನು ಕಡಿಮೆಗೊಳಿಸುವದರ ಬದಲಾಗಿ, ಆತನು ಆಕೆಯ ಹೃದಯಕ್ಕೆ ಜೀವಿತಕಾಲವೆಲ್ಲಾ ನೋವುಂಟು ಮಾಡುವಂತಹ ಒಂದು ಗಾಯವನ್ನು ಮಾಡಲಿದ್ದನು.

**ವಚನ 2.** ಸ್ವಲ್ಪ ಕಾಲದ ನಂತರ, **ತರುವಾಯ ಅವನ** [ಕಾಯಿನ] **ತಮ್ಮನಾದ ಹೇಬೆಲನನ್ನು ಹೆತ್ತಳು**. ಹವ್ವಳ ಎರಡನೆಯ ಮಗುವಿನ ಜನ್ಮದ ಕುರಿತು ಒಂದು ವಾಸ್ತವಿಕ ವಿಧದಲ್ಲಿ ಬಣ್ಣಿಸಲ್ಪಟ್ಟಿದ್ದು, ಅವಳಿಗೆ ಹೇಬೆಲನ ಮೇಲೆ ಕಾಯಿನನಿಗಿಂತಲೂ ಕಡಿಮೆಯಾದ ನಿರೀಕ್ಷೆಗಳಿದ್ದವು ಎಂಬುದಾಗಿ ಸೂಚಿಸಬಹುದಾಗಿದೆ. ವಾಸ್ತವಿಕದಲ್ಲಿ, ತನ್ನ ಮೊದಲ ಮಗನ ಕುರಿತಾಗಿ ಹವ್ವಳು ನೀಡಿದ ಭವ್ಯವಾದ ಹೇಳಿಕೆಗೆ ವ್ಯತಿರಿಕ್ತವಾಗಿ, ಹೇಬೆಲನ ವಿಷಯದಲ್ಲಿ ಆಕೆಯು ಯಾವದೇ ಹೇಳಿಕೆಯನ್ನೂ ನೀಡದಿರುವದು ಮಗುವಿನ ಕುರಿತಾಗಿ ಆಕೆಗಿದ್ದ ನಿರಾಶೆಯನ್ನು ಬಯಲುಗೊಳಿಸಬಹುದಾಗಿದೆ: ಆತನು ಕಾಯಿನನಂತೆ ಸುಂದರಾಂಗನು ಮತ್ತು ಲವಲವಿಕೆಯಿಂದ ಕೂಡಿದವನಾಗಿರಲಿಲ್ಲವೋ? ಆ ಸಂದರ್ಭದಲ್ಲಿ ಆಕೆಯ ಮನಸ್ಸಿನಲ್ಲಿ ಏನು ಯೋಚಿಸುತ್ತಿದ್ದಳೆಂಬುದು ನಮಗೆ ತಿಳಿಯದು, ಆದರೆ ಆತನ ಹೆಸರು ಅವನ ಜೀವಿತದ

ಅಶುಭಕರವಾದ ಪೂರ್ವಛಾಯೆಯ ವಿಷಯದಲ್ಲಿ ಸುಳಿವು ನೀಡಬಹುದಾಗಿದೆ.

"ಹೇಬೆಲ" (הֶבֶל, *ಹೇಬೆಲ*) ಎಂಬ ಹೆಸರಿನ ಅರ್ಥವು "ಹಬೆ," "ಉಸಿರು," ಅಥವಾ "ವ್ಯರ್ಥ" ಎಂದಾಗಬಹುದು. ಈ ಪದವು ಹಳೆಯ ಒಡಂಬಡಿಕೆಯಲ್ಲಿ ಅನೇಕ ಸಾರಿ ಸುಳ್ಳು ದೇವರುಗಳನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ; ಅದು "ವಿಗ್ರಹಗಳು" ಎಂದು ಅನುವಾದಿಸಲ್ಪಟ್ಟಿದೆ, ಅವುಗಳನ್ನು "ವ್ಯರ್ಥವಾದವುಗಳು" ಎಂದು ಘೋಷಿಸುವದಾಗಿದೆ. ಇದು ಕೆಲವು ಸಾರಿ ತನ್ನ ಜೀವಿತವನ್ನು ವ್ಯಯಿಸಿ "ಪ್ರಯಾಸವು ವ್ಯರ್ಥ, ... ಶಕ್ತಿಯನ್ನೆಲ್ಲಾ ವ್ರಯಮಾಡಿದ್ದು ಹಾಳೇ" ಎಂಬವನನ್ನು ಸೂಚಿಸುತ್ತದೆ (ಯೆಶಾಯ 49:4). ಪ್ರಸಂಗಿ ಪುಸ್ತದಲ್ಲಿ ಮೂವತ್ತಾರು ಸಾರಿ, ಅದು ಹೆಚ್ಚುಕಡಿಮೆ ಸಮಸ್ತವನ್ನು ಹೊಂದಿರುವ ಅಥವಾ ಅನುಭವಿಸಿ ನೋಡಿರುವಂಥ ಆದರೆ ಜೀವಿತದಲ್ಲಿ ಶಾಶ್ವತವಾಗಿ ಉಳಿಯುವ ಸಂತೃಪ್ತಿಯನ್ನು ಕಾಣದೆ ಇರುವ ವ್ಯಕ್ತಿಗೆ ಸಂಬಂಧ ಪಟ್ಟಂತೆ ಬಳಸಲ್ಪಟ್ಟಿರುತ್ತದೆ.[6] ಸಾರ್ಥಕತೆ ಸಾಧಿಸದವನಾಗಿ, ಬೋಧಕನು ಸಮಸ್ತವೂ "ವ್ಯರ್ಥ" ಅಥವಾ "ಲಾಭವು ಕಾಣಲಿಲ್ಲ" ಮತ್ತು "ಗಾಳಿಯನ್ನು ಹಿಂದಟ್ಟಿದ ಹಾಗೆ" ಎಂದು ನಿರಂತರವಾಗಿ ಹೇಳುತ್ತಲೇ ಹೋಗುವನು (ನೋಡಿರಿ ಪ್ರಸಂಗಿ 2:11, 17) ಹೇಗೂ, ಹೇಬೆಲನ ಹೆಸರಿನ ವಿಷಯದಲ್ಲಿ ನೋಡುವದಾದರೆ, *ಹೇಬೆಲ* ಎಂಬುದು ಆತನ ಅಣ್ಣನಾದ ಕಾಯಿನನಿಂದ ಮೊಟಕುಗೊಳಿಸಲ್ಪಟ್ಟ ಆತನ ಜೀವಿತದ ಅಲ್ಪಾವದಿಗೆ ಒಂದು ಪೂರ್ವಛಾಯೆಯಾಗಿರುವ ಸಾಧ್ಯತೆಯಿದೆ. ಭೂಮಿಯ ಮೇಲೆ ಹೇಬೆಲನ ಸಮಯವು ತಾತ್ಕಾಲಿಕವಾಗಿತ್ತು – ಒಂದು "ಹಬೆ" ಅಥವಾ "ಉಸಿರು" ರೀತಿಯಲ್ಲಿಯೇ.[7]

**ಹೇಬೆಲನು ಕುರಿಕಾಯುವವನು** ಎಂದು ಬಣ್ಣಿಸಲ್ಪಟ್ಟಿದ್ದರೆ,[8] **ಕಾಯಿನನು ವ್ಯವಸಾಯಮಾಡುವವನು** ಎಂದು ಕರೆಯಲ್ಪಟ್ಟಿರುತ್ತಾನೆ.[9] ಕೆಲವರು ಇದು ಆ ಪ್ರಾಚೀನ ನಾಗರೀಕತೆಯಲ್ಲಿ ಎರಡು ಬೇರೆ ಬೇರೆ ಜೀವನ ಶೈಲಿಗಳ ನಡುವೆ ಇದ್ದಂಥ ವರ್ಗ ಘರ್ಷಣೆಯನ್ನು ಪ್ರತಿಬಿಂಬಿಸುತ್ತದೆಂದು ವಾದಿಸುತ್ತಾರೆ: ಒಬ್ಬನು ವ್ಯವಸಾಯಗಾರನು ಮತ್ತು ನೆಲೆಗೊಂಡಿರುವವನು, ಮತ್ತೊಬ್ಬನು ಕುರಿಗಳ ಪಾಲಕನು ಮತ್ತು ಅಲೆದಾಡುತ್ತಿರುವವನು. ಈ ಚರಿತ್ರೆಯಲ್ಲಿ ಯಾವ ಅಂಶವೂ ಒಂದು ಜೀವನ ಶೈಲಿಗಿಂತ ಮತ್ತೊಂದು ಶೈಲಿಯು ಉತ್ತಮವೆಂದು ದೇವರಾಗಲಿ ಅಥವಾ ಮನುಷ್ಯನಾಗಲಿ ಪರಿಗಣಿಸಿದ್ದನೆಂದು ಸೂಚಿಸುವದಿಲ್ಲ. ಕಾಯಿನ ಮತ್ತು ಹೇಬೆಲರ ನಡುವಿನ ನಿರ್ಣಾಯಕವಾದ ವ್ಯತ್ಯಾಸವು ಅವರು ಆರಿಸಿಕೊಂಡಿದ್ದ ವೃತ್ತಿಯಲ್ಲಿ ಅಲ್ಲ, ಆದರೆ ಅವರ ಹೃದಯದ ಮನೋಭಾವಗಳಲ್ಲಿಯೇ ಆಗಿದೆ.

## ಕಾಯಿನ ಮತ್ತು ಹೇಬೆಲರ ಕಾಣಿಕೆಗಳು ಮತ್ತು ದೇವರ ಪ್ರತಿಕ್ರಿಯೆ (4:3-7)

**3ಕಾಲಾಂತರದಲ್ಲಿ ಕಾಯಿನನು ಹೊಲದ ಬೆಳೆಯಲ್ಲಿ ಕೆಲವನ್ನು ತಂದು ಯೆಹೋವನಿಗೆ ಕಾಣಿಕೆಯಾಗಿ ಸಮರ್ಪಿಸಿದನು. 4ಹೇಬೆಲನು ಹಾಗೆಯೇ ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ಕಾಣಿಕೆಯಾಗಿ ತಂದು ಅವುಗಳ ಕೊಬ್ಬನ್ನು ಹೋಮಮಾಡಿದನು. 5ಯೆಹೋವನು ಹೇಬೆಲನನ್ನೂ ಅವನ ಕಾಣಿಕೆಯನ್ನೂ ಮೆಚ್ಚಿ ಕಾಯಿನನನ್ನೂ ಅವನ ಕಾಣಿಕೆಯನ್ನೂ ಮೆಚ್ಚಲಿಲ್ಲ. ಇದರಿಂದ ಕಾಯಿನನು ಬಹು ಕೋಪಗೊಂಡನು; ಅವನ ಮುಖವು ಕಳೆಗುಂದಿತು. 6ಆಗ ಯೆಹೋವನು ಅವನಿಗೆ - ಯಾಕೆ ಕೋಪಿಸಿಕೊಂಡಿ? ನಿನ್ನ ತಲೆ ಯಾಕೆ ಬೊಗ್ಗಿತು? 7ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವದಲ್ಲವೇ; ಅಲ್ಲದಿದ್ದರೆ ಪಾಪವು ನಿನ್ನನ್ನು ಹಿಡಿಯಬೇಕೆಂದು ಬಾಗಿಲಲ್ಲಿ ಹೊಂಚಿಕೊಂಡಿರುವದು; ಆದರೂ ನೀನು ಅದನ್ನು ವಶಮಾಡಿಕೊಳ್ಳಬೇಕು ಎಂದು ಹೇಳಿದನು.**

**ವಚನಗಳು 3-5. ಕಾಲಾಂತರದಲ್ಲಿ**, ಕಾಯಿನ ಮತ್ತು ಹೇಬೆಲರು ತಾವು ಆರಿಸಿಕೊಂಡಿದ್ದ ವೃತ್ತಿಗಳಲ್ಲಿ ಅಭಿವೃದ್ಧಿಗೊಂಡಿದ್ದರು. ಇಬ್ಬರು ಸಹೋದರರು ಆರಾಧನೆಯಲ್ಲಿ ತೊಡಗಿರುವದಾಗಿ ವಾಕ್ಯವು ಬಣ್ಣಿಸುತ್ತದೆ. ಈ ಇಬ್ಬರು ಯುವಕರಲ್ಲಿದ್ದ ನಿರ್ಣಾಯಕವಾದ ವ್ಯತ್ಯಾಸವು ಅವರು ದೇವರಿಗೆ ಏನನ್ನು ಸಮರ್ಪಿಸಿದರು ಎಂಬುದರಲ್ಲಿಯೇ ಎಂದು ಕೆಲವರು ಹೇಳುತ್ತಾರೆ: **ಕಾಯಿನನು ಹೊಲದ ಬೆಳೆಯಲ್ಲಿ** [ಧಾನ್ಯ ಮತ್ತು/ಅಥವಾ ತರಕಾರಿಗಳ ಕಾಣಿಕೆಯನ್ನು] **ಕೆಲವನ್ನು ತಂದನು ... ಹೇಬೆಲನು ಹಾಗೆಯೇ ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ಕಾಣಿಕೆಯಾಗಿ ತಂದು ಅವುಗಳ ಕೊಬ್ಬನ್ನು ಹೋಮಮಾಡಿದನು.** ವಾಕ್ಯವು ಈ ಹಂತದಲ್ಲಿ ದೇವರು ಒಂದು ವಿಧವಾದ ಕಾಣಿಕೆಯನ್ನು ತಿರಸ್ಕರಿಸಿ ಮತ್ತೊಂದು ಕಾಣಿಕೆಯನ್ನು ಮೆಚ್ಚಿದನು ಎಂಬುದರ ಬಗ್ಗೆ ಏನನ್ನೂ ಹೇಳುವದಿಲ್ಲ. ಚರಿತ್ರೆಯು ಅವರಲ್ಲಿ ಪ್ರತಿಯೊಬ್ಬನು ಯೆಹೋವನಿಗೆ **ಕಾಣಿಕೆಯಾಗಿ** (מִנְחָה, *ಮಿಂಚಾಹಾ*) ತಂದನು ಎಂದಷ್ಟೆ ಹೇಳುತ್ತದೆ. ಈ ಪದವು ಯೆಹೂದ್ಯರ ಅನಂತರದ ಇತಿಹಾಸದಲ್ಲಿ ಪ್ರಾಥಮಿಕವಾಗಿ ಹಿಟ್ಟು ಅಥವಾ ಧಾನ್ಯದ ಕಾಣಿಕೆಗಳನ್ನು ಸೂಚಿಸಲು ಬಳಸಲ್ಪಟ್ಟಿದೆ (ಯಾಜಕಕಾಂಡ 2:1-3, 14-16),[10] ಆದರೆ ಅದರಲ್ಲಿ ಪ್ರಾಣಿಗಳ ಯಜ್ಞಗಳು ಸಹ ಸೇರಿರಬಹುದಾಗಿದೆ (1 ಸಮುವೇಲ 2:17).

**ಯೆಹೋವನು ಹೇಬೆಲನನ್ನೂ ಅವನ ಕಾಣಿಕೆಯನ್ನೂ ಮೆಚ್ಚಿ ಕಾಯಿನನನ್ನೂ ಅವನ ಕಾಣಿಕೆಯನ್ನೂ ಮೆಚ್ಚಲಿಲ್ಲ.** ದೇವರಿಗೆ ಕಾಯಿನನ ಕಾಣಿಕೆಗಿಂತಲೂ ಹೇಬೆಲನ ಕಾಣಿಕೆಯು ಏಕೆ ಹೆಚ್ಚು ಬೆಲೆಯುಳ್ಳದ್ದಾಗಿತ್ತು ಎಂಬುದನ್ನು ಅರ್ಥಮಾಡಿಕೊಳ್ಳುವದಕ್ಕೆ ಮುಖ್ಯವಾದದ್ದೇನೆಂದರೆ "ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ಕಾಣಿಕೆಯಾಗಿ ತಂದು ಅವುಗಳ ಕೊಬ್ಬನ್ನು ಹೋಮಮಾಡಿದನು" ಎಂಬುದೆ. ಮೋಶೆಯ ಧರ್ಮಶಾಸ್ತ್ರದಡಿಯಲ್ಲಿ, ಬೆಳೆಯ ಪ್ರಥಮ ಫಲ (ವಿಮೋಚನಕಾಂಡ 23:16-19; 34:22-26; ಯಾಜಕಕಾಂಡ 2:14), ಮತ್ತು ಪ್ರಾಣಿಗಳ ಚೊಚ್ಚಲ ಮರಿ (ವಿಮೋಚನಕಾಂಡ 13:11-13; 22:29, 30; 34:19, 20), ಮತ್ತು ಅವುಗಳ ಕೊಬ್ಬಿನ ಭಾಗಗಳು (ವಿಮೋಚನಕಾಂಡ 29:13; ಯಾಜಕಕಾಂಡ 3:3-5; 4:8-10; 7:23-25) ವಿಶೇಷವಾದ ವಿಧದಲ್ಲಿ ಯೆಹೋವನಿಗೆ ಸೇರಿದವುಗಳಾಗಿದ್ದವು. ಇತಿಹಾಸದ ಇಷ್ಟೊಂದು ಆರಂಭಿಕ ಕಾಲದಲ್ಲಿಯೇ ದೇವರು ಈ ವಿಧವಾಗಿ ಮಾನವರಿಗೆ ಅಪ್ಪಣೆಗಳನ್ನು ಕೊಟ್ಟಿದ್ದನೋ ಅಥವಾ ಇಲ್ಲವೋ ಎಂಬುದನ್ನು ನಿರ್ಧರಿಸುವದಕ್ಕಾಗುವದಿಲ್ಲ. ಹೇಗೂ, ಹೇಬೆಲನು ತನ್ನ ಹಿಂಡಿನ ಮೇಲೆ ಯೆಹೋವನು ತೋರಿಸಿದ ಆಶೀರ್ವಾದಕ್ಕೆ ಕೃತಜ್ಞನಾಗಿದ್ದನೆಂಬುದು ಸ್ಪಷ್ಟವಾಗಿರುತ್ತದೆ, ಮತ್ತು ಆತನು ತನ್ನಲ್ಲಿರುವದರಲ್ಲಿಯೇ ಪ್ರಥಮ ಹಾಗೂ ಅತ್ಯುತ್ತಮವಾದದ್ದನ್ನು ದೇವರಿಗೆ ಕೊಡುವಷ್ಟರ ಮಟ್ಟಿಗೆ ಆತನಿಗೆ ಆಭಾರಿಯಾಗಿದ್ದನು. ಕಾಯಿನನು ಮನಸ್ಸಿನಲ್ಲಿ ಬೈದುಕೊಳ್ಳುವ ಮನೋಭಾವದಿಂದ ಕೊಟ್ಟಿರಬಹುದು, ದೇವರಿಗೋಸ್ಕರ ಕೇವಲ ಮಿಕ್ಕಿರುವದನ್ನು ತರುವವನಾಗಿ ಪ್ರಥಮ ಹಾಗೂ ಅತ್ಯುತ್ತಮವಾದದ್ದನ್ನು ತನಗೋಸ್ಕರ ಇಟ್ಟುಕೊಂಡಿರಬಹುದು.

ಆದಿಕಾಂಡದ ಚರಿತ್ರೆಯು ದೇವರು ಏಕೆ ಹೇಬೆಲ ಕಾಣಿಕೆಯನ್ನು ಅಂಗೀಕರಿಸಿಕೊಂಡು ಕಾಯಿನನ ಕಾಣಿಕೆಯನ್ನು ತಿರಸ್ಕರಿಸಿದನು ಎಂಬುದನ್ನು ತಿಳಿಸುವದಿಲ್ಲ. ವಾಕ್ಯವು ಕ್ಲುಪ್ತವಾಗಿದೆ ಮತ್ತು ಅಷ್ಟಾಗಿ ವಿವರಗಳನ್ನು ಒದಗಿಸುವದಿಲ್ಲ; ಹೇಗೂ, ಅವರಿಬ್ಬರಿಗೂ ದೇವರ ಕಡೆಗೆ, ತಮ್ಮ ಕಡೆಗೆ, ಮತ್ತು ಅವರ ಸ್ವತ್ತುಗಳ ಕಡೆಗೆ ಇದ್ದ ಮನೋಭಾವಗಳು ವ್ಯತ್ಯಾಸವಾಗಿದ್ದವು ಎಂಬುದು ಸ್ಪಷ್ಟವಾಗಿ ಕಾಣಿಸುತ್ತದೆ. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಈ ವಿಷಯವನ್ನು ಒತ್ತಿ ಹೇಳುವವನಾಗಿ ಹೀಗೆ ನುಡಿಯುತ್ತಾನೆ, "ನಂಬಿಕೆಯಿಂದಲೇ ಹೇಬೆಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು. ಅದರ ಮೂಲಕ ತಾನು

ನೀತಿವಂತನೆಂದು ಸಾಕ್ಷಿಹೊಂದಿದನು; ದೇವರು ಅವನ ಕಾಣಿಕೆಗಳನ್ನು ಅಂಗೀಕಾರಮಾಡಿದ್ದೇ ಆ ಸಾಕ್ಷಿ. ಅವನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನೂ ಮಾತಾಡುತ್ತಾನೆ" (ಇಬ್ರಿಯ 11:4).

ದೇವರು "ಹೇಬೆಲನನ್ನೂ ಅವನ ಕಾಣಿಕೆಯನ್ನೂ ಮೆಚ್ಚಿ"ದನು ಆದರೆ ಕಾಯಿನನನ್ನೂ ಅವನ ಕಾಣಿಕೆಯನ್ನೂ ಮೆಚ್ಚಲಿಲ್ಲ" ಎಂಬ ಹೇಳಿಕೆಯಿಂದ, ನಾವು ಹಲವಾರು ಸತ್ಯಗಳನ್ನು ವಿವೇಚಿಸಿ ತಿಳಿಯಬಹುದಾಗಿದೆ. (1) ಇಬ್ಬರು ಸಹೋದರರು ಸಹ ದೇವರಲ್ಲಿ ನಂಬಿಕೆಯನ್ನಿಟ್ಟಿದ್ದರು ಮತ್ತು ಆರಾಧಿಸಿದರಾದರೂ, ಕಾಯಿನನಲ್ಲಿ ಇಲ್ಲದೆ ಇದ್ದಂಥ ಒಂದು ಗುಣಮಟ್ಟದ ನಂಬಿಕೆಯು (ದೇವರ ಕಡೆಗೆ ಸಮರ್ಪಣೆ) ಹೇಬೆಲನಲ್ಲಿ ಇತ್ತು. (2) ಇಬ್ಬರು ಸಹೋದರರು ದೇವರಿಗೆ ಯೆಹೋವನಿಗೆ ಕಾಣಿಕೆಗಳನ್ನು ಅರ್ಪಿಸಿದರಾದರೂ, ದೇವರಿಗೆ ಪ್ರಥಮ ಹಾಗೂ ಅತ್ಯುತ್ತಮವಾದದ್ದನ್ನು ಅರ್ಪಿಸುವ ಮೂಲಕವಾಗಿ ಆತನನ್ನು ಘನಪಡಿಸಬೇಕೆಂದು ಹೇಬೆಲನನ್ನು ಪ್ರೇರಿಸಿದ ನಂಬಿಕೆಯು ಕಾಯಿನನ ನಂಬಿಕೆಗಿಂತ ಬಹಳಷ್ಟು ವ್ಯತ್ಯಾಸವಾಗಿತ್ತು, ಕಾಯಿನನು ಬಹುಶಃ ಪ್ರಥಮ ಹಾಗೂ ಅತ್ಯುತ್ತಮವಾದದ್ದನ್ನು ತನಗೋಸ್ಕರ ಇಟ್ಟುಕೊಳ್ಳುವದಕ್ಕೆ ಬಯಸಿದ್ದಿರಬಹುದು. ಕಾಯಿನನು ತನ್ನನ್ನೇ ಹೆಚ್ಚಿಸಿಕೊಳ್ಳುವವನಾಗಿದ್ದಲ್ಲಿ, ಆತನು ದೇವರನ್ನು ನಿಜವಾಗಿಯೂ ಘನಪಡಿಸುವವನಾಗಿರಲಿಲ್ಲ. ಮಾನವರಂತಲ್ಲದೆ, ದೇವರು ಮನುಷ್ಯನ ಕ್ರಿಯೆಗಳ ಹೊರಗಿನದ್ದನ್ನು ಗಮನಿಸುವದು ಮಾತ್ರವೇ ಅಲ್ಲ ಆದರೆ ವ್ಯಕ್ತಿಯ ಹೃದಯದ ಮನೋಭಾವಗಳನ್ನು ಬಲ್ಲವನಾಗಿರುತ್ತಾನೆ ಮತ್ತು ಆರಾಧನೆಯಲ್ಲಿ ಆತನಿಗಿರುವ ಉದ್ದೇಶಗಳನ್ನು ಸಹ ವಿವೇಚಿಸಿ ತಿಳಿಯುತ್ತಾನೆ. ಶಾಸ್ತ್ರಗಳೊಳಗೆ ಅನಂತರದಲ್ಲಿ, ತನ್ನನ್ನು ಮೆಚ್ಚಿಸುವದಕ್ಕೆ ಬಯಸುವ ಯಾವದೇ ಆರಾಧಕನಲ್ಲಿ ಯೆಹೋವನು ವಿಧೇಯತೆಯನ್ನು ಮತ್ತು ಯಥಾರ್ಥ ಹೃದಯವನ್ನು ಅಪೇಕ್ಷಿಸುತ್ತಾನೆಂಬುದಾಗಿ ಹೇಳಲಾಗಿರುತ್ತದೆ (ನೋಡಿರಿ 1 ಸಮುವೇಲ 15:22; ಹೋಶೇಯ 6:6; ಮೀಕ 6:8; ಮತ್ತಾಯ 5:24; 23:23).

ಕಾಯಿನನಿಗಾದ ಕೋಪವು ಆತನ ಹೃದಯದಲ್ಲಿನ ನಿಜವಾದ ಮನೋಭಾವದ ಕುರಿತಾಗಿ ಒಂದು ಸಂಗತಿಯನ್ನು ಬಯಲುಗೊಳಿಸುವದಾಗಿದೆ. ವಾಸ್ತವಿಕದಲ್ಲಿ, **ಇದರಿಂದ ಕಾಯಿನನು ಬಹು ಕೋಪಗೊಂಡನು** ಎಂದು ವಾಕ್ಯವು ಹೇಳುತ್ತದೆ, ಮತ್ತು "ಬಹು" (מְאֹד, *ಮೆಒದ)* ಎಂಬ ಪದವು ಆತನ ಭಾವಗಳ ತೀಕ್ಷ್ಣತೆಯನ್ನು ತಿಳಿಯಪಡಿಸುತ್ತದೆ; ಕಾಯಿನನು ಕೋಪದಿಂದ ಬಹಳವಾಗಿ ಉರಿಯುತ್ತಿದ್ದನು. ಇದೇ ರೀತಿಯ ಇಬ್ರಿಯ ವಾಕ್ಯರಚನೆಯ ಆದಿಕಾಂಡ 34:7ರಲ್ಲಿ ಸಿಕ್ಕುತ್ತದೆ, ಅದು ಶೆಕೆಮನ ಕೈಗಳಲ್ಲಿ ತಮ್ಮ ತಂಗಿಯಾದ ದೀನಳು ಲೈಂಗಿಕ ಅತ್ಯಾಚಾರಕ್ಕೊಳಗಾದ ಸುದ್ಧಿಯನ್ನು ಕೇಳಿದಾದ ಯಾಕೋಬನ ಪುತ್ರರಲ್ಲುಂಟಾದ ಕೋಪವನ್ನು ಬಣ್ಣಿಸುತ್ತದೆ. ಈ ವಿಧವಾದ ಕೋಪವು ನಿಯಂತ್ರಣದಲ್ಲಿ ಇರಿಸಿಕೊಳ್ಳದಿದ್ದಲ್ಲಿ, ಈ ಎರಡೂ ಕಥನಗಳಲ್ಲಾದ ಪ್ರಕಾರವೇ ಕೊಲೆ ಮಾಡುವಷ್ಟರ ಮಟ್ಟಿಗೆ ನಡಿಸಬಲ್ಲದು.

ಕಾಯಿನನ ಕೋಪದ ಜೊತೆಯಲ್ಲಿ, **ಅವನ ಮುಖವು ಕಳೆಗುಂದಿತು** ಎಂದು ವಾಕ್ಯವು ಹೇಳುತ್ತದೆ, ಅದು ಅಕ್ಷರಶಃ "ಮುಖವು ಬಾಡಿತು," ಅಥವಾ ಆತನ ಮುಖವು ದುಃಖ ಹಾಗೂ ಹತಾಶೆಯ ನೋಟದಿಂದ ನಿರಾಶೆಗೊಂಡಿತು ಎಂದು ಅರ್ಥವನ್ನು ನೀಡುತ್ತದೆ (ನೋಡಿರಿ ಯೋಬನು 29:24). ಈ ಸ್ಥಿತಿಯಲ್ಲಿ, ಕಾಯಿನನು ಒಂದು ಅಪಾಯಕಾರಿ ಪ್ರಕೃತಿಯಲ್ಲಿದ್ದನು, ಅದು ದೇವರಿಗೆ ಬಹಳ ಚೆನ್ನಾಗಿ ಗೊತ್ತಿತ್ತು.

ಹೊಸ ಒಡಂಬಡಿಕೆಯಲ್ಲಿ, ಕಾಯಿನನು ತನ್ನ ಸಹೋದರರನ್ನು ದ್ವೇಷಿಸಿ ಅವನನ್ನು ಕೊಲೆ ಮಾಡಿದವನಾದ್ದರಿಂದ "ಕುಡುಕನು" (ಸೈತಾನನು) ಎಂದು ಹೇಳಲ್ಪಟ್ಟಿದ್ದಾನೆ. ಅಂಥ ಕೃತ್ಯಕ್ಕೆ

ಕಾರಣವು ಏನೆಂದರೆ ಕಾಯಿನನ "ಕೃತ್ಯಗಳು ಕೆಟ್ಟವುಗಳೂ ತನ್ನ ತಮ್ಮನ ಕೃತ್ಯಗಳು ನೀತಿಗೆ ಸರಿಯಾದವುಗಳೂ ಆಗಿದ್ದದರಿಂದಲೇ" (1 ಯೋಹಾನ 3:11-15). ಕೊಲೆಯು ಕಾಯಿನನ ಪಾಪದ ಆರಂಭವಾಗಿರಲಿಲ್ಲ; ಆತನ "ಕೃತ್ಯಗಳು ಕೆಟ್ಟವುಗಳು" ಆಗಿದ್ದವಾದ್ದರಿಂದ ಆತನು ಹೇಬೆಲನನ್ನು ಕೊಂದನು. ತನ್ನ ತಮ್ಮನ ಕಡೆಗೆ ಹೊಂದಿದ್ದ ದ್ವೇಷ ಮತ್ತು ಹೊಟ್ಟೆಕಿಚ್ಚುಗಳು ಆದಿಕಾಂಡ 4:8ರಲ್ಲಿ ಬಣ್ಣಿಸಲಾಗಿರುವ ಘಟನೆಗಳಿಗೆ ಮುಂಚೆ ಇದ್ದವು. ಆದದರಿಂದ, ದೇವರು ಹೇಬೆಲ ಕಾಣಿಕೆಯನ್ನು ಅಂಗೀಕರಿಸಿಕೊಂಡಿದ್ದು ಮತ್ತು ಆತನು ಕಾಯಿನನ ಕಾಣಿಕೆಯನ್ನು ತಿರಸ್ಕರಿಸಿದ್ದು ಆತನ ಹೃದಯದಲ್ಲಿ ಸ್ವಲ್ಪ ಕಾಲದಿಂದ ಕುದಿಯುತ್ತಿದ್ದ ರೋಷಾಗ್ನಿಗೆ ಅಂತಿಮ ಕಿಡಿಯನ್ನು ಹೊತ್ತಿಕೊಳ್ಳುವಂತೆ ಮಾಡಿತ್ತು. ಅದು ಅವನ ತಮ್ಮನ ಕೊಲೆಯಲ್ಲಿ ಫಲಿತಗೊಂಡಿತ್ತು.

**ವಚನ 6. ಯೆಹೋವನು ಅವನಿಗೆ - ಯಾಕೆ ಕೋಪಿಸಿಕೊಂಡಿ? ನಿನ್ನ ತಲೆ ಯಾಕೆ ಬೊಗ್ಗಿತು?** ದೇವರು ಆದಿಕಾಂಡ 3:9-13ರಲ್ಲಿ ಆದಾಮ ಮತ್ತು ಹವ್ವಳರ ವಿಷಯದಲ್ಲಿ ಮಾಡಿದ್ದ ಪ್ರಕಾರವೇ, ಕಾಯಿನನಿಗೆ ಪ್ರಶ್ನೆಗಳನ್ನು ಕೇಳುವ ವೇಳೆ ತಾಳ್ಮೆ ಹಾಗೂ ಪ್ರೀತಿಯನ್ನು ತೋರ್ಪಡಿಸಿದ್ದನು. ಪುನಃ, ಯೆಹೋವನ ಪ್ರಶ್ನೆಗಳು ತನಗೆ ಮಾಹಿತಿಗಳನ್ನು ಪಡೆದುಕೊಳ್ಳಬೇಕೆಂಬ ಉದ್ದೇಶಕ್ಕಾಗಿ ಆಗಿರಲಿಲ್ಲ ಯಾಕೆಂದರೆ ಕಾಯಿನನು ಏಕೆ "ಕೋಪಿಸಿಕೊಂಡಿದ್ದಾನೆ" ಮತ್ತು ಆತನ "ತಲೆ ಏಕೆ ತಗ್ಗಿಸಲ್ಪಟ್ಟಿ[ತ್ತು]" ಎಂಬುದನ್ನು ಆತನು ನಿಖರವಾಗಿ ಬಲ್ಲವನಾಗಿದ್ದನು. ಕಾಯಿನನು ತನ್ನ ಹೃದಯದ ಮನೋಭಾವವನ್ನು ಪರೀಕ್ಷಿಸಿಕೊಳ್ಳಬೇಕೆಂಬುದು ದೇವರ ಬಯಕೆಯಾಗಿತ್ತು. ಅಪರಾಧವನ್ನು ಒಪ್ಪಿಕೊಳ್ಳುವಿಕೆಯು ಪಶ್ಚಾತ್ತಾಪಕ್ಕೆ ನಡಿಸಿರಬಹುದಾಗಿತ್ತು. ಖಂಡಿತವಾಗಿಯೂ, ಅಣ್ಣನು ತನ್ನ ಒಡಹುಟ್ಟಿದ ತಮ್ಮನ ಕಡೆಗಿರುವ ಹೊಟ್ಟೆಕಿಚ್ಚು ಹಾಗೂ ದೇವರ ಕಡೆಗಿರುವ ಹಗೆತನವನ್ನು ಸರಿಪಡಿಸಿಕೊಳ್ಳದಿದ್ದರೆ, ಅದು ಅವನನ್ನು ಇನ್ನು ಹೆಚ್ಚಾದ ಪಾಪದ ಕಡೆಗೆ ನಡಿಸುವದು ಎಂಬುದು ಯೆಹೋವನಿಗೆ ಗೊತ್ತಿತ್ತು: ತನ್ನ ತಮ್ಮನ ಕೊಲೆಯಂತಹ ಪಾಪ. ಹೇಗೂ, ಆತನ ತಂದೆತಾಯಿಗಳ ವಿಷಯದಲ್ಲಿ ನಡೆದ ಪ್ರಕಾರವೇ, ಕಾಯಿನನ ವಿಷಯದಲ್ಲಿಯೂ ನಡೆದಿತ್ತು: ಪಾಪದ ಅರಿಕೆಯನ್ನಾಗಿ ಮಾಡಲಿಲ್ಲ ಅಥವಾ ಹೃದಯದ ಬದಲಾವಣೆಯು ನಡೆಯಲಿಲ್ಲ; ಕೋಪದಿಂದ ಕಾಯಿನನು ಮುನಿಸಿನಿಂದ ಮೌನವಾಗಿದ್ದನು ಮತ್ತು ದೇವರ ಪ್ರಶ್ನೆಗಳಿಗೆ ಯಾವದೇ ಉತ್ತರವನ್ನು ನೀಡಲಿಲ್ಲ.

**ವಚನ 7.** ಈ ವಚನವು ಹಲವಾರು ಕಠಿಣವಾದ ವ್ಯಾಕರಣಾತ್ಮಕ ಪ್ರಶ್ನೆಗಳನ್ನು ಮುಂದಿಡುತ್ತದೆ. ಕ್ರಿ.ಪೂ. 250ರಷ್ಟು ಆರಂಭದಲ್ಲಿ, LXXನ ಅನುವಾದದ ವಿಷಯದಲ್ಲಿ, ಕೆಲವರು ಅದನ್ನು ಪರಿಷ್ಕರಿಸಿ ಬರೆದಿದ್ದರು; ಮತ್ತು ಈ ಅಭ್ಯಾಸವು ಈಗಿನ ವರೆಗೂ ಮುಂದುವರೆದಿರುತ್ತದೆ. ಸಮಸ್ಯೆಯ ತಾಂತ್ರಿಕತೆಗಳ ಕುರಿತು ಚರ್ಚೆ ಮಾಡುವದು ಈ ವ್ಯಾಖ್ಯಾಣ ಗ್ರಂಥದ ವ್ಯಾಪ್ತಿಯನ್ನು ಮೀರಿದ್ದಾಗಿರುತ್ತದೆ. ಹೀಗಿರುವದರಿಂದ, NASBಯು ವಾಕ್ಯಭಾಗವನ್ನು ಅನುವಾದಿಸಿರುವದು ದೇವರು ಕಾಯಿನನಿಗೆ ನೀಡಿದ ಹೇಳಿಕೆಯನ್ನು ಕುರಿತಾಗಿ ಲೇಖಕನ ಮೂಲ ಇಂಗಿತಕ್ಕೆ ಬಹಳ ನಿಕಟವಾಗಿರುವದಾಗಿ ಕಾಣಿಸುತ್ತದೆ: **ಒಳ್ಳೇ ಕೆಲಸ ಮಾಡಿದರೆ ನಿನ್ನ ತಲೆ ಎತ್ತಲ್ಪಡುವದಲ್ಲವೇ.** 7ನೇ ವಚನದಲ್ಲಿ "ನಿನ್ನ ತಲೆ" ಎಂಬುದು ಕಾಣಿಸಿಕೊಳ್ಳುವದಿಲ್ಲವಾದರೂ, ಅದು ಅಲ್ಲಿ ಪರೋಕ್ಷವಾಗಿ ಸೂಚಿಸಲ್ಪಡತಕ್ಕದ್ದೆಂಬುದು ಪರಿಪೂರ್ಣ ಅರ್ಥವನ್ನು ಕಲ್ಪಿಸುವದಾಗಿದೆ, ಯಾಕೆಂದರೆ ಅದು 5 ಮತ್ತು 6 ವಚನಗಳಲ್ಲಿ ಕಾಯಿನನ ಕಳೆಗುಂದಿತ ಮುಖವನ್ನು ಹಿಮ್ಮೇಗಗೊಳಿಸುತ್ತದೆ. ಕಾಯಿನನು ಸರಿಯಾದದ್ದನ್ನು ಮಾಡಿ ಒಳ್ಳೇ ಮನೋಭಾವವನ್ನು ಹೊಂದಿರುವದಕ್ಕೆ ಶಕ್ತನಾಗಿದ್ದಲ್ಲಿ, ಆತನ ತಲೆಯು

ಎತ್ತಲ್ಪಟ್ಟಿರುತ್ತಿತ್ತು, ಅದು ಯೆಹೋವನ ಮುಂದೆ ಅವಮಾನ ಅಥವಾ ಖಂಡನೆಯಿಲ್ಲದ ಒಂದು ಒಳ್ಳೇ ಮನಸ್ಸಾಕ್ಷಿ ಇರುವದರೊಂದಿಗೆ ಸಂಬಂಧ ಹೊಂದಿದೆ.

ದೇವರು **ಪಾಪದ** ವಿಷಯವಾಗಿ ಕಾಯಿನನನ್ನು ಎಚ್ಚರಿಸಿದನು, ಅದನ್ನು **ಬಾಗಿಲಲ್ಲಿ ಹೊಂಚಿಕೊಂಡಿರುವದು**, ಆತನನ್ನು ವಶಪಡಿಸಿಕೊಳ್ಳಲು ಕಾದು ಕುಳಿತಿದೆ ಎಂಬುದಾಗಿ ವ್ಯಕ್ತೀಕರಣಗೊಳಿಸಲಾಗಿರುತ್ತದೆ. "ಹೊಂಚುಹಾಕಿಕೊಂಡಿರುವದು" (רֹבֵץ, *ಆರಾಬಟ್ಸ*),[11] ಅಥವಾ "ಸುಳಿದಾಡುತ್ತಿರುವದು" (NRSV) ಎಂಬಂತಹ ಕೆಲಸವನ್ನು ಕಾಡು ಪ್ರಾಣಿಯು ತನ್ನ ಬೇಟೆ ಪ್ರಾಣಿಯ ಮೇಲೆ ಎಗರಿ ನುಂಗುವದಕ್ಕೆ ಮುಂಚೆ ಮಾಡುವದಾಗಿದೆ. ಪಾಪವು ಕಾಯಿನನ ಮೇಲೆ ಆಶೆ ಪಟ್ಟಾಗ್ಯೂ, ಆತನು ಅದನ್ನು ವಿರೋಧಿಸಬೇಕಾಗಿತ್ತು. ಆತನು **ಅದನ್ನು ವಶಮಾಡಿಕೊಳ್ಳಬೇಕು** ಎಂದು ದೇವರು ಅವನಿಗೆ ಮುನ್ನೆಚ್ಚರಿಕೆ ನೀಡಿದನು. ಕಾಯಿನನ ತನ್ನ ತಮ್ಮನನ್ನು ಕೊಲೆಮಾಡಬೇಕೆಂದು ಪೂರ್ವನಿರ್ಧಾರವನ್ನು ಮಾಡಿಕೊಂಡವನಾಗಿರಲಿಲ್ಲ, ಯಾಕೆಂದರೆ ಆತನಿಗೆ ಸ್ವೇಚ್ಛಾ-ಚಿತ್ತವಿತ್ತು ಮತ್ತು ಆತನು ತನ್ನ ಈಗಿನ ದಾರಿಯಲ್ಲಿ ಇರಬೇಕೋ ಅಥವಾ ಬೇಡವೋ ಎಂಬುದನ್ನು ಆಯ್ಕೆ ಮಾಡಿಕೊಳ್ಳಲು ಅವನಿಗೆ ಸ್ವಾತಂತ್ರ್ಯವಿತ್ತು. ತನಗೆ ಬೇರೆ ಯಾವ ಆಯ್ಕೆಯು ಇರುವದೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಆತನು ಸಂಪೂರ್ಣ ಭ್ರಷ್ಟಗೊಂಡವನಾಗಲಿ ಅಥವಾ ಪಾಪದ - ಭಾದ್ಯವಾಗಿ ಹೊಂದಿದ್ದಾಗಿರಬಹುದು ಅಥವಾ ವಾಸ್ತವಿಕವಾದ ಪಾಪವಾಗಿರಬಹುದು – ದಾಸತ್ವದಲ್ಲಿ ಬಹಳ ಆಳದಲ್ಲಿ ಸಿಲುಕಿಕೊಂಡವನಾಗಲಿ ಆಗಿರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಆತನ ಮುಂದೆ ಎರಡು ಪರ್ಯಾಯಗಳ ನಡುವೆ ಆಯ್ಕೆಯೊಂದಿತ್ತು ಮತ್ತು ಸರಿಯಾದದ್ದನ್ನು ಆರಿಸಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದನು: ಅವಿಧೇಯತೆಯಲ್ಲಿ ಉಳಿದವನಾಗಿ ದೇವರ ಕಡೆಗೂ ತನ್ನ ತಮ್ಮನ ಕಡೆಗೂ ಕೆಟ್ಟ ಮನೋಭಾವವೊಂದನ್ನು ಇಟ್ಟುಕೊಳ್ಳುವದರ ಬದಲಾಗಿ ಯೆಹೋವನಿಗೆ ಹೃದಯಪೂರ್ವಕ ವಿಧೇಯತೆಯನ್ನು ತೋರಿಸಬಹುದಿತ್ತು. ಕಾಯಿನನು ಒಳ್ಳೇದನ್ನು ಮಾಡುವದರ ಮೂಲಕ ಪ್ರತಿಕ್ರಿಯೆ ತೋರಿಸುವದಕ್ಕೆ ಅಶಕ್ತನಾಗಿದ್ದಲ್ಲಿ, "ನೀನು ಒಳ್ಳೇ ಕೆಲಸ ಮಾಡಿದರೆ" ಎಂಬ ಯೆಹೋವನ ಹೇಳಿಕೆಯು ಅರ್ಥಹೀನವಾಗಿರುತ್ತಿತ್ತು. ಅಷ್ಟುಮಾತ್ರವಲ್ಲದೆ, ಪಾಪವನ್ನು ವಿರೋಧಿಸುವದರಲ್ಲಿ ಕಾಯಿನನಿಗಿರುವ ಜವಾಬ್ದಾರಿಯ ಮೇಲೆ ಒತ್ತು ಕೊಡಲ್ಪಟ್ಟಿರುವ ದೇವರ ಆದೇಶದ ಆರಂಭದಲ್ಲಿ ಬಳಸಲಾಗಿರುವ ಒತ್ತಿ ಹೇಳಲಾಗಿರುವ ಸರ್ವನಾಮದಿಂದ ಸ್ಪಷ್ಟಗೊಳ್ಳುತ್ತದೆ. ಇಬ್ರಿಯ ವಾಕ್ಯವು ಅಕ್ಷರಶಃ ಹೀಗೆ ಹೇಳುತ್ತದೆ, "... ನೀನು, ನೀನು ಅದನ್ನು ವಶಮಾಡಿಕೊಳ್ಳಬೇಕು."

## ಕಾಯಿನನು ತನ್ನ ತಮ್ಮನಾದ ಹೇಬೆಲನನ್ನು ಕೊಲ್ಲುವದು (4:8-16)

**8ತರುವಾಯ ಕಾಯಿನನು ತನ್ನ ತಮ್ಮನಾದ ಹೇಬೆಲನಿಗೆ - ಅಡವಿಗೆ ಹೋಗೋಣ ಬಾ ಎಂದನು. ಅಡವಿಗೆ ಬಂದಾಗ ಕಾಯಿನನು ತನ್ನ ತಮ್ಮನ ಮೇಲೆ ಬಿದ್ದು ಅವನನ್ನು ಕೊಂದನು.**
**9ಯೆಹೋವನು ಕಾಯಿನನನ್ನು - ನಿನ್ನ ತಮ್ಮನಾದ ಹೇಬೆಲನು ಎಲ್ಲಿ ಎಂದು ಕೇಳಲು ಅವನು - ನಾನರಿಯೆ; ನನ್ನ ತಮ್ಮನನ್ನು ಕಾಯುವವನು ನಾನೋ ಎಂದು ಉತ್ತರಕೊಟ್ಟನು. 10ಅದಕ್ಕೆ ಯೆಹೋವನು - ನೀನು ಏನು ಮಾಡಿದಿ? ನಿನ್ನ ತಮ್ಮನ ರಕ್ತವು ಭೂಮಿಯ ಕಡೆಯಿಂದ ನನ್ನನ್ನು ಕೂಗುತ್ತದೆ, ಕೇಳು. 11ನೀನು ಸುರಿಸಿದ ನಿನ್ನ ತಮ್ಮನ ರಕ್ತವನ್ನು ಕುಡಿದ ಈ ಭೂಮಿಯನ್ನು ಬಿಟ್ಟುಹೋಗಬೇಕೆಂದು ನಿನಗೆ ಶಾಪ ಬಂತು. 12ನೀನು ಭೂಮಿಯನ್ನು ವ್ಯವಸಾಯ ಮಾಡಿದರೂ ಇದು ಇನ್ನು ಮುಂದೆ ನಿನಗೆ ಫಲಿಸುವದಿಲ್ಲ. ನೀನು ಭೂಲೋಕದಲ್ಲಿ ಅಲೆಯುವವನೂ ದೇಶಭ್ರಷ್ಟನೂ ಆಗಿರುವಿ ಅಂದನು. 13ಕಾಯಿನನು ಯೆಹೋವನಿಗೆ - ನನ್ನ ಅಪರಾಧಫಲ**

**ತಾಳಕೂಡದಷ್ಟಾಗಿದೆ. [14]ನೀನು ಈ ಹೊತ್ತು ನನ್ನನ್ನು ಸ್ವದೇಶದಿಂದ ಹೊರಡಿಸುತ್ತೀಯಲ್ಲಾ; ನಿನ್ನ ಸಾನ್ನಿಧ್ಯವು ತಪ್ಪಿತು; ನಾನು ಲೋಕದಲ್ಲಿ ಅಲೆಯುವವನೂ ದೇಶಭ್ರಷ್ಟನೂ ಆಗಬೇಕಾಯಿತು. ಇದಲ್ಲದೆ ನನ್ನನ್ನು ಕಂಡವರು ಕೊಲ್ಲುವರು ಎಂದು ಹೇಳಿದನು. [15]ಅದಕ್ಕೆ ಯೆಹೋವನು - ಕಾಯಿನನ ಪ್ರಾಣವನ್ನು ತೆಗೆದವನಿಗೆ ಏಳರಷ್ಟು ಪ್ರತಿದಂಡನೆಯಾಗುವದು ಎಂದು ಹೇಳಿ ಅವನನ್ನು ಕಂಡವರು ಕೊಲ್ಲಕೂಡದಂತೆ ಅವನ ಮೇಲೆ ಒಂದು ಗುರುತಿಟ್ಟನು. [16]ಕಾಯಿನನು ಯೆಹೋವನ ಸನ್ನಿಧಾನದಿಂದ ಹೊರಟು ನೋದು ಎಂಬ ದೇಶದಲ್ಲಿ ವಾಸಿಸಿದನು; ಅದು ಏದೆನ್ ಸೀಮೆಗೆ ಮೂಡಲಲ್ಲಿರುವದು.**

**ವಚನ 8.** ದೇವರು ಎಚ್ಚರಿಕೆಯನ್ನು ಕೊಟ್ಟಿದ್ದಾಗ್ಯೂ, ಕಾಯಿನನು ತನ್ನ ದ್ವೇಷವು ಪಾಪಕ್ಕೆ ಇನ್ನಷ್ಟು ಹತ್ತಿರವಾಗಿ ನಡಿಸುವಂತೆ ಅವಕಾಶ ಕೊಟ್ಟನು. ಕಾಯಿನನಿಗಿದ್ದ ರೌದ್ರದ ಪ್ರಕೃತಿ ಮತ್ತು ಆತನ ಆರಾಧನೆಯು ಏಕೆ ತಿರಸ್ಕರಿಸಲ್ಪಟ್ಟಿತು ಮತ್ತು ಆತನ ತಮ್ಮನ ಆರಾಧನೆಯು ಏಕೆ ಅಂಗೀಕರಿಸಿಕೊಳ್ಳಲ್ಪಟ್ಟಿತು ಎಂಬುದರ ಬಗ್ಗೆ ದೇವರು ನೀಡಿದ ವಿವರಣೆಯನ್ನು ಒಪ್ಪಿಕೊಳ್ಳಲು ಅವನು ವಿಫಲವಾಗಿದ್ದನ್ನು ನೋಡುವಾಗ, ಆತನು ಕೋಪಾಗ್ನಿಯಾಗಿ ಉಕ್ಕಿ ಹರಿಯುವ ತನಕ ತನ್ನ ಹೊಟ್ಟೆಕಿಚ್ಚಿನಿಂದ ಕುದಿಯುತ್ತಿದ್ದಿರಬಹುದಾಗಿದೆ.

8ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, **ತರುವಾಯ ಕಾಯಿನನು ತನ್ನ ತಮ್ಮನಾದ ಹೇಬೆಲನಿಗೆ**. ಕಾಯಿನನು ಹೇಬೆಲನಿಗೆ ಏನು ಹೇಳಿದನೆಂಬುದಾಗಿ ಇಬ್ರಿಯ ವಾಕ್ಯವು ಯಾವದೇ ಸುಳಿವು ನೀಡುವದಿಲ್ಲ. LXX ಮತ್ತು ಇತರ ಆರಂಭಿಕ ಆವೃತ್ತಿಗಳನ್ನಾಧರಿಸಿ, NIVಯು ಹೀಗೆ ಸೇರ್ಪಡೆಗೊಳಿಸುತ್ತದೆ, "ನಾವು ಅಡವಿಗೆ ಹೋಗೋಣ ಬಾ"; ಆದರೆ ಈ ಮಾತುಗಳು ಕೇವಲ ಊಹಾತ್ಮಕವಾಗಿಯಷ್ಟೆ. ಕಾಯಿನನು ಹೇಬೆಲನನ್ನು ಮರಳುಗೊಳಿಸಿ ಅಡವಿಗೆ ಬರುವಂತೆ ಮಾಡಿದನೋ ಅಥವಾ ಆತನು ಮನೆಯಲ್ಲಿ ಆರಂಭಗೊಂಡು ಅನಂತರದಲ್ಲಿ **ಅಡವಿಯ** ವರೆಗೂ ಮುಂದುವರೆದಂಥ ಒಂದು ತೀಕ್ಷ್ಣ ವಾಗ್ವಾದದಲ್ಲಿ ತೊಡಗಿಸಿಕೊಂಡನೋ ಎಂಬುದು ನಮಗೆ ಹೇಳಲ್ಪಟ್ಟಿಲ್ಲ. ವಾಕ್ಯವು **ಕಾಯಿನನು ತನ್ನ ತಮ್ಮನ ಮೇಲೆ ಬಿದ್ದು ಅವನನ್ನು ಕೊಂದನು** ಎಂದಷ್ಟೆ ಹೇಳುತ್ತದೆ. "ಕೊಂದನು" ಎಂಬುದಕ್ಕಾಗಿರುವ ಇಬ್ರಿಯ ಪದವು הָרַג *(ಹಾರಾಗ),* ಅದು ಸಾಮಾನ್ಯವಾಗಿ ಹಿಂಸಾತ್ಮಕವಾದ, ಉದ್ದೇಶಪೂರ್ವಕ ಕೊಲೆಯನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತದೆ, ಲೇವಿ ಮತ್ತು ಸಿಮೆಯೋನನು ಸೇರಿಕೊಂಡು ಶೆಕೆಮನ ಜನರನ್ನು ಕೊಂದ ರೀತಿಯಲ್ಲಿಯೇ (ಆದಿಕಾಂಡ 34:25, 26) ಅಥವಾ ಈಜಬೇಲಳು ಯೆಹೋವನ ಪ್ರವಾದಿಗಳನ್ನು ಕೊಂದ ಹಾಗೆಯೇ (1 ಅರಸು 18:13).

**ವಚನ 9.** ಮತ್ತೊಂದಾವರ್ತಿ, **ಯೆಹೋವನು ಕಾಯಿನನ್ನು** ಒಂದ ಪ್ರಶ್ನೆ ಕೇಳಿದನು: **ನಿನ್ನ ತಮ್ಮನಾದ ಹೇಬೆಲನು ಎಲ್ಲಿ.** ಆದಾಮನು ದೋಷವನ್ನು ಬೇರೊಬ್ಬರ ಮೇಲೆ ಹಾಕುವದಕ್ಕೆ ಪ್ರಯತ್ನಿಸಿದ ಬಳಿಕ, ತನ್ನ ಪಾಪದ ಕುರಿತಾಗಿ ಮನಸ್ಸಿಲ್ಲದೆ ಒಪ್ಪಿಕೊಂಡಿದ್ದನು. ಹೇಗೂ, ಕಾಯಿನನು ಸುಳ್ಳಾಡುವ ಮೂಲಕ, ದೇವರ ಪ್ರಶ್ನೆಗೆ ನೆಪವನ್ನು ಹೇಳಿ ತಾನೇ ಪ್ರಶ್ನೆಯನ್ನು ಕೇಳಿಕೊಳ್ಳುವ ಮುಖಾಂತರ ತನ್ನ ತಮ್ಮನಿಗಾಗಿ ಯಾವದೇ ಜವಾಬ್ದಾರಿ ತೆಗೆದುಕೊಳ್ಳಲು ನಿರಾಕರಿಸುವವನಾಗಿ ತನ್ನ ಅಪರಾಧಕ್ಕೆ ಮತ್ತಷ್ಟು ಸೇರಿಸಿಕೊಂಡನು: ನಾನರಿಯೆ; ನನ್ನ ತಮ್ಮನನ್ನು ಕಾಯುವವನು ನಾನೋ.

ಕಾಯಿನನು "ಇಲ್ಲ" ಎಂಬ ಉತ್ತರವನ್ನು ಎದುರುನೋಡುವವನಾಗಿ, ಒಂದು ಭಾವೋತ್ತೇಜಕ ಪ್ರಶ್ನೆಯನ್ನು ಸಹ ಕೇಳಿದನು. "ಕಾಯುವವನು" (שֹׁמֵר, *ಶಾಮಾರ)* ಎಂಬ ಪದವನ್ನು ಬಳಸುವ ಮೂಲಕ, ಕಾಯಿನನು ತನ್ನ ಸಹೋದರನಿಗೋಸ್ಕರ ಯಾವದೇ

ಕಳಕಳಿಯನ್ನು ಅಥವಾ ಜವಾಬ್ದಾರಿಯನ್ನು ವಹಿಸಿಕೊಳ್ಳಲು ನಿರಾಕರಿಸಿದನು. "ಕಾಯುವುದು" ಎಂಬ ಮಾತು ಬೈಬಲಿನಲ್ಲಿ ಆರೈಕೆ, ಸಂರಕ್ಷಣೆ, ಪೋಷಣೆ, ನಿಯಂತ್ರಣ, ನಡಿಸಿಕೊಂಡು ಹೋಗುವದು, ಮತ್ತು ಸ್ವತ್ತು, ಪ್ರಾಣಿಗಳು, ಹಾಗೂ ಜನರ ಮೇಲೆ, ಸನ್ನಿವೇಶಕ್ಕನುಗುಣವಾಗಿ ಅಧಿಕಾರ ಪ್ರಯೋಗಿಸುವಿಕೆಯನ್ನು ಒಳಗೊಂಡಿರುತ್ತದೆ (3:24ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).[12] ಖಂಡಿತವಾಗಿಯೂ, ದೇವರು ತನ್ನ ಜನರನ್ನು ಕಾಯುವ ಮಹಾನ್ ಕಾವಲುಗಾರನು, ಆತನು ಎಂದಿಗೂ ತೂಕಡಿಸುವದೂ ಇಲ್ಲ ನಿದ್ರಿಸುವದೂ ಇಲ್ಲ (ಕೀರ್ತನೆ 121:4-8). ಹೆತ್ತವರು ಸ್ವಾಭಾವಿಕವಾಗಿಯೇ ತಮ್ಮ ಮಕ್ಕಳನ್ನು ಆರೈಕೆ ಮಾಡುವರು ಮತ್ತು ಅವರನ್ನು ಅಪಾಯದಿಂದ ತಪ್ಪಿಸಿ ಕಾಪಾಡುತ್ತಾರೆ. ಅಣ್ಣಂದಿರು, ಅದೇ ರೀತಿಯಲ್ಲಿಯೇ ಅವರ ತಮ್ಮಂದಿರಿಗಾಗಿ ಕಾಳಜಿ ಮಾಡುವರು. ಹಾಗಿದ್ದರೂ ಕಾಯಿನನಿಗೆ ಇದ್ಯಾವದೂ ಬೇಕಾಗಿರಲಿಲ್ಲ; ಹೇಬೆಲನು ಎಲ್ಲಿದ್ದಾನೆ ಮತ್ತು ಆತನು ಹೇಗಿದ್ದಾನೆ ಎಂಬುದರ ವಿಷಯಕ್ಕೆ ಬಂದಾಗ ಕಾಯಿನನಲ್ಲಿ ಯಾವದೇ ಸ್ವಾಭಾವಿಕ ಮಮತೆಯು ಇರಲಿಲ್ಲ. ಆದದರಿಂದ, ದೇವರು ಅವನನ್ನು ಆತನ ತಮ್ಮನು ಎಲ್ಲಿದ್ದಾನೆಂದು ಪ್ರಶ್ನಿಸಿದಾಗ, ಆತನು ಸುಳ್ಳು ಹೇಳಿದ್ದನು. ಆತನು ನೆಪಗಳನ್ನು ಹೇಳಿದ್ದನು ಮತ್ತು ಹೇಬೆಲನ ಬಗ್ಗೆ ಅಸಡ್ಡೆ ಹೊಂದಿದ್ದನು.

**ವಚನ 10.** ದೇವರು ಒಂದು ಉತ್ತರವನ್ನು ಕೊಡುವ ಮೂಲಕ ಕಾಯಿನನ ಪ್ರಶ್ನೆಗೆ ಘನತೆಯನ್ನು ಕೊಡಲಿಲ್ಲ, ಆದರೆ **ನೀನು ಏನು ಮಾಡಿದಿ?** ಎಂದು ಕೇಳುವ ಮೂಲಕ ಆತನ ಘೋರವಾದ ಕೃತ್ಯವನ್ನು ಕುರಿತು ಅವನನ್ನು ಗದರಿಸಿದ್ದನು. ಇದು ಒಂದು ಪ್ರಶ್ನೆಯ ರೂಪದಲ್ಲಿರುವದಾದರೂ, ವಾಸ್ತವಿಕದಲ್ಲಿ ಅದೊಂದು ಆರೋಪವಾಗಿರುತ್ತದೆ ಯಾಕೆಂದರೆ ದೇವರು ಮಾಹಿತಿಯನ್ನು ಕೊಡುವಂತೆ ಕೇಳುತ್ತಿರಲಿಲ್ಲ. ದೇವರು ಕಾಯಿನನಿಂದ ಮತ್ತೊಂದು ಹಾರಿಕೆಯ ಉತ್ತರವು ಬರುವ ತನಕ ಕಾಯಲಿಲ್ಲ, ಆದರೆ ಆತನ ಕೊಲೆಗೆ ಒಂದು ಸಾಕ್ಷಿಯಿರುತ್ತದೆಂಬುದನ್ನು ತಿಳಿಸುವ ಮೂಲಕ ಅವನಿಗೆ ಆಶ್ಚರ್ಯವುಂಟು ಮಾಡಿದನು: **ನಿನ್ನ ತಮ್ಮನ ರಕ್ತವು ಭೂಮಿಯ ಕಡೆಯಿಂದ ನನ್ನನ್ನು ಕೂಗುತ್ತದೆ, ಕೇಳು.** ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಬೆಲನ ವಿಷಯದಲ್ಲಿ ಇದೇ ರೀತಿಯ ವಿಷಯವೊಂದನ್ನು ದೃಢೀಕರಿಸುತ್ತಾ ಹೀಗೆ ಬರೆಯುತ್ತಾನೆ, "ಅವನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನೂ ಮಾತಾಡುತ್ತಾನೆ" (ಇಬ್ರಿಯ 11:4). ಭೂಮಿಯ ಮೇಲೆ ಚೆಲ್ಲಲ್ಪಟ್ಟ ಮಾನವ ರಕ್ತವು, ಕೊಲೆಗಾರನಿಗೆ ಶಿಕ್ಷೆಯಾಗಬೇಕು ಎಂಬುದಾಗಿ ಮಾತಾಡುವ ವಿಧದಲ್ಲಿ ಕೂಗುವದಾಗಿತ್ತು ಎಂದು ಪ್ರಾಚೀನ ಜನರು ನಂಬುತ್ತಿದ್ದರು.

ಇದೇ ರೀತಿಯ ಮಾತು ಯೋಬನ ದೇವರ ವಿರುದ್ಧವಾಗಿ ತಪ್ಪು ಗ್ರಹಿಕೆಯಿಂದ ಕೂಗುವದರಲ್ಲಿ ಕಂಡು ಬರುತ್ತದೆ,[13] ಆತನು ದೇವರನ್ನು ಕೊಲೆಗಾರನೆಂದು ಆರೋಪಿಸಿದ್ದನು: "ಭೂಮಿಯೇ, ನನ್ನ ರಕ್ತವನ್ನು ಮುಚ್ಚಬೇಡ! ನನ್ನ ಮೊರೆಗೆ ಬಿಡುವು ಸಿಕ್ಕದಿರಲಿ!" (ಯೋಬ 16:18). ಖಂಡಿತವಾಗಿಯೂ, ದೇವರು ಎಂಬುದಕ್ಕಿಂತಲೂ ಸೈತಾನನೇ ಯೋಬನಿಗೆ ಬಾಧೆಯನ್ನುಂಟು ಮಾಡಿದವನಾಗಿದ್ದನು ಎಂಬುದು ವಾಸ್ತವವಾಗಿತ್ತು; ಆದರೆ ಯೋಬನಿಗೆ ಅದನ್ನು ತಿಳಿಯುವದಕ್ಕೆ ಯಾವ ದಾರಿಯೂ ಇರಲಿಲ್ಲ, ಯಾಕೆಂದರೆ ದೇವರು ಅದನ್ನು ಆತನಿಗೆ ಬಯಲುಗೊಳಿಸಿರಲಿಲ್ಲ. ಹಾಗಿದ್ದರೂ, ಇದು ತೋರಿಸುವದೇನೆಂದರೆ, ಅತಿ ಆರಂಭಿಕ ಕಾಲಗಳಿಂದಲೂ ಒಬ್ಬ ಪ್ರಮಾಣಿಕ ನತದೃಷ್ಟನ ರಕ್ತವು ತನ್ನನ್ನು ಕೊಲೆ ಮಾಡಿದವನಿಗೆ ಪ್ರತೀಕಾರವಾಗಬೇಕೆಂದು ಕೂಗುತ್ತದೆ ಎಂಬ ನಂಬಿಕೆಯು ಜನರಲ್ಲಿತ್ತು. ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳಿದ್ದೇನೆಂದರೆ ಯೇಸುವಿನ ರಕ್ತವು "ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುವದು" ಎಂಬದೆ (ಇಬ್ರಿಯ 12:24). ಹೇಬೆಲನ ರಕ್ತವು ಕೇವಲ

ಪ್ರತೀಕಾರಕ್ಕಾಗಿ ಕೂಗುತ್ತಿತ್ತು; ಆದರೆ ಯೇಸುವಿನ ರಕ್ತವು ಎಲ್ಲಾ ಅನೀತಿವಂತರ ಪಾಪ ಹಾಗೂ ಅಪರಾಧಗಳಿಗೆ ಪ್ರಾಯಶ್ಚಿತ್ತವನ್ನು ಮಾಡುವದಾಗಿದೆ. ಅದು ಪ್ರತೀಕಾರದ ಬದಲಾಗಿ ಕ್ಷಮಾಪಣೆಯನ್ನು ಒದಗಿಸುತ್ತದೆ ಮತ್ತು ಆ ಮೂಲಕ ನಾಶನದಲ್ಲಿರುವವರಿಗೆ ಉತ್ತಮ ಸಂದೇಶವನ್ನು ಮಾತಾಡುವದಾಗಿದೆ.

**ವಚನ 11.** ಕಾಯಿನನು ತನ್ನ ಹೆತ್ತವರ ರೀತಿಯಲ್ಲಿಯೇ, ತಾನು ಮಾಡಿದ್ದ ಅಪರಾಧಕ್ಕಾಗಿ ಪಶ್ಚಾತ್ತಾಪವನ್ನು ಬಯಸಲಿಲ್ಲ ಮತ್ತು ಕ್ಷಮಿಸುವಂತೆ ಮನವಿಯನ್ನೂ ಮಾಡಲಿಲ್ಲ. ಕ್ರಿಯೆಗಳು ಪರಿಣಾಮಗಳನ್ನುಂಟು ಮಾಡುವವು ಎಂಬುದನ್ನು ಕಲಿತುಕೊಳ್ಳಬೇಕಾಯಿತು, ಮತ್ತು ಆತನು ತನ್ನ ತಮ್ಮನನ್ನು ಕೊಂದು ಶಿಕ್ಷೆಯ ಭಯವಿಲ್ಲದೆ ಇರುವದಕ್ಕೆ ಸಾಧ್ಯವಿರಲಿಲ್ಲ. ವಾಸ್ತವಿಕದಲ್ಲಿ, ಕಾಯಿನನ ದುಷ್ಕೃತ್ಯಕ್ಕಾಗಿ ದೇವರು ಅವನನ್ನು ಕೊಲ್ಲಲಿಲ್ಲ ಎಂಬುದಕ್ಕೆ ವಾಚಕನು ಆಶ್ಚರ್ಯಗೊಳ್ಳಬಹುದಾಗಿದೆ. ಖಂಡಿತವಾಗಿಯೂ, ಅನಂತರದಲ್ಲಿ ದೇವರು ಪೂರ್ವಾಲೋಚನೆಯಿಂದ ಕೊಲೆ ಮಾಡುವದಾದಲ್ಲಿ, ಅಪರಾಧಿಗೆ ಮರಣದಂಡನೆಯನ್ನು ವಿಧಿಸಬೇಕೆಂಬ ಪರಿಹಾರೋಪಾಯವನ್ನು ಕೊಡಲಿದ್ದನು (ಆದಿಕಾಂಡ 9:6; ವಿಮೋಚನಕಾಂಡ 21:12-14). ಹೇಗೂ, ಆದಾಮ ಮತ್ತು ಹವ್ವಳರಿಗೆ ಮರಣದಂಡನೆಯ ಬಗ್ಗೆ ಎಚ್ಚರಿಕೆ ಕೊಟ್ಟಿದ್ದ ಬಳಿಕವೂ ಅವರಿಗೆ ನೋವು ಮತ್ತು ಕಷ್ಟಗಳಿಂದ ಬದುಕುವದನ್ನು ಮುಂದುವರೆಸುವಂತೆ ಹೇಗೆ ಕೃಪೆಯಿಂದ ಅನುಮತಿಸಲಾಗಿತ್ತೋ, ಹಾಗೆಯೇ ಕಾಯಿನನ ದಂಡನೆಯ ವಿಷಯದಲ್ಲಿಯೂ ಆಗಿತ್ತು. ಆತನು ನಿಶ್ಚಯವಾಗಿಯೂ ಮರಣಕ್ಕೆ ಪಾತ್ರನಾಗಿದ್ದನು; ಆದಾಗ್ಯೂ ದೇವರು ಕೃಪೆಯು ಮೇಲುಗೈ ಸಾಧಿಸಿದ್ದರಿಂದಾತನು ಜೀವಿಸುವದನ್ನು ಮುಂದುವರೆಸುವಂತಾಗಿತ್ತು, ಹಾಗಿದ್ದರೂ ಅವನು ತನ್ನ ಬದುಕಿಗಾಗಿ ಯಾವುದರ ಮೇಲೆ ಅವಲಂಬಿತನಾಗಿದ್ದನೋ ಆ **ಭೂಮಿಯನ್ನು ಬಿಟ್ಟುಹೋಗಬೇಕೆಂದು ಶಾಪ ಬಂತು**. ಇದು **ನೀನು ಸುರಿಸಿದ ನಿನ್ನ ತಮ್ಮನ ರಕ್ತವನ್ನು** [ಬಾಯಿ ತೆರೆದು] **ಕುಡಿದ** ಭೂಮಿ.

**ವಚನ 12.** ಒಂದು ಅರ್ಥದಲ್ಲಿ, ಆತನ ಪಾದಗಳ ಕೆಳಗಿದ್ದ **ಭೂಮಿಯು** ಮರಣಿಸಿತ್ತು, ಹೀಗೆ **ಇದು ಇನ್ನು ಮುಂದೆ** ಅವನಿಗೆ **ಫಲಿಸುವದಿಲ್ಲ**. ಹಿಂದೊಮ್ಮೆ ಆತನು ಆನಂದಿಸಿದ್ದ ಭೂಮಿಯ ಫಲವತ್ತತೆಯನ್ನು ಇನ್ನು ಮೇಲೆ ಪುನಃ ಆನಂದಿಸದೆ ಇರುವವನಾಗಿದ್ದನು.

ಭೂಮಿಯ ವಿರುದ್ಧದ ನ್ಯಾಯತೀರ್ಪು ಕಾಯಿನನಿಗೆ ಸಂಬಂಧಿಸಿದ್ದ “ಎಲ್ಲವೂ” ಆಗಿತ್ತು. ಆತನು ಯೆಹೋವನಿಗೋಸ್ಕರ “ಹೊಲದ ಬೆಳೆಯಲ್ಲಿ” ಕೆಲವನ್ನು ತಂದು ಅರ್ಪಿಸಿದ್ದನು (4:3). ಆತನು ಮುಂಚೆ ಅನುಭವಿಸಿದ್ದನ್ನಾಗಲಿ ಅಥವಾ ಯಾವದನ್ನು ಮಾಡುವದರಲ್ಲಿ ನಿಸ್ಸೀಮನಾಗಿದ್ದನೋ ಅದನ್ನು ಈಗ ತನ್ನ ಜೀವಿತಕಾಲವೆಲ್ಲಾ ಮಾಡುವದಕ್ಕೆ ಶಕ್ತನಾಗಿರಲಿಲ್ಲ, ಯಾಕೆಂದರೆ ಆತನು “ಸ್ವದೇಶದಿಂದ ಹೊರಡಿಸಲ್ಪಟ್ಟಿದ್ದನು” (4:14).

ಆತನ ಪಾಪದ ನಿಮಿತ್ತವಾಗಿ, ಕಾಯಿನನು ಭೂಮಿಯಿಲ್ಲದವನು ಮತ್ತು ಮನೆಯಿಲ್ಲದವನು ಆಗಿ **ಭೂಲೋಕದಲ್ಲಿ ಅಲೆಯುವವನೂ ದೇಶಭ್ರಷ್ಟನೂ ಆಗಿರಲಿದ್ದನು**. ಆತನ ಅನುಭವವು ತಮ್ಮ ಅಪನಂಬಿಕೆ, ಅವಿಧೇಯತೆ, ಮತ್ತು ದೇವರ ವಿರುದ್ಧ ಬಂಡಾಯದ ಕಾರಣದಿಂದ ಅರಣ್ಯದಲ್ಲಿ ನಾಲ್ವತ್ತು ವರ್ಷಗಳ ಕಾಲ ಇಸ್ರಾಯೇಲ್ಯರು ಅಲೆದಾಡುವದಕ್ಕೆ ಒಂದು ಪೂರ್ವಸೂಚಕವಾಯಿತು (ಅರಣ್ಯಕಾಂಡ 14:33, 34; ಧರ್ಮೋಪದೇಶಕಾಂಡ 2:14, 15). ಕಾಯಿನನು ದೇಶದಿಂದ ಗಡಿಪಾರು ಮಾಡಲ್ಪಟ್ಟಿದ್ದು ಸಹ ಅನಂತರದಲ್ಲಿನ ಇಸ್ರಾಯೇಲ್ಯರ ಇತಿಹಾಸದಲ್ಲಿ ಸಾಮ್ಯತೆಯೊಂದನ್ನು ಹೊಂದಿತ್ತು, ಆಗ ದೇವರ ಜನರು ಒತ್ತಾಯದಿಂದ ಅವರ ದೇಶದಿಂದ ತೊಲಗಿಸಲ್ಪಟ್ಟು ಅವರ ನಿರಂತರವಾದ ಅನೈತಿಕತೆ ಹಾಗೂ ವಿಗ್ರಹಾರಾಧನೆಗಳ ಕಾರಣದಿಂದ ಸೆರೆಗೆ ಒಯ್ಯಲ್ಪಟ್ಟರು (ಯಾಜಕಕಾಂಡ 18:24-29;

26:31-35; ಧರ್ಮೋಪದೇಶಕಾಂಡ 28:63-65).

ಒಂದು ವಿಧದಲ್ಲಿ ಹೇಳುವದಾದರೆ, ಕಾಯಿನನು ತಾನೇ ಆರಿಸಿಕೊಂಡ ನರಕದಲ್ಲಿ ದಂಡನೆಯನ್ನು ಅನುಭವಿಸುವಂತೆ ತೀರ್ಪು ಪಡೆದುಕೊಂಡನು: ಆತನಿಗೆ ತನ್ನ ಕುಟುಂಬದೊಂದಿಗೆ ಸಮಾಧಾನದಲ್ಲಿ ಜೀವಿಸಲು ಆಗಿದಿದ್ದರೆ, ಆತನು ಅವರಿಲ್ಲದಂತೆ ಜೀವಿಸಬೇಕಾಗುವದು. ಆತನು ಸಮಾಜಕ್ಕೆ ಒಂದು ಅಪಾಯವಾದನು, ಆದ್ದರಿಂದ ಆತನು ಸಮಾಜದಿಂದ ಬೇರ್ಪಟ್ಟು ಜೀವಿಸಬೇಕಾಗಿತ್ತು. ಅದೇ ರೀತಿಯಲ್ಲಿಯೇ, ಕಾಯಿನನಿಗೆ ತನ್ನ ಜೀವಿತದಲ್ಲಿ ದೇವರು ಬೇಕಾಗಿರಲಿಲ್ಲವಾದ್ದರಿಂದ, ದೇವರು ಅವನಿಗೆ ತನ್ನೊಂದಿಗೆ ಆಗಲಿ ಅಥವಾ ತನ್ನ ಜನರೊಂದಿಗೆ ಆಗಲಿ ಅನ್ಯೋನ್ಯತೆಯಿಂದ ಜೀವಿಸುವಂತೆ ಒತ್ತಾಯ ಪಡಿಸಲಿಲ್ಲ. ಈ ಭಾವನೆಯು ಹೊಸ ಒಡಂಬಡಿಕೆಯಲ್ಲಿ ಮತ್ತುಷ್ಟು ಅಭಿವೃದ್ಧಿಗೊಳ್ಳುತ್ತಾ ಸಾಗುತ್ತದೆ: ಅಂತಿಮ ನ್ಯಾಯತೀರ್ಪಿನ ಬಳಿಕ, ದೇವರ ಪ್ರೀತಿಯನ್ನು ಮತ್ತು ಅನ್ಯೋನ್ಯತೆಯನ್ನು ತಿರಸ್ಕರಿಸುವವರು ಆತನ ಹಾಗೂ ವಿಮೋಚಿಸಲ್ಪಟ್ಟವರ ಸನ್ನಿಧಾನದಿಂದ ಯುಗಯುಗಾಂತರಗಳಿಗೂ ಹೊರಕ್ಕೆ ಹಾಕಲ್ಪಡುವರು (ಮತ್ತಾಯ 8:11, 12; 2 ಥೆಸಲೋನಿಕ 1:6-10).

**ವಚನಗಳು 13, 14. ಕಾಯಿನನು ಯೆಹೋವನಿಗೆ** ಪ್ರತ್ಯುತ್ತರ ಕೊಡುವವನಾಗಿ ಹೀಗೆ ಉದ್ಗಾರವೆತ್ತಿದನು, **ನನ್ನ ಅಪರಾಧಫಲ ತಾಳಕೂಡದಷ್ಟಾಗಿದೆ**. ಆತನ ಪ್ರತ್ಯುತ್ತರವು ಅವನ ತಮ್ಮನನ್ನು ಕೊಂದಕ್ಕಾಗಿ ಅವನಲ್ಲಿ ಯಾವದೇ ವಿಷಾದವನ್ನು ತೋರಿಸಲಿಲ್ಲ, ಆದರೆ ಕೇವಲ ತನಗಾಗಿ ವ್ಯಥೆ ಮತ್ತು ದೇವರ ಕಡೆಗೆ ಮುನಿಸು ಇವುಗಳನ್ನು ಮಾತ್ರವೇ ತೋರ್ಪಡಿಸಿತ್ತು. ತಾನು ಮಾಡಿದ ಪಾಪದ ಪರಿಣಾಮವಾಗಿ, ಈ ಹೊತ್ತು ನನ್ನನ್ನು ಸ್ವದೇಶದಿಂದ ಹೊರಡಿಸುತ್ತೀಯಲ್ಲಾ, ಇದು ನಾನು ಅನುಭವಿಸಬೇಕಾಗಿದ್ದದಕ್ಕಿಂತಲೂ ಅತ್ಯಧಿಕ ಬಾಧೆಯಾಗಿರುತ್ತದೆಂದು ಗುಣಗುಟ್ಟಿದನು. ಕಾಯಿನನು ಈ ವಿಧವಾಗಿ ಹೇಳುತ್ತಿರುವಂತೆ ಕಾಣಿಸಿತ್ತು, "ನೀನು ನನ್ನ ಹೆತ್ತವರನ್ನು ಏದೆನ್ ತೋಟದಿಂದ ಹೊರಕ್ಕೆ ಹಾಕಿದಿ, ಆದರೆ ನನ್ನ ಗತಿಯು ಇನ್ನೂ ಘೋರವಾದದ್ದು ಯಾಕೆಂದರೆ ನನಗೆ ನೆಲೆಗೊಳ್ಳಲು ಯಾವ ಸ್ಥಳವೂ ಸಿಕ್ಕುವದಿಲ್ಲ. ಅಲ್ಲದೆ, ಭೂಮಿಯು ಬೆಳೆಯನ್ನು ಕೊಡುವಂತೆ ಮಾಡುವದಕ್ಕಾ ನನ್ನ ತಂದೆಯು ಇನ್ನಷ್ಟು ಹೆಚ್ಚು ಕಷ್ಟ ಹಾಗೂ ಪರಿಶ್ರಮ ಪಡುವಂತೆ ಮಾಡಿದಿ, ಆದರೆ ನೀನು ನನ್ನನ್ನು ಫಲವತ್ತಾದ ಭೂಮಿಯಿಂದ ಸಂಪೂರ್ಣವಾಗಿ ಬೇರ್ಪಡಿಸಿ ಬಿಟ್ಟಿದ್ದಿ, ನನ್ನನ್ನು ಅಲೆಯುವವನೂ ದೇಶಭ್ರಷ್ಟನೂ ಆಗುಂತೆ ಮಾಡಿದ್ದಿ. ಅಷ್ಟುಮಾತ್ರವಲ್ಲದೆ, ನಾನು ನಿನ್ನ ಸನ್ನಿಧಿಯಿಂದ ಮರೆಯಾಗುವೆನು, ನೀನು ನನ್ನನ್ನು ಇನ್ನು ಮೇಲೆ ನೋಡುವದಿಲ್ಲ ಮತ್ತು ನನ್ನನ್ನು ಆರೈಕೆ ಮಾಡುವದಿಲ್ಲ, ಏದೆನ್ ತೋಟಕ್ಕೆ ಇನ್ನು ಮೇಲೆ ಹೋಗುವದಕ್ಕೆ ಸಾಧ್ಯವೇ ಇಲ್ಲವಾದಾಗ್ಯೂ ನನ್ನ ತಂದೆ, ತಾಯಿ, ಮತ್ತು ನನ್ನ ತಮ್ಮನ ವಿಷಯದಲ್ಲಿಯೂ ಹೀಗೆಯೇ ಮಾಡಿರುವಿ." ಇಲ್ಲಿ ವಿಪರ್ಯಾಸವೇನೆಂದರೆ, ಈ ಹಂತದ ವರೆಗೂ, ಕಾಯಿನನಿಗೆ ದೇವರ ಸನ್ನಿಧಿಯ ಬಗ್ಗೆ ಮುನಿಸಿಕೊಂಡಿದ್ದನು ಮತ್ತು ಅದನ್ನು ತನ್ನ ಜೀವಿತದಲ್ಲಿ ದೈವಿಕ ಹಸ್ತಕ್ಷೇಪ ಎಂಬಂತೆ ಭಾವಿಸಿಕೊಂಡಿದ್ದನು. ಈಗ, ತಾನೇನು ಕಳೆದುಕೊಳ್ಳುತ್ತಿರುವೆನೆಂಬುದನ್ನು ಗ್ರಹಿಸಿಕೊಂಡಿದ್ದನು - ಆದರೆ ಈಗ ಕಾಲವು ಮಿಂಚಿ ಹೋಗಿತ್ತು. ಆತನು ಅಸಹಾಯಕತೆಯನ್ನು ಅನುಭವಿಸಿದನು ಮತ್ತು **ನನ್ನನ್ನು ಕಂಡವರು ಕೊಲ್ಲುವರು** ಎಂದು ಹೇಳಿದನು. ದೇವರಿಂದ ಬೇರ್ಪಡುವಿಕೆಯು ತನಗೆ ಹಾನಿಯುಂಟು ಮಾಡಬಹುದಾದ ಬೇರೆ ಜನರಿಗೆ ಕಾಯಿನನು ಹೆದರುವಂತೆ ಮಾಡಿತ್ತು.

ಕಾಯಿನನ ಚಿಂತೆಯು ಸಾಭಿತುಪಡಿಸುವದೇನೆಂದರೆ ಆ ಕಾಲದಲ್ಲಿ ಇನ್ನು ಅನೇಕ ಜನರು ಲೋಕದಲ್ಲಿ ಜೀವಿಸುತ್ತಿದ್ದರು ಎಂಬದೆ, ಅದೇ ರೀತಿಯಲ್ಲಿಯೇ ಕಾಯಿನನು ಒಬ್ಬ

ಹೆಂಡತಿಯನ್ನು ಮದುವೆ ಮಾಡಿಕೊಂಡು ಒಂದು ಪಟ್ಟಣವನ್ನು ಕಟ್ಟಿಕೊಂಡನು ಎಂಬ ಅಂಶವು ಅದನ್ನು ಸಾಭಿತುಪಡಿಸುತ್ತದೆ (4:17). ಯಾರಾದರೊಬ್ಬರು "ರಕ್ತಕ್ಕೆ ಪ್ರತೀಕಾರ" ಸಲ್ಲಿಸುವವನಾಗಿ ಇವನನ್ನು ಕೊಲ್ಲಬಹುದೆಂದು ಈತನು ಯೋಚಿಸಿರಬಹುದಾಗಿದೆ. ಆದಿಕಾಂಡದ ಲೇಖಕನು ಯಾವ ಕಾಲದ ವಿವರಗಳನ್ನು ಸೇರ್ಪಡೆಗೊಳಿಸಿರುವದಿಲ್ಲ: ಆದಾಮ ಮತ್ತು ಹವ್ವಳರು ತೋಟದಿಂದ ಹೊರಕ್ಕೆ ಹಾಕಲ್ಪಟ್ಟು ಕಾಯಿನ ಹಾಗೂ ಹೇಬೆಲರನ್ನು ಗರ್ಭಧರಿಸಿ ಜನ್ಮ ನೀಡುವ ವರೆಗೂ ಎಷ್ಟು ಕಾಲವಾಗಿತ್ತು ಎಂಬುದನ್ನಾಗಲಿ, ಅಥವಾ ಅಣ್ಣನು ತನ್ನ ತಮ್ಮನನ್ನು ಕೊಲ್ಲುವದಕ್ಕೆ ಮುಂಚೆ ಎಷ್ಟು ವರ್ಷಗಳು ಗತಿಸಿದ್ದವು ಎಂಬುದನ್ನಾಗಲಿ ಆತನು ತಿಳಿಸುವದಿಲ್ಲ. ಕೊಲೆಗಾರನು ಯಾರಿಗೆ ಹೆದರಬೇಕಾಯಿತು ಮತ್ತು ಯಾರನ್ನು ಮದುವೆ ಮಾಡಿಕೊಂಡನು ಎಂಬುದರ ಕುರಿತಾಗಲಿ ಸಹ ವಿವರಗಳಿರುವದಿಲ್ಲ. ಆದಾಮ ಮತ್ತು ಹವ್ವಳಿಗೆ ಇನ್ನು ಹಲವು ಮಕ್ಕಳಿದ್ದದ್ದು ನಿಜವೇ ಆಗಿರುತ್ತದೆ, ಅವರಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಬ್ಬರೂ ಸೇರಿದ್ದರು (4:25; 5:4), ಆದರೆ ಈ ಮಕ್ಕಳ ಜೀವಿತಗಳಿಗಾಗಿ ಯಾವದೇ ವಂಶಾವಳಿಗಳು ಕೊಡಲ್ಪಟ್ಟಿರುವದಿಲ್ಲ. ಕಾಯಿನನ ಹೆಂಡತಿ ಮತ್ತು "ರಕ್ತಕ್ಕೆ ಪ್ರತೀಕಾರ ಸಲ್ಲಿಸುವ" ಸಂಭಾವ್ಯ ವ್ಯಕ್ತಿಗಳು ಆತನ ಸಂಬಂಧಿಗಳಾಗಿರಬಹುದಾಗಿದೆ - ಎಲ್ಲರೂ ಆದಾಮ ಮತ್ತು ಹವ್ವಳರಿಂದ ಬಂದವರಾಗಿರಬಹುದು (3:20; ಅಪೊಸ್ತಲರ ಕೃತ್ಯಗಳು 17:26) - ಆದರೆ ಪ್ರಥಮ ದಂಪತಿಗಳು ತೋಟದಲ್ಲಿನ ತಮ್ಮ ಮೂಲ ನಿವಾಸವನ್ನು ಕಳೆದುಕೊಂಡ ದಿನದಿಂದ ಇದುವರೆಗೂ ಎಷ್ಟು ವರ್ಷಗಳು ಗತಿಸಿದ್ದವೆಂಬುದು ತಿಳಿದು ಬಂದಿರುವದಿಲ್ಲ. ಲೇಖಕನ ಉದ್ದೇಶವು ಈ ಎಲ್ಲಾ ಘಟನೆಗಳಿಗೆ ನಿಖರವಾದ ಕಾಲಾನುಕ್ರಮದ ವಿವರಗಳನ್ನು ಕೊಡುವದಾಗಿರಲಿಲ್ಲ. ಆತನ ಮುಖ್ಯ ಗಮನವು ಮಾನವ ಸ್ಥಿತಿ ಹಾಗೂ ಪಾಪದೊಳಕ್ಕೆ ಇಳಿಮುಖವಾಗಿ ಸಾಗುವದರ ಕುರಿತು, ದೇವರಿಂದ ಮತ್ತಷ್ಟು ದೂರಕ್ಕೆ ಸಾಗುತ್ತಲೇ ಹೋಗುವದರ ಕುರಿತು, ಮತ್ತು ಕ್ರಮೇಣದಲ್ಲಿ ಇದೆಲ್ಲವೂ ಹೇಗೆ ಮಹಾ ಪ್ರಳಯಕ್ಕೆ ನಡಿಸುತ್ತದೆ ಎಂಬುದನ್ನು ತಿಳಿಸುವದೇ ಆಗಿತ್ತು.

**ವಚನ 15.** ದೇವರು ನೀಡಿದ ದಂಡನೆಯು ಬಹಳ ದೊಡ್ಡದಾಗಿತ್ತು ಎಂಬುದು ಕಾಯಿನನ ವಾದ ಆಗಿತ್ತು, ಆದರೆ ಈ ವಚನವು ಚರಿತ್ರೆಯಲ್ಲಿ ಹಿಮ್ಮೋಗವೊಂದನ್ನು ಆರಂಭಿಸಿತ್ತು. **ಯೆಹೋವನು** ನ್ಯಾಯತೀರ್ಪಿನ ಮಾತುಗಳನ್ನು ತಿಳಿಸಿದ್ದನು, ಆದರೆ ಒಂದು ವಾಗ್ದಾನ ಮಾತನ್ನು ನುಡಿಯುವ ಮೂಲಕ ಹಾಗೂ ಈ ಪಶ್ಚಾತ್ತಾಪವಿಲ್ಲದ ಪಾಪಿಗೋಸ್ಕರ ದೈವಿಕ ಭದ್ರತೆಯನ್ನು ಒದಗಿಸುವ ಕ್ರಿಯೆಯ ಮೂಲಕ ಕೃಪೆಯನ್ನು ತೋರ್ಪಡಿಸಿದನು. ದೇವರು ಹೀಗೆ ಹೇಳಿದನು, **ಕಾಯಿನನ ಪ್ರಾಣವನ್ನು ತೆಗೆದವನಿಗೆ ಏಳರಷ್ಟು ಪ್ರತಿದಂಡನೆಯಾಗುವದು**. ಹಳೆಯ ಒಡಂಬಡಿಕೆಯಲ್ಲಿ "ಪ್ರತಿದಂಡನೆ" (נָקָם, *ನಕ್ವಾಮ*) ಎಂಬುದು ಸಾಮಾನ್ಯವಾಗಿ ಯೆಹೋವನು ತನ್ನ ವೈರಿಗಳ ಮೇಲೆ ಅಥವಾ ತನ್ನ ಒಡಂಬಡಿಕೆಯನ್ನು ಇಚ್ಛಾಪೂರ್ವಕವಾಗಿ ಉಲ್ಲಂಘಿಸುವ ತನ್ನ ಜನರ ಮೇಲೆ ಬರಮಾಡುವ ದೈವಿಕ ಪ್ರತೀಕಾರವನ್ನು ಸೂಚಿಸುತ್ತದೆ.[14] ಈ ತತ್ವದ ಕುರಿತಾದ ಒಂದು ಸರ್ವೋಚ್ಚ ಹೇಳಿಕೆಯೆಂದರೆ "ಪ್ರತೀಕಾರಮಾಡಿ ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ ... ನನ್ನ ಶತ್ರುಗಳಿಗೆ ಮುಯ್ಯಿತೀರಿಸುವೆನು ನನ್ನನ್ನು ದ್ವೇಷಿಸಿದವರಿಗೆ ಪ್ರತಿದಂಡನೆ ಮಾಡುವೆನು" (ಧರ್ಮೋಪದೇಶಕಾಂಡ 32:35, 41; ನೋಡಿರಿ ರೋಮಾ 12:19).

ದೇವರು ಪಾಪ ಮತ್ತು ದುಷ್ಟತನಗಳ ಮೇಲೆ ಕೇವಲ ಕಣ್ಣು ಮಿಟುಕಿಸಿ ಅವುಗಳನ್ನು ದಂಡಿಸದೆ ಮುಂದುವರೆಯುವಂತೆ ಬಿಡುವದಾದರೆ ಆತನು ತನ್ನ ಪರಿಶುದ್ಧ ಗುಣಸ್ವಭಾವ ಹಾಗೂ ನ್ಯಾಯಗಳಿಗೆ ಸತ್ಯವಾಗಿರುವದಕ್ಕೆ ಸಾಧ್ಯವಿರಲಿಲ್ಲ. ದೇವರು ಜನರು ಹಾಗೂ

ದೇಶಗಳ ಮೇಲೆ ತಾತ್ಕಾಲಿಕ ನ್ಯಾಯತೀರ್ಪನ್ನು ಬರಮಾಡಿದಾಗ, ಅದನ್ನು "ಯೆಹೋವನು ಮುಯ್ಯಿ ತೀರಿಸುವ ದಿನ" ಎಂದು ಕರೆಯಲಾಗುತ್ತಿತ್ತು (ಯೆಶಾಯ 34:8; 61:2; 63:4; ನೋಡಿರಿ 35:4; 47:3). ಹೇಗೂ, ಮೋಶೆಯ ಧರ್ಮಶಾಸ್ತ್ರದಡಿಯಲ್ಲಿ ವೈಯಕ್ತಿಕ ಸಂಬಂಧದೊಳಗೆ, ದೇವರ ಜನರು ತಪ್ಪು ಮಾಡುವವರ ಮೇಲೆ ತಾವೇ ಪ್ರತಿದಂಡನೆಯನ್ನು ಮಾಡಬಾರದಿತ್ತು. ಇಸ್ರಾಯೇಲ್ಯರಿಗೆ ಹೇಳುವಂತೆ ಯೆಹೋವನು ಮೋಶೆಗೆ ಹೀಗೆ ಅಪ್ಪಣೆ ಕೊಡುತ್ತಾನೆ, "ನಿಮ್ಮ ಸ್ವಜನರಲ್ಲಿ ಯಾರಿಗಾದರೂ ಕೇಡಿಗೆ ಕೇಡನ್ನು ಮಾಡದೆ ಮನಸ್ಸಿನಲ್ಲಿ ಮತ್ಸರವನ್ನು ಇಟ್ಟುಕೊಳ್ಳದೆ ನಿಮ್ಮ ನೆರೆಯವರನ್ನು ನಿಮ್ಮಂತೆಯೇ ಪ್ರೀತಿಸಬೇಕು. ನಾನು ಯೆಹೋವನು" (ಯಾಜಕಕಾಂಡ 19:18). ಕಾಯಿನನ ಕಥೆಯು ಒಬ್ಬ ಕೊಲೆಗಾರನ ಕಡೆಗೆ ಇದೇ ರೀತಿಯ ಮನೋಭಾವ ಇರುವದರ ಬಗ್ಗೆ ಸುಳಿವು ನೀಡುತ್ತದೆ.

"ರಕ್ತಕ್ಕೆ ಪ್ರತೀಕಾರ" ಸಲ್ಲಿಸುವದು ಕುಟುಂಬಗಳು ಅಥವಾ ಕುಲಗಳಲ್ಲಿ "ಮನೆತನದ ಹಗೆತನಗಳ" ಭಾಗವಾಗಿರಬೇಕೆಂಬ ಉದ್ದೇಶವನ್ನು ಹೊಂದಿರಲಿಲ್ಲ, ಈ ವಿಧವಾಗಿ ಕೆಲವು ಸಾರಿ ವಿವಿಧ ಜನರ ಗುಂಪುಗಳ ಮಧ್ಯ ಸಂಭವಿಸಿರುತ್ತದೆ. ದೇವರು ಕೆಟ್ಟದ್ದನ್ನು ಮಾಡಿದವರಿಗೆ ದಂಡನೆಯನ್ನು ನೀಡುವದಕ್ಕಾಗಿ ಯಾವದೇ ಕೇಂದ್ರಿಯ ಸರ್ಕಾರ ಅಥವಾ ನ್ಯಾಯದ ವ್ಯವಸ್ಥೆಯು ಇಲ್ಲದೆ ಇದ್ದ ಗೋತ್ರದಿಂದ ಕೂಡಿದ್ದ ಸಮುದಾಯದಲ್ಲಿ ಒಂದು ನ್ಯಾಯದ ವ್ಯವಸ್ಥೆಯನ್ನು ಏರ್ಪಡಿಸಿ ಕೊಡುತ್ತಿದ್ದಾನೆ. ಕೊಲೆಯೊಂದು ನಡೆಯುವದಾದಲ್ಲಿ, ಕೊಲೆಗೊಳಗಾಗಿರುವ ವ್ಯಕ್ತಿಯ ಅತ್ಯಂಥ ನಿಕಟ ಸಂಬಂಧಿಕನು ನ್ಯಾಯವನ್ನು ಒದಗಿಸಿ ಕೊಡಬೇಕಿತ್ತು. ಅನಂತರದಲ್ಲಿ ಆಶ್ರಯ ನಗರಗಳನ್ನು ಸ್ಥಾಪನೆಗೊಳಿಸಿದ್ದು ಈ ಆಚರಣೆಯ ಒಂದು ಪರಿಷ್ಕರಣ ಆಗಿತ್ತು; ಅದು ಆಕಸ್ಮಿಕವಾಗಿ ನಡೆದ ಕೊಲೆ ಮತ್ತು ಪ್ರಾಥಮಿಕ ಹಂತದ ಕೊಲೆ ಇವುಗಳ ನಡುವೆ ಭಿನ್ನತೆಯನ್ನು ಗುರುತಿಸಿತ್ತು, ಪ್ರಮಾದವಶಾತ್ ನಡೆದ ನರಹತ್ಯಗಳಿಗೆ ಲಘುವಾದ ದಂಡನೆಯನ್ನು ವಿಧಿಸುವದಾಗಿತ್ತು (ಅರಣ್ಯಕಾಂಡ 35:9-28).[15]

ದೇವರು ಕಾಯಿನನನ್ನು ಕೊಲ್ಲುವವನಿಗೆ "ಏಳರಷ್ಟು ಪ್ರತಿದಂಡನೆಯಾಗುವದು" ಎಂಬುದಾಗಿ ಘೋಷಿಸಿದಾಗ, ಕೆಲವು ಯೋಚಿಸಲ್ಪಟ್ಟಿರುವ ಪ್ರಕಾರ, ಆತನ ತಾತ್ಪರ್ಯವು ಕಾಯಿನನ ಕೊಲೆಗಾರನು ಹಾಗೂ ಅವನ ಕುಟುಂಬ ಆರು ಸದಸ್ಯರು ಮರಣಿಸುವದು ಅಥವಾ ದೇವರು ಕಾಯಿನನಿಂದ ಮೊದಲ್ಗೊಂಡು ಏಳು ಸಂತತಿಯವರನ್ನು ದಂಡಿಸುವನು ಎಂದಾಗಲಿ ಇರುತ್ತದೆಂಬುದು ಸಂದೇಹಕರವಾಗಿರುತ್ತದೆ. ಬಹುಶಃ ಅದು ಪ್ರತಿದಂಡನೆಯ ಸಂಪೂರ್ಣತೆಯನ್ನು ಅಥವಾ ಪೂರ್ಣತೆಯನ್ನು ಸೂಚಿಸುವ ಕಾವ್ಯಾತ್ಮಕ ಭಾಷೆಯಾಗಿರಬಹುದಷ್ಟೆ. "7" ಸಂಖ್ಯೆಯು ಪವಿತ್ರ ಸಂಖ್ಯೆಯಾಗಿದ್ದು ಅನೇಕ ಸಾರಿ ಶಾಸ್ತ್ರಗಳಲ್ಲಿ ಈ ಮಹತ್ವದೊಂದಿಗೆ ಬಳಸಲ್ಪಟ್ಟಿರುತ್ತದೆ (ಯಾಜಕಕಾಂಡ 26:24, 25; ಕೀರ್ತನೆ 12:6; 79:12; ಜ್ಞಾನೋಕ್ತಿ 6:31).

ಕೃಪೆಯಿಂದಾಗಿ, ದೇವರು **ಕಾಯಿನನ ... ಮೇಲೆ ಒಂದು ಗುರುತಿಟ್ಟನು**. ಇದು ಆತನ ಮೇಲಿನ ಶಾಪವಾಗಿರಲಿಲ್ಲ; ಇದು ಒಂದು ಹಗೆತನದಿಂದ ತುಂಬಿರುವ ಜಗತ್ತಿನಲ್ಲಿ ಆತನಿಗೆ ಸುರಕ್ಷತೆ ಸಿಕ್ಕಲೆಂದು ಖಾತ್ರಿ ಪಡಿಸುವದಾಗಿತ್ತು. ವಾಸ್ತವಿಕದಲ್ಲಿ, ಮನುಷ್ಯರು ಅದನ್ನು ನೋಡಿದಾಗ, ಆತನು ದೈವಿಕ ಭದ್ರತೆಯಲ್ಲಿರುತ್ತಾನೆಂದು ಮತ್ತು ಅವರು ಅವನನ್ನು **ಕೊಲ್ಲಕೂಡದು** ಎಂದು ಅರಿತುಕೊಳ್ಳುವವರಾಗಿದ್ದರು. ಆದದರಿಂದ, ಈ "ಗುರುತು" (אוֹת, ಒಥ್) ಕಣ್ಣಿಗೆ ಗೋಚರವಾಗುವಂತೆ ಇರಬೇಕಾಗಿತ್ತು. ಅದೊಂದು ರೀತಿಯ ಗುರುತು ಆಗಿರಬಹುದು, ಉದಾಹರಣೆಗೆ ಒಂದು ಹಚ್ಚೆ ರೀತಿಯಲ್ಲಿ, ಅದು ಆತನ ಮುಖದ ಮೇಲೆಯೋ ಅಥವಾ ಹಣೆಯ ಮೇಲೆಯೋ ಹಾಕಲ್ಪಟ್ಟಿರಬಹುದಾಗಿದೆ. ಇದು ಆತನ ಮೇಲೆ ಇದ್ದದರಿಂದ ಭೂಮಿಯ ಮೇಲೆ

ಆತನು ತನ್ನ ಸ್ವಾಭಾವಿಕ ಆಯುಷ್ಯನ್ನು ಜೀವದಿಂದ ಕಳೆಯುವಂತೆ ಅನುಮತಿ ಸಿಕ್ಕುವದಾಗಿತ್ತು.

**ವಚನ 16.** ಈ ಕಥೆಯಲ್ಲಿನ ವಿಪರ್ಯಾಸವು ಏನೆಂದರೆ ಇದು ಇಬ್ಬರು ಸಹೋದರರು ಆರಾಧನೆಯ ಮೂಲಕವಾಗಿ ದೇವರಿಗೆ ಸಮೀಪವಾಗುವದಕ್ಕೆ ಪ್ರಯತ್ನಿಸುವದರೊಂದಿಗೆ ಆರಂಭಗೊಂಡಿತ್ತು. **ಕಾಯಿನನು** ಹೊಟ್ಟೆಕಿಚ್ಚು ಮತ್ತು ಕೋಪಾಗ್ನಿಯಿಂದ ಕುದಿಯುವವನಾಗಿ ಹೇಬೆಲನನ್ನು ಕೊಂದ ಬಳಿಕ, ಪಶ್ಚಾತ್ತಾಪವಿಲ್ಲದ ಕೊಲೆಗಾರನು **ಯೆಹೋವನ ಸನ್ನಿಧಾನದಿಂದ ಹೊರಟು** ಹೋಗಿದ್ದನು. ಈ ವಿಧದಲ್ಲಿ ಆದಿಕಾಂಡ ಪುಸ್ತಕದ ಲೇಕಕನು ಕಾಯಿನ ಹೇಗೆ ದೇವರಿಂದ ಬೇರ್ಪಟ್ಟನು ಮತ್ತು ಆತನು ಏಕೆ **ನೋದು ಎಂಬ ದೇಶದಲ್ಲಿ ವಾಸಿಸಿದನು; ಅದು ಏದೆನ್ ಸೀಮೆಗೆ ಮೂಡಲಲ್ಲಿರುವದು** ಎಂಬುದನ್ನು ವಿವರಿಸಿದನು. “ನೋದು” (נוֹד, *ನೋದ್)* ಎಂಬ ಹೆಸರು ಅಕ್ಷರಶಃ “ಅಲೆದಾಟ” ಎಂಬ ಅರ್ಥವನ್ನು ಹೊಂದಿರುತ್ತದೆ, ಒಂದು ನೆಲೆಗೊಳ್ಳದ ಜೀವಿದ ದುರವಸ್ಥೆಯಲ್ಲಿರುವಂತೆ ಎಂಬುದೆ.[16] ಒಂದು ನಿರ್ದಿಷ್ಟವಾದ ಸ್ಥಳದ ಬದಲಾಗಿ, ಅದು “ಏದೆನ್ ಸೀಮೆಗೆ ಮೂಡಲಲ್ಲಿರುವ” (ದೇವರು ಮೂಲತಃ ಮಾನವರಿಗಾಗಿ ಒದಗಿಸಿದ್ದ ನಿವಾಸ) ಭೌಗೋಳಿಕ ಪ್ರಾಂತ್ಯವೊಂದನ್ನು ಸೂಚಿಸುತ್ತಿರಬಹುದಾಗಿದೆ, ಅಲ್ಲಿ ದೇವರ ಮಾರ್ಗದರ್ಶನವನ್ನು ತಿರಸ್ಕಾರ ಮಾಡಿದ್ದ ಈ ಮನುಷ್ಯನು “ಲೋಕದಲ್ಲಿ ಅಲೆಯುವವನೂ ದೇಶಭ್ರಷ್ಟನೂ” ತನಗಾದ ದೈವಿಕ ನ್ಯಾಯತೀರ್ಪಿನಂತೆ ಜೀವಿಸಬಹುದಾಗಿತ್ತು (4:14).

## ಎರಡು ವಂಶಾವಳಿಗಳು (4:17-26)

### ಕಾಯಿನ ಮತ್ತು ಹೇಬೆಲರ ಜನನ (4:17-24)

**[17]ಕಾಯಿನನು ತನ್ನ ಹೆಂಡತಿಯನ್ನು ಕೂಡಲು ಅವಳು ಗರ್ಭಿಣಿಯಾಗಿ ಹನೋಕನನ್ನು ಹೆತ್ತಳು. ಇದಲ್ಲದೆ ಕಾಯಿನನು ಒಂದು ಊರನ್ನು ಕಟ್ಟಿ ಅದಕ್ಕೆ ಹನೋಕ ಎಂದು ತನ್ನ ಮಗನ ಹೆಸರಿಟ್ಟನು. ಹನೋಕನಿಂದ ಈರಾದನು ಹುಟ್ಟಿದನು. [18]ಈರಾದನು ಮೆಹೂಯಾಯೇಲನನ್ನು ಪಡೆದನು. ಮೆಹೂಯಾಯೇಲನು ಮೆತೂಷಾಯೇಲನನ್ನು ಪಡೆದನು. ಮೆತೂಷಾಯೇಲನು ಲೆಮೆಕನನ್ನು ಪಡೆದನು. [19]ಲೆಮೆಕನು ಆದಾ ಚಿಲ್ಲಾ ಎಂಬ ಇಬ್ಬರು ಹೆಂಡರನ್ನು ಮಾಡಿಕೊಂಡನು. [20]ಆದಳು ಯಾಬಾಲನನ್ನು ಹೆತ್ತಳು; ದನಕರುಗಳನ್ನು ಸಾಕುವವರಾಗಿದ್ದು ಗುಡಾರಗಳಲ್ಲಿ ವಾಸಿಸುವವರೆಲ್ಲರ ಮೂಲಪುರುಷನು ಇವನೇ. [21]ಅವನ ತಮ್ಮನ ಹೆಸರು ಯೂಬಾಲನು; ಇವನು ಕಿನ್ನರಿಕೊಳಲುಗಳನ್ನು ನುಡಿಸುವವರ ಮೂಲ ಪುರುಷನು. [22]ಚಿಲ್ಲಾ ಎಂಬವಳು ತೂಬಲ್‌ಕಾಯಿನನನ್ನು ಹೆತ್ತಳು; ಅವನು ಕುಲಿಮೆ ಮಾಡಿ ಕಬ್ಬಿಣ ತಾಮ್ರದ ಆಯುಧಗಳನ್ನು ಕಲ್ಪಿಸಿದವನು. ತೂಬಲ್‌ಕಾಯಿನನ ತಂಗಿ ನಯಮಾ. [23]ಲೆಮೆಕನು ತನ್ನ ಹೆಂಡತಿಯರಿಗೆ ಹೀಗೆಂದನು - ಆದಾ, ಚಿಲ್ಲಾ, ನನ್ನ ಮಾತಿಗೆ ಕಿವಿಗೊಡಿರಿ; ಲೆಮೆಕನ ಹೆಂಡತಿಯರೇ, ನಾನು ಹೇಳುವದನ್ನು ಕೇಳಿರಿ. ನನಗೆ ಗಾಯಮಾಡಿದ ಒಬ್ಬ ಮನುಷ್ಯನನ್ನು ಕೊಂದೆನು; ನನ್ನನ್ನು ಹೊಡೆದ ಒಬ್ಬ ಪ್ರಾಯಸ್ಥನನ್ನು ಹತಮಾಡಿದೆನು. [24]ಕಾಯಿನನನ್ನು ಕೊಂದವನಿಗೆ ಏಳರಷ್ಟು ಪ್ರತಿದಂಡನೆ ಬರುವದಾದರೆ ಲೆಮೆಕನನ್ನು ಹೊಡೆಯುವವನಿಗೆ ಎಪ್ಪತ್ತೇಳರಷ್ಟಾಗುವದಲ್ಲವೇ.**

**ವಚನ 17.** ಕಾಯಿನನು ತನ್ನ ತಮ್ಮನನ್ನು ಕೊಲೆ ಮಾಡಿ ದೈವಿಕ ನ್ಯಾಯತೀರ್ಪಿಗೆ

ಒಳಗಾಗಿರುವವನು ಆಗಿದ್ದಾಗ್ಯೂ, ದೇವರು ಭೂಮಿಯನ್ನು ಜನರಿಂದ ತುಂಬಿಸಬೇಕೆಂಬುವ ತನ್ನ ಯೋಜನೆಯನ್ನು ಕೈ ಬಿಡಲಿಲ್ಲ. ಕಾಯಿನನು ಯಾರನ್ನು ಮದುವೆ ಮಾಡಿಕೊಂಡನು ಅಥವಾ ಯಾವಾಗ ಮದುವೆ ಸಂಭವಿಸಿತು ಎಂಬುದನ್ನು ಆದಿಕಾಂಡ ಪುಸ್ತಕವು ತಿಳಿಸುವದಿಲ್ಲ. ಹಾಗಿದ್ದರೂ, ಆತನ ಹೆಂಡತಿಯು 5:4ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಆದಾಮನ ಪುತ್ರಿಯರಲ್ಲೊಬ್ಬಳು ಆಗಿರಬಹುದಾಗಿದೆ (ನೋಡಿರಿ 3:20; ಅಪೊಸ್ತಲರ ಕೃತ್ಯಗಳು 17:26). ಭೂಮಿಯ ಮೇಲೆ ಕೆಲವೇ ಜನರು ಇದ್ದ ಕಾಲದಲ್ಲಿ, ರಕ್ತಸಂಬಂಧಿಗಳೊಳಗೆ ಮದುವೆ ಮಾಡಿಕೊಳ್ಳುವದು ಒಂದು ಅವಶ್ಯಕತೆಯಾಗಿತ್ತು. ಅನೇಕ ತಲೆಮಾರುಗಳ ನಂತರದಲ್ಲಿ ಸಹ, ಅಬ್ರಹಾಮನು ತನ್ನ ಮಲಸಹೋದರಿಯನ್ನು ಮದುವೆ ಮಾಡಿಕೊಂಡನು (20:12). ಹೇಗೂ, ಜನರು ಭೂಮಿಯ ಮೇಲೆ ಅತ್ಯಧಿಕಗೊಂಡ ಹಾಗೆ, ಇನ್ನು ಮೇಲೆ ಅದರ ಅವಶ್ಯಕತೆಯಿರಲಿಲ್ಲ, ಮತ್ತು ಮೋಶೆಯ ಧರ್ಮಶಾಸ್ತ್ರವು ಅಂಥ ಆಚಾರವನ್ನು ಕಠೋರವಾಗಿ ಖಂಡನೆ ಮಾಡುವದಾಗಿತ್ತು (ಯಾಜಕಕಾಂಡ 18:9).

ದೇವರು "ನೀವು ಬಹುಸಂತಾನವುಳ್ಳವರಾಗಿ ಹೆಚ್ಚಿರಿ; ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ" ಎಂಬ ಮೂಲ ಆಶೀರ್ವಾದ ಮತ್ತು ಆಜ್ಞೆಯು (1:28) ಪಾಪದ ಹೊರತಾಗಿಯೂ ಮುಂದುವರೆದಿತ್ತು. ಆದಾಮ ಮತ್ತು ಹವ್ವಳರ ವಿಷಯದಲ್ಲಿದ್ದ ಹಾಗೆಯೇ, **ಕಾಯಿನನು ತನ್ನ ಹೆಂಡತಿಯನ್ನು ಕೂಡಲು ಅವಳು ಗರ್ಭಿಣಿಯಾಗಿ ಹನೋಕನನ್ನು ಹೆತ್ತಳು**. ಪ್ರಥಮ ದಂಪತಿಗಳಿಗೆ ತದ್ವಿರುದ್ಧವಾಗಿ (4:1), ಕಾಯಿನನಾಗಲಿ ಅಥವಾ ಆತನ ಹೆಂಡತಿಯಾಗಲಿ ತಮ್ಮ ಮಗನಾದ ಹನೋಕನ ಜೀವಿತದ ವಿಷಯದಲ್ಲಿ ಯೆಹೋವನ ಪಾತ್ರವೇನಾದರೂ ಇರುವದರ ಬಗ್ಗೆ ಏನನ್ನೂ ಪ್ರಸ್ತಾಪಿಸುವದಿಲ್ಲ. ಮುಂದೆ ಬರುವ ವಂಶಾವಳಿಯ ಪ್ರಕಾರವಾಗಿ, ಅವರು ತಮ್ಮ ಜೀವಿತಗಳಲ್ಲಿ ದೇವರಿಗೆ ಸ್ಥಾನವನ್ನೇ ಹೊಂದಿರದಂಥ ಮಕ್ಕಳ ಪೀಳಿಗೆಯೊಂದನ್ನು ಹುಟ್ಟಿಸಿದ್ದರು.

"ಹನೋಕ" ಎಂಬ ಹೆಸರು ("ಎನೋಕ" ಎಂದು ಸಹ ಉಚ್ಚರಿಸಲ್ಪಡುವದಾಗಿದೆ) ಆದಿಕಾಂಡದೊಳಗೆ ಹಲವಾರು ಸಾರಿ ಕಾಣಿಸಿಕೊಳ್ಳುತ್ತದೆ, ಆದರೆ ಆದಾಮ ಮತ್ತು ಹವ್ವಳರಿಂದ ಹುಟ್ಟಿದವರಾಗಿ ಈ ಹೆಸರನ್ನು ಇಟ್ಟುಕೊಂಡವರೊಳಗೆ ಅತ್ಯಂಥ ಪ್ರಸಿದ್ಧ ವ್ಯಕ್ತಿಗಳೆಂದರೆ ಕಾಯಿನನ ಮಗ ಮತ್ತು ಅನಂತದರಲ್ಲಿ ಸೇತನ ವಂಶದವರಲ್ಲಿ ಹುಟ್ಟಿದವನೊಬ್ಬನು ಆಗಿದ್ದಾರೆ (5:18-24). ವಾಸ್ತವಿಕದಲ್ಲಿ, "ಹನೋಕ" ಎಂಬ ಹೆಸರು ಅನಿಶ್ಚಿತವಾಗಿರುವಂತ ವ್ಯುತ್ಪತ್ತಿಶಾಸ್ತ್ರದಿಂದ ಬಂದದ್ದಾಗಿದೆ, ಆದರೆ ಆದಿಕಾಂಡದಲ್ಲಿ ಬರೆಯಲ್ಪಟ್ಟಿರುವ ಪ್ರಕಾರ ಈ ಪದವು ಇಬ್ರಿಯ ಭಾಷೆಯ חָנַךְ *(ಚಾನಾಕ)* ಎಂಬ ಪದದಿಂದ ತೆಗೆದುಕೊಳ್ಳಲ್ಪಟ್ಟಿರಬಹುದಾಗಿದ್ದು, ಅದು "ತರಬೇತಿಗೊಳಿಸು" ಅಥವಾ "ಸಮರ್ಪಿಸು" ಎಂಬ ಅರ್ಥವನ್ನು ಕೊಡುತ್ತದೆ. ಎರಡನೆಯ ಯೋಚನೆಯು ಹೆಚ್ಚು ಸೂಕ್ತವೆಂದು ಕಾಣಿಸುತ್ತದೆ, ಯಾಕೆಂದರೆ ಕಾಯಿನನು **ಒಂದು ಊರನ್ನು ಕಟ್ಟಿ** ಅದಕ್ಕೆ **ತನ್ನ ಮಗನ** ಗೌರವಾರ್ಥವಾಗಿ **ಹನೋಕ** ಎಂದು ಹೆಸರಿಟ್ಟನು.[17]

ದೇವರು ಕಾಯಿನನಿಗೆ ಅಲೆದಾಡುತ್ತಿರುವಂತೆ ದಂಡನೆಯನ್ನು ವಿಧಿಸಿದನಾದರೂ, ಆತನು "ನೋದು" (ಅಕ್ಷರಶಃ, ಒಂದು "ಅಲೆದಾಟದ" ದೇಶ ಎಂದರ್ಥ; 4:16) ಎಂಬ ಸ್ಥಳದಲ್ಲಿ ನೆಲೆಗೊಂಡನು. ಕಾಲಕ್ರಮೇಣದಲ್ಲಿ, ಆತನು ಒಂದು ಊರನ್ನು ಕಟ್ಟುವ ಮೂಲಕ ದೈವಿಕ ಶಾಸನಕ್ಕೆ ವಿರುದ್ಧವಾದದ್ದನ್ನು ಮಾಡಿದ್ದನು. ವಾಕ್ಯವು ದೇವರಿಗೆ ಅವಿಧೇಯತೆಯಲ್ಲಿಯೇ ಮುಂದುವರೆದ ಜೀವನದ ಕುರಿತಾಗಿ ಸುಳಿವು ನೀಡುತ್ತದೆ.

**ವಚನ 18.** ಚರಿತ್ರೆಯು ಬಳಿಕ **ಹನೋಕ**ನ ನಾಲ್ಕು ವಂಶಸ್ಥರನ್ನು ಕ್ರಮಾನುಸಾರದಲ್ಲಿ

ಹೆಸರಿಸುತ್ತದೆ: **ಈರಾದನು, ಮೆಹೂಯಾಯೇಲನು, ಮೆತೂಷಾಯೇಲನು ಮತ್ತು ಲೆಮೆಕ**. ಪಟ್ಟಿಯಲ್ಲಿರುವ ಮೊದಲ ಮೂವರು ವ್ಯಕ್ತಿಗಳ ಬಗ್ಗೆ ಯಾವದೇ ಮಾಹಿತಿಯು ಕೊಡಲ್ಪಟ್ಟಿಲ್ಲ, ಅವರ ಹೆಸರುಗಳನ್ನಷ್ಟೆ ತಿಳಿಸಲಾಗಿದೆ. ಅವರು ಭೂಮಿಯನ್ನು ಜನರಿಂದ ತುಂಬಿಸುವ ದೈವಿಕ ಕೆಲಸವನ್ನು ನೆರವೇರಿಸುವದಕ್ಕಾಗಿ ಆದಾಮನಿಂದ ಕಾಯಿನನ ವರೆಗಿನ ವಂಶಾವಳಿಯಲ್ಲಿ ಸಂಬಂಧಗಳನ್ನು ಹೊಂದಿರುವದನ್ನು ಹೊರತು ಪಡಿಸಿದರೆ, ಅವರು ಪ್ರಸ್ತಾಪಿಸಲ್ಪಡುವದಕ್ಕೆ ಯೋಗ್ಯವಾದ ಯಾವ ಕೃತ್ಯಗಳನ್ನು ಮಾಡಿರುವಂತೆ ಕಾಣಿಸುವದಿಲ್ಲ. ಲೇಖಕನು ಶೀಘ್ರವೇ ಆದಾಮನಿಂದ ಏಳನೆಯ ತಲೆಮಾರಿವನಾಗಿದ್ದ ನಾಲ್ಕನೆಯ ವ್ಯಕ್ತಿಯಾದ ಕುಖ್ಯಾತ ಲೆಮೆಕನ ಕಡೆಗೆ ಸಾಗುತ್ತಾನೆ.

**ವಚನ 19.** ಲೆಮೆಕನ ನೈತಿಕ ಕುಸಿತದ ಕುರಿತಾದ ಮೊದಲ ಸೂಚನೆಯು ಏನೆಂದರೆ ಆತನು ಇಬ್ಬರು ಹೆಂಡತಿಯರನ್ನು ಮದುವೆ ಮಾಡಿಕೊಂಡನು ಎಂಬ ಹೇಳಿಕೆಯೇ: **ಆದಾ** ಮತ್ತು **ಚಿಲ್ಲಾ**. ಹಾಗಾದರೆ, ಈತನಿಂದಲೇ ಏಕಪತ್ನಿತ್ವವು ಮುರಿದು ಬೀಳಲಾರಂಭಿತ್ತು ಎಂದಾಗುತ್ತದೆ. ಖಂಡಿತವಾಗಿಯೂ, ಇದು ಸೃಷ್ಟಿಯಲ್ಲಿ ದೇವರು ಇಟ್ಟಿದ್ದ ಚಿತ್ತವನ್ನು ಬಿಟ್ಟು ದೂರ ಹೋಗುವದಾಗಿತ್ತು: "ಈ ಕಾರಣದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು" (2:24). ಪುನಃ ದೇವರ ಕೃಪೆಯು ಮುಂಭಾಗಕ್ಕೆ ಬರುತ್ತದೆ: ಆತನು ಇದಕ್ಕಾಗಿ ಲೆಮೆಕನನ್ನು ಖಂಡಿಸಲಿಲ್ಲ, ಬಹುಪತ್ನಿತ್ವವನ್ನು ಅಭ್ಯಾಸಿಸಿದ ಮೂಲಪಿತೃಗಳನ್ನಾಗಲಿ ಸಹ ಆತನು ಖಂಡಿಸಲಿಲ್ಲ. ಹೇಗೂ, ಅಂಥ ಅಭ್ಯಾಸಗಳು ಈ ದಾರಿತಪ್ಪಿದ ಜೀವನಶೈಲಿಯನ್ನು ಅನುಸರಿಸಿದ ಜನರಲ್ಲಿ ಅನೇಕ ನೋವುದಾಯಕ ಪರಿಣಾಮಗಳನ್ನು ಉಂಟು ಮಾಡಿತ್ತು. ವಾಸ್ತವಿಕದಲ್ಲಿ, ಹಳೆಯ ಒಡಂಬಡಿಕೆಯು ಬಹುಪತ್ನಿತ್ವದಲ್ಲಿ ಭಾಗಿಯಾಗಿದ್ದ ಹೆಚ್ಚುಕಡಿಮೆ ಪ್ರತಿಯೊಬ್ಬರೂ ಕೌಟಂಬಿಕ ಕಲಹಗಳನ್ನು ಹೊಂದಿದ್ದು ಅದು ಅವರೆಲ್ಲರಿಗೂ ವಿನಾಶಕರವಾಗಿತ್ತೆಂಬುದಾಗಿ ಚಿತ್ರಿಸುತ್ತದೆ ಒಂದು ಅರ್ಥದಲ್ಲಿ, ಸೃಷ್ಟಿಕರ್ತನಿಂದ ನೇಮಿಸಲ್ಪಟ್ಟಿರುವ ರೀತಿಗಿಂತಲೂ ಈ ವಿಧವಾದ ಮದುವೆಯು ಉತ್ತಮವೆಂಬುದಾಗಿ ಸೃಷ್ಟಿಜೀವಿಯು ನಿರ್ಧರಿಸಿಕೊಳ್ಳುವಾಗ ಏನಾಗುತ್ತದೆಂಬುದನ್ನು ಮನುಷ್ಯನು ಕಠಿಣ ಮಾರ್ಗದಲ್ಲಿ ಕಲಿತುಕೊಳ್ಳುವಂತೆ ಅನುಮತಿಸಿದನು.

**ವಚನಗಳು 20-22. ಆದಾ** ಮತ್ತು **ಚಿಲ್ಲಾ**, ಒಟ್ಟಾಗಿ ಸೇರಿ ನಾಲ್ವರು ಮಕ್ಕಳನ್ನು ಪಡೆದಿದ್ದರು. ಆದಾಳಿಗೆ ಇಬ್ಬರ ಗಂಡು ಮಕ್ಕಳಿದ್ದರೆ, ಚಿಲ್ಲಾಳಿಗೆ ಒಬ್ಬ ಮಗ ಮತ್ತು ಒಬ್ಬ ಮಗಳು ಹುಟ್ಟಿದ್ದರು. ಪ್ರತಿಯೊಬ್ಬ ಮಗನಿಗೆ ಹೆಸರೊಂದು ಕೊಡಲ್ಪಟ್ಟಿರುತ್ತದೆ, ಆಯಾ ವ್ಯಕ್ತಿಯ ವೃತ್ತಿಯನ್ನು ಮತ್ತು ನಾಗರೀಕತೆಗೆ ಅವನ ಕೊಡುಗೆಯನ್ನು ತಿಳಿಸುವ ಹೆಸರು ಅದಾಗಿರುತ್ತದೆ. ಚಿಲ್ಲಾಳ ಮಗಳಾದ **ನಯಾಮ**ಳ ವಿಷಯವಾಗಿ ಬೇರೆ ಏನನ್ನೂ ಹೇಳಲಾಗಿರುವದಿಲ್ಲ; ಆಕೆಯು ಸಾಂಸ್ಕೃತಿಕವಾಗಿ ಯಾವ ಸಾಧನೆಯನ್ನಾದರೂ ಮಾಡಿರುವದಾಗಿ ಹೇಳಲ್ಪಟ್ಟಿರುವದಿಲ್ಲ.

ಆದಾಳಿಗೆ **ಯಾಬಾಲ**ನು ಹುಟ್ಟಿದ್ದರ ಕುರಿತು ಮೊದಲು ಬಣ್ಣಿಸಲ್ಪಟ್ಟಿದೆ, ಮತ್ತು **ದನಕರುಗಳನ್ನು ಸಾಕುವವರಾಗಿದ್ದು ಗುಡಾರಗಳಲ್ಲಿ ವಾಸಿಸುವವರೆಲ್ಲರ ಮೂಲಪುರುಷನು ಇವನೇ** ಎಂದು ಹೇಳಲಾಗಿರುತ್ತದೆ. ಈ ಸನ್ನಿವೇಶದಲ್ಲಿ, "ಮೂಲಪುರುಷ" ಎಂಬುದು ಒಂದು ಅಕ್ಷರಶಃ ಅರ್ಥದಲ್ಲಿ ಬಳಸಲ್ಪಟ್ಟಿಲ್ಲ, ಆದರೆ ಸಾಂಕೇತಿಕವಾಗಿ ಬಳಸಲ್ಪಟ್ಟಿದೆ. ಯಾಬಾಲನು ಎಲ್ಲಾ ಅರೆ-ಅಲೆಮಾರಿ ಜನರು ಮತ್ತು ದನಕರುಗಳನ್ನು ಸಾಕುವವರ ಸ್ಥಾಪಕನು ಆಗಿರುತ್ತಾನೆ. ಈ ಹೇಳಿಕೆಯನ್ನು ಕೆಲವರು ಈ ಮುಂಚೆ ಹೇಬೆಲನನ್ನು "ಕುರಿಕಾಯುವವನು" (4:2) ಎಂದು ಕರೆದದ್ದಕ್ಕೆ ವಿರುದ್ಧವಾದದ್ದೆಂದು ಕಾಣುತ್ತಾರೆ. ಯಾಬಾಲನನ್ನು ಹೇಗೆ ಅಂಥ ವೃತ್ತಿಯೊಂದರ

ಮೂಲಜನಕನು ಎಂಬುದಾಗಿ ಬಣ್ಣಿಸುವದಕ್ಕೆ ಸಾಧ್ಯ? ಆಕ್ಷೇಪಣೆಗಾರರು ಹೇಬೆಲನ ಮಂದೆಗಳನ್ನು ಸೂಚಿಸುವದಕ್ಕೆ ಬಳಸಿರುವ ಪದವು צֹאן *(ಟ್ಸೊ'ನ)* ಎಂದಾಗಿದೆ ಎಂಬುದನ್ನು ನಿರ್ಲಕ್ಷಿಸುತ್ತಾರೆ, ಇದು ಕುರಿ ಮತ್ತು ಮೇಕೆಗಳಂತಹ ಚಿಕ್ಕ ಪ್ರಾಣಿಗಳನ್ನು ಸೂಚಿಸುತ್ತದೆ.[18] ಯಾಬಾಲನ ವೃತ್ತಿಯನ್ನು ಬಣ್ಣಿಸುವ ಪದವು מִקְנֶה *(ಮಿಸ್ಕನೆಹ)* ಎಂದಾಗಿದೆ, ಅದು "ಹಿಂಡುಗಳಾಗಿ ಕೂಡಿಸಲ್ಪಡುವ ಸಕಲ ಪ್ರಾಣಿಗಳನ್ನು ಒಳಗೊಂಡಿರುತ್ತದೆ," ಉದಾಹರಣೆಗೆ ಕುರಿಗಳು, ಮೇಕೆಗಳು, ದನಕರುಗಳು, ಕತ್ತೆಗಳು, ಮತ್ತು ಒಂಟೆಗಳು (47:16, 17; ವಿಮೋಚನಕಾಂಡ 9:3).[19] ಆದದರಿಂದ, ವಾಕ್ಯದಲ್ಲಿ ನಿಜವಾಗಿಯೂ ಯಾವದೇ ತದ್ವಿರುದ್ಧತೆಯು ಇರುವದಿಲ್ಲ.

ಆದಾಳ ಇನ್ನೊಬ್ಬ ಮಗನು **ಯೂಬಾಲ**, ಈತನು **ಕಿನ್ನರಿಕೊಳಲುಗಳನ್ನು ನುಡಿಸುವವರ ಮೂಲ ಪುರುಷನು** ಅಥವಾ ತಂತಿವಾದ್ಯ ಮತ್ತು ಕೊಳಲು (NIV) ನುಡಿಸುವವರಿಗೆ ಮೂಲ ಪುರುಷ ಎಂದು ಕರೆಯಲ್ಪಟ್ಟಿದ್ದಾನೆ, ಯಾಕೆಂದರೆ ಈ ನಂತರದವುಗಳು ಈ ಆರಂಭಿಕ ನಾಗರೀಕತೆಯ ಪೂರ್ವ ವಾದ್ಯಗಳಿಂದಲೇ ಅಭಿವೃದ್ಧಿಗೊಂಡಿರುತ್ತವೆ. "ಕಿನ್ನರಿ" ಕೈಯಿಂದ ನುಡಿಸಲ್ಪಡುವ ತಂತಿಗಳುಳ್ಳ ಸಾಧನವಾಗಿತ್ತು (1 ಸಮುವೇಲ 16:23), ಮತ್ತು "ಕೊಳಲು" ಒಂದು ಜೊಂಡಿನಿಂದ ತಯಾರಿಸಿದ ವಾದ್ಯವಾಗಿದ್ದು ಹಳೆಯ ಒಡಂಬಡಿಕೆಯಲ್ಲಿ ಕೇಲವೇ ಸಾರಿ ಪ್ರಸ್ತಾಪಿಸಲ್ಪಟ್ಟಿದೆ, ವಿಶೇಷವಾಗಿ ಕಿನ್ನರಿಯ ಜೊತೆಯಲ್ಲಿ ಪ್ರಸ್ತಾಪಿಸಲ್ಪಟ್ಟಿದೆ (ಯೋಬ 21:12; 30:31).

ಚಿಲ್ಲಾಳಿಗೆ ಹುಟ್ಟಿದ್ದ **ತೂಬಲ್‌ಕಾಯಿನ**ನು ನಾಗರೀಕತೆಯ ಲೋಹದ ಕೆಲಸಗಳ ತಂತ್ರಜ್ಞಾನದ ಜನಕನಾದನು. ಆತನನ್ನು **ಕುಲಿಮೆ ಮಾಡಿ ಕಬ್ಬಿಣ ತಾಮ್ರದ ಆಯುಧಗಳನ್ನು ಕಲ್ಪಿಸಿದವನು** ಎಂದು ಕರೆಯಲಾಗಿದೆ. ಹೇಗೂ, ಆತನು "ಕಲ್ಪಿಸಲು" ಶಕ್ತನು ಎಂದು ಹೇಳುವುದು ಮಾನವನ ಇತಿಹಾಸದ ಅತ್ಯಂಥ ಆರಂಭಿಕ ಕಾಲದಲ್ಲಿದ್ದದಕ್ಕಿಂತಲೂ ಹೆಚ್ಚು ಮುಂದುವರೆದಂಥ ಅದುರು ಕರಗಿಸಿ ಲೋಹ ತೆಗೆಯುವ ವಿಜ್ಞಾನದ ಚಿತ್ರಣವೊಂದನ್ನು ಮನಸ್ಸಿಗೆ ಬರುವಂತೆ ಮಾಡುತ್ತದೆ. לָטַשׁ *(ಲಟಾಶ್)* ಎಂಬ ಇಬ್ರಿಯ ಮೂಲಪದದ ಹೆಚ್ಚು ನಿಖರವಾದ ಅನುವಾದವೆಂದರೆ, "ಹದ" ಮಾಡುವದು, "ಹೊಡೆಯುವದು," ಅಥವಾ "ಸುತ್ತಿಗೆಯಿಂದ ಹೊಡೆ" ಎಂದಾಗಿರುತ್ತದೆ.[20] ಅದರ ಜೊತೆಗೆ, "ಹಿತ್ತಾಳೆ" (נְחֹשֶׁת, *ನೆಕೊಶೆಥ್)* ಎಂದು ಅನುವಾದಿಸಲ್ಪಟ್ಟಿರುವ ಪದದ ಮೂಲಭೂತ ಅರ್ಥವು ವಾಸ್ತವಿಕದಲ್ಲಿ "ತಾಮ್ರ" ಎಂದಿರುತ್ತದೆ,[21] ಅದನ್ನು ಬಳಸಿ ತೂಬಲ್‌ಕಾಯಿನನು ಸಾಧನಗಳನ್ನು ನಿರ್ಮಿಸುತ್ತಿದ್ದನು. ಕ್ರಿ.ಪೂ. ನಾಲ್ಕನೆಯ ಶತಮಾನದ ಕಡೆಯ ಭಾಗ ಅಥವಾ ಮೂರನೆಯ ಶತಮಾನದ ಆರಂಭಿಕದ ಕಾಲದ ಬಳಿಕವಷ್ಟೆ ತಾಮ್ರವನ್ನು ತವರದ ಜೊತೆಗೆ ಮಿಶ್ರಣ ಮಾಡಿ ಗಟ್ಟಿಯಾದ ಲೋಹವನ್ನು ರೂಪಿಸುವದಕ್ಕೆ ಆರಂಭಿಸಿದ್ದರು.

ಅಷ್ಟುಮಾತ್ರವಲ್ಲದೆ, "...ಕಬ್ಬಿಣ ಆಯುಧಗಳನ್ನು" ಎಂದು ಉಲ್ಲೇಖಿಸಲ್ಪಟ್ಟಿರುವದು ಈ ಆರಂಭಿಕ ಕಾಲದಲ್ಲಿ ಅತ್ಯಾಧುನಿಕ ಸಾಧನಗಳು ಮತ್ತು ಆಯುಧಗಳು ಲಭ್ಯವಿದ್ದವು ಎಂಬ ಯೋಚನೆಯನ್ನು ಒಬ್ಬನು ಮಾಡಕೂಡದು. ಗಣಿ ಹಾಗೂ ಕುಲುಮೆ ಮಾಡುವ ಕೆಲಸವು ಕ್ರಿ.ಪೂ. 1400 ತನಕವೂ ಅನಾಟೊಲಿಯದ ಹಿತ್ತೀಯರೊಳಗೆ ಆರಂಭಗೊಂಡಿರಲಿಲ್ಲವಾದ್ದರಿಂದ, ಮಧ್ಯಪ್ರಾಚ್ಯದಲ್ಲಿ ಲಭ್ಯವಿದ್ದ ಸಣ್ಣ ಪ್ರಮಾಣದ ಕಬ್ಬಿಣವು ಪ್ರಮುಖವಾಗಿ ಉಲ್ಕಾಶಿಲೆಗಳಿಂದ ಬಂದಿರಬಹುದಾಗಿದೆ. ಉಲ್ಕಾಶಿಲೆಯಿಂದ ಬಂದ ಕಬ್ಬಿಣದ ವಿವಿಧ ಸಾಮಗ್ರಿಗಳು ಮತ್ತು ಆಯುಧಗಳು ಐಗುಪ್ತ ಮತ್ತು ಮೆಸಪೋತಾಮ್ಯಗಳಲ್ಲಿ ಕಂಡು ಹಿಡಿಯಲ್ಪಟ್ಟಿದ್ದು ಕ್ರಿ.ಪೂ. ಮೂರನೆಯ ಸಹಸ್ರಮಾನಕ್ಕೆ ಸೇರಿದವುಗಳಾಗಿವೆ. ಕೆಲವು

ಭೂಮಂಡಲದಲ್ಲಿನ ಕಬ್ಬಿಣ ಸಾಮಗ್ರಿಗಳು ಕಂಡು ಹಿಡಿಯಲ್ಪಟ್ಟಿರುತ್ತವೆಂಬುದು ನಿಜವೇ ಆಗಿದ್ದರೂ, ಅವುಗಳ ಕಳಪೆ ಮಟ್ಟದ ತಾಮ್ರದ ಮಿಶ್ರಣವು ನಾಗರೀಕತೆಯ ಪೂರ್ವ ಮನುಷ್ಯನು ಬಳಸುತ್ತಿದ್ದ ಉಲ್ಕಾಶಿಲೆಯಿಂದ ಕೂಡಿದ ಕಬ್ಬಿಣಕ್ಕಿಂತ ಭಿನ್ನವಾಗಿರುತ್ತದೆ. ಈ ಕಬ್ಬಿಣವು "ಬಂಗಾರವನ್ನು ಪರಿಶೋಧಿಸುವದರಿಂದ ಸಿಕ್ಕುವ ಉಪ ಸಾಮಗ್ರಿ"[22] ಆಗಿ ಲಭ್ಯವಿತ್ತೆಂಬುದಾಗಿ ಪರಿಣಿತರು ನಂಬುತ್ತಾರೆ.

ಯಾಬಾಲ, ಯೂಬಾಲ, ಮತ್ತು ತೂಬಲ್‌ಕಾಯಿನ ಇವರು ಸಾಂಸ್ಕೃತಿಕವಾಗಿ ನಾಗರೀಕತೆಗೆ ನೀಡಿದ ಕೊಡುಗೆಗಳು ಮುಂದಕ್ಕೆ ಇಟ್ಟ ಅತ್ಯಾದ್ಭುತವಾದ ದಾಪುಗಾಲುಗಳೇನೂ ಆಗಿರಲಿಲ್ಲ (ಕನಿಷ್ಠ, ಆಧುನಿಕ ಮಾನದಂಡಗಳಿಗೆ ಅನುಗುಣವಾಗಿ). ಹೀಗಿದ್ದರೂ, ಬೈಬಲಿನ ಲೇಖಕನು ಕೆಲವೊಂದು ಕ್ಷೇತ್ರಗಳಲ್ಲಿ ಅವರಿಗೆ ಪ್ರಗತಿಯನ್ನು ಸಾಧಿಸಿದವರೆಂಬ ಶ್ರೇಯಸ್ಸನ್ನು ನೀಡುತ್ತಾನೆ. ಅವರು ದೀರ್ಘಕಾಲದಲ್ಲಿ ಕ್ರಮೇಣವಾಗಿ ಅಭಿವೃದ್ಧಿಗೊಂಡಂತಹ ಸಾಂಸ್ಕೃತಿಕ ಕುಶಲತೆಗಳಿಗೆ ಹಾಗೂ ವೃತ್ತಿಗಳಿಗೆ ಪೂರ್ವಗಾಮಿಗಳು ಅಥವಾ ಪೂರ್ವಜನಕರಾಗಿದ್ದರು. ಸಂಸ್ಕೃತಿ ಮತ್ತು ಆವಿಷ್ಕಾರಗಳಲ್ಲಿ ಮುನ್ನಡೆಯನ್ನು ಸಾಧಿಸುವದರ ಜೊತೆಗೆ ಪಾಪದಲ್ಲಿಯೂ ಅಭಿವೃದ್ಧಿಯುಂಟಾಗಿತ್ತು. ನಾಗರೀಕತೆಯ ಅರಳುವಿಕೆಯಿಂದ ಮನುಷ್ಯನನ್ನು ಅವನಲ್ಲಿ ಉತ್ತಮ ವ್ಯಕ್ತಿಯಾಗುವಂತೆ ಮಾಡಲಿಲ್ಲ, ತನ್ನ ಜೊತೆಗೆ ಮನುಷ್ಯನನ್ನು ಹೆಚ್ಚು ಗೌರವದಿಂದ ಕಾಣುವಂತಾಗಲಿ, ಅಥವಾ ದೇವರ ಕಡೆಗೆ ತನ್ನ ಹೃದಯದಲ್ಲಿ ಹೆಚ್ಚು ಭಯಭಕ್ತಿಯ ಮನೋಭಾವವನ್ನು ಹುಟ್ಟಿಸಿಕೊಳ್ಳುವಂತಾಗಲಿ ಮಾಡಲಿಲ್ಲ.

ಕಾಯಿನನ ಸಂತತಿಯವರು ಮಾಡಿದ ಏಳಿಗೆಗಳು ಸ್ವತಃ ಕೆಟ್ಟವುಗಳೇನೂ ಆಗಿರಲಿಲ್ಲ. ವಾಸ್ತವಿಕದಲ್ಲಿ, ಈ ವ್ಯಕ್ತಿಗಳು ಬಳಸಿದ ಭೌತಿಕ ಆಶೀರ್ವಾದಗಳು ಮತ್ತು ಪ್ರತಿಭೆಗಳು ಕೃಪಾಭರಿತನಾದ ಸೃಷ್ಟಿಕರ್ತನ ವರದಾನಗಳಾಗಿದ್ದವು ಮತ್ತು ಅವುಗಳು ಭೂಮಿಯ ಮೇಲೆ ಮನುಷ್ಯನ ಜೀವಿತವನ್ನು ಉತ್ತಮಗೊಳಿಸುವ ಉದ್ದೇಶಕ್ಕೋಸ್ಕರ ಆಗಿದ್ದವು. ಹೇಗೂ, ವರಗಳು ಎಡವಿ ಬೀಳುವದಕ್ಕೆ ಕಾರಣವಾಗಬಲ್ಲವು: ಮನುಷ್ಯನು ತನಗೆ ದೇವರಿಂದ ಕೊಡಲ್ಪಟ್ಟಿರುವ ಸಾಮರ್ಥ್ಯದೊಂದಿಗೆ ಹೆಚ್ಚೆಚ್ಚು ಸಾಧನೆಯನ್ನು ಮಾಡಿದ ಹಾಗೆ, ಆತನು ಹೆಚ್ಚೆಚ್ಚಾಗಿ ತನ್ನ ಗರ್ವದಿಂದ ಉಬ್ಬಿ ಹೋಗುವವನಾಗಬಹುದು; ಆತನು ತನ್ನ ಸಾಧನೆಗಳಲ್ಲಿ ಹೆಚ್ಚಳ ಪಟ್ಟುಕೊಳ್ಳುವದಕ್ಕೆ ಇನ್ನಷ್ಟು ಒಲವು ತೋರಿಸುವನು ಮತ್ತು ತನ್ನ ಜೀವಿತದಲ್ಲಿ ದೇವರು ಅಗತ್ಯವೆಂಬ ಅನಿಸಿಕೆ ಅವನಲ್ಲಿ ಕಡಿಮೆಯಾಗುತ್ತಾ ಹೋಗುವದು. ಸ್ವತಃ, ಸಂಸ್ಕೃತಿಯು ಜನರನ್ನು ಉತ್ತಮ ವ್ಯಕ್ತಿಗಳನ್ನಾಗಿ ಮಾಡುವದಿಲ್ಲ. ಅದು ಅವರನ್ನು ನೈತಿಕವಾಗಿ ಸರಿಯಾದವರನ್ನಾಗಿ, ಒಬ್ಬರ ಕಡೆಗೆ ಒಬ್ಬರು ಪ್ರೀತಿಯುಳ್ಳವರಾಗಿರುವಂತೆ, ಅಥವಾ ದೇವರ ಕಡೆಗೆ ಕೃತಜ್ಞರು ಹಾಗೂ ಭಯಭಕ್ತಿಯುಳ್ಳವರಾಗಿರುವಂತೆ ಮಾಡುವದಿಲ್ಲ. ಸಂಸ್ಕೃತಿಯು ಪಾಪದ ಸಮಸ್ಯೆಯನ್ನು ಬಗೆ ಹರಿಸುವದಿಲ್ಲ. ಪಾಪವನ್ನು ಸರಿಪಡಿಸಿಕೊಳ್ಳದಿದ್ದರೆ, ಅದು ಸಮಾಜದಲ್ಲಿ ಗಲಭೆಯನ್ನು ಮತ್ತು ವಿಭಜನೆಯನ್ನು ಉಂಟು ಮಾಡುವುದು. ಇದು ಲೆಮೆಕನ ಪ್ರತೀಕಾರದ ಮಾತುಗಳಲ್ಲಿ ಮತ್ತು ಅದರ ನಂತರ ನಡೆದ ಘಟನೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

**ವಚನ 23.** ಇಬ್ಬರು **ಹೆಂಡರನ್ನು** ಮಾಡಿಕೊಳ್ಳುವ ಮೂಲಕ **ಲೆಮೆಕನು** ಮದುವೆಯ ವಿಷಯದಲ್ಲಿ ದೇವರು ಇಟ್ಟಿದ್ದ ಮೂಲ ಯೋಜನೆಯಿಂದ ದಾರಿ ತಪ್ಪಿದ್ದನು ಮತ್ತು **ಅದಾ ಚಿಲ್ಲಾ**ಳರನ್ನು ಒಂದು ಪೈಪೋಟಿಯ ಮತ್ತು ಅವಮಾನಕರ ಸ್ಥಿತಿಗೊಳಪಡಿಸಿದನು. ಲೆಮೆಕನು ತನಗೆ ತೊಂದರೆ ಮಾಡಬಹುದಾದ ಯಾವದೇ ವ್ಯಕ್ತಿಯ ಮೇಲೆ ತನ್ನ ಶೌರ್ಯವನ್ನು ಮತ್ತು ದೊರೆತನವನ್ನು ತೋರ್ಪಡಿಸುತ್ತಿದ್ದನು, ಮತ್ತು ಆತನು ತನ್ನ ಹೆಂಡತಿಯರಿಗೆ ತನ್ನ ಮಾತಿಗೆ

ಕಿವಿಗೊಡಿರಿ ಎಂದು ಮತ್ತು ಅವನ ಮಾತನ್ನು ಕೇಳಿರಿ ಎಂದು ಒತ್ತಾಯಿಸುವ ಮೂಲಕ ತನ್ನ ದುರಹಂಕಾರವನ್ನು ತೋರ್ಪಡಿಸಿದ್ದನು. ಆತನ ಮಾತುಗಳನ್ನು ಒಂದು ಪದ್ಯವಾಗಿ ತಿಳಿಸಲಾಗಿರುತ್ತದೆ. ಆತನ ಮಾತಿನಲ್ಲಿ ಯಾವದೇ ಆಯುಧದ ಬಗ್ಗೆ ಪ್ರಸ್ತಾಪಿಸಿಲ್ಲವಾದರೂ, ಅದು ಅನೇಕ ಸಾರಿ "ಕತ್ತಿಯ ಹಾಡು" ಎಂದು ಕರೆಯಲ್ಪಟ್ಟಿರುತ್ತದೆ. ಲೆಮೆಕನು ಬಡಾಯಿ ಕೊಚ್ಚಿಕೊಳ್ಳುವುದು ಬಹುಶಃ ಆತನನ್ನು ಅಪರಾಜಿತನನ್ನಾಗಿ ಮಾಡಿದಂತಹ ಲೋಹದ ಆಯುಧವೊಂದನ್ನು ಅವನ ಮಗನಾದ ತೂಬಲ್‌ಕಾಯಿನನು ಸಿದ್ಧಪಡಿಸಿದ್ದನೆಂಬುದರ ಮೇಲೆ ಆಧಾರವಾಗಿದ್ದಿರಬಹುದು.

ಆತನ ಕುಚೋದ್ಯದ ಹಾಡಿನಲ್ಲಿ, ಲೆಮೆಕನು ತನ್ನ ಹೆಂಡತಿಯರನ್ನು ಬೇಡಿಕೊಳ್ಳುತ್ತಾ ಹೀಗೆ ಹೇಳಿದನು, **ನನಗೆ ಗಾಯಮಾಡಿದ ಒಬ್ಬ ಮನುಷ್ಯನನ್ನು ಕೊಂದೆನು; ನನ್ನನ್ನು ಹೊಡೆದ ಒಬ್ಬ ಪ್ರಾಯಸ್ಥನನ್ನು ಹತಮಾಡಿದೆನು.** ಈ ಹೇಳಿಕೆಯು ಅನುವಾದಕ್ಕೆ ಸಂಬಂಧಿಸಿದಂತೆ ಕನಿಷ್ಠ ಎರಡು ಪ್ರಶ್ನೆಗಳನ್ನು ಉದ್ಭವವಾಗುವಂತೆ ಮಾಡುತ್ತದೆ. ಮೊದಲನೆಯದಾಗಿ, ಲೆಮೆಕನು ತನ್ನ ಮೇಲೆ ದಾಳಿ ಮಾಡಬಹುದಾದ ಯಾವದೇ ವ್ಯಕ್ತಿಗೆ ಎಚ್ಚರಿಕೆಯನ್ನು ನೀಡುತ್ತಿದ್ದಾನೋ, ಅಥವಾ ಆತನು ಈಗಾಗಲೇ ನಡೆದಿರುವದಂಥ ಘಟನೆಯೊಂದನ್ನು ಸೂಚಿಸಿ ಹೇಳುತ್ತಿದ್ದಾನೋ? ಇಬ್ರಿಯ ವಾಕ್ಯದಲ್ಲಿ הָרַג *(ಹಾರಾಗ)* ಎಂಬುದರ ಪೂರ್ಣವಾಚಕ ಪದವು ಇರುತ್ತದೆ, ಅದು "[ನನಗೆ ಗಾಯವನ್ನುಂಟು ಮಾಡುವ ಯಾವನನ್ನೇ ಆಗಲಿ] ನಾನು ಕೊಲ್ಲುವೆನು"[23] ಎಂದಾಗುತ್ತದೆ ಎಂಬುದಾಗಿ ಕೆಲವರು ಅರ್ಥಮಾಡಿಕೊಂಡಿರುತ್ತಾರೆ. ಹೇಗೂ, ಬಹುಪಾಲು ಆಂಗ್ಲ ಆವೃತ್ತಿಗಳು NASBಯೊಂದಿಗೆ ಸಮ್ಮತಿಸುತ್ತವೆ ಮತ್ತು ಕ್ರಿಯಾಪದವನ್ನು ಒಂದು ಪೂರ್ಣವಾಚಕವಾಗಿ ಅನುವಾದಿಸುತ್ತವೆ ("ನಾನು ಕೊಂದಿರುತ್ತೇನೆ/ಹತಮಾಡಿರುತ್ತೇನೆ" ಅಥವಾ "ಕೊಂದೆನು"[24]). ಇದರರ್ಥವು ಲೆಮೆಕನು ಕೇವಲ ಕೊಲೆಗಾರನು ಮಾತ್ರವೇ ಆಗಿರಲಿಲ್ಲ, ಆದರೆ ತಾನು ಮಾಡಿದ ಕೃತ್ಯಕ್ಕಾಗಿ ಹೆಮ್ಮೆ ಪಟ್ಟುಕೊಳ್ಳುತ್ತಿದ್ದ ಒಬ್ಬ ಅಸಹ್ಯಪಡುವಂತಹ ಮನುಷ್ಯನು ಸಹ ಆಗಿದ್ದನು.

ಎರಡನೆಯದಾಗಿ, ಭಾಷೆಯ ಒಬ್ಬ ಮನುಷ್ಯನು ಕೊಲ್ಲಲ್ಪಡುವದನ್ನು ಸೂಚಿಸುತ್ತದೋ ಅಥವಾ ಇಬ್ಬರನ್ನೋ? NASBಯ ಅನುವಾದವು ಇಬ್ಬರನ್ನು ಎಂಬ ಸೂಚ್ಯಾರ್ಥವನ್ನು ನೀಡುತ್ತದೆ, ಯಾಕೆಂದರೆ ಆ ವಚನವು "ಒಬ್ಬ ಮನುಷ್ಯನನ್ನು" ಮತ್ತು ಒಬ್ಬ "ಪ್ರಾಯಸ್ಥನನ್ನು" ಎಂದು ಪ್ರಸ್ತಾಪಿಸುತ್ತದೆ, ಅನೇಕ ಆವೃತ್ತಿಗಳು יֶלֶד *(ಯೇಲೆದ)* ಎಂಬುದನ್ನು "ಯುವಕ"[25] ಎಂಬುದಾಗಿ ಅನುವಾದಿಸುತ್ತವೆ. ಪುನರಾವರ್ತನೆಯ ಉದ್ದೇಶವು "ಮನುಷ್ಯ" ಮತ್ತು "ಪ್ರಾಯಸ್ಥನು" ಎಂಬ ಪದಗಳು ಒಬ್ಬನೇ ವ್ಯಕ್ತಿಯನ್ನು ಸೂಚಿಸುತ್ತವೆ. ಈ ಪ್ರಕರಣದಲ್ಲಿ, "ಪ್ರಾಯಸ್ಥನು" ಎಂಬುದು ವ್ಯಕ್ತಿಯ ಶಕ್ತಿಯನ್ನು, ಆತನು ತನ್ನ ಜೀವನದ ಅತ್ಯುತ್ತಮ ದೆಸೆಯಲ್ಲಿದ್ದವನು ಎಂಬುದಾಗಿ ಸೂಚಿಸುತ್ತದೆ.

ಈ ಕುಚೋದ್ಯದ ಹಾಡಿನಲ್ಲಿ ಲೆಮೆಕನ ಮನೋಭಾವವು ಆತನ ಪೂರ್ವಜನಾದ ಕಾಯಿನನಿಗಿಂತಲೂ ಭಿನ್ನವಾಗಿತ್ತೆಂಬುದು ಗಮನಿಸತಕ್ಕದ್ದಾಗಿದೆ. ಎರಡನೆಯವನು ಕೊಲೆಯನ್ನು ಮಾಡಿ ನಂತರ ಅದನ್ನು ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದನು, ದೇವರು ಅವನನ್ನು ತಮ್ಮನು ಎಲ್ಲಿದ್ದಾನೆಂದು ಕೇಳಿದಾಗ ತನಗೇನೂ ತಿಳಿಯದೆಂಬಂತೆ ನಟಿಸಿದ್ದನು (4:9). ಅದಕ್ಕೆ ತದ್ವಿರುದ್ಧವಾಗಿ, ಲೆಮೆಕನು ತಾನು ಮಾಡಿದ ಕೃತ್ಯದ ಬಗ್ಗೆ ಹೆಮ್ಮೆಯಿಂದಿದ್ದನು ಮತ್ತು ತನ್ನ ಹೆಂಡತಿಯರು, ಬಹುಶಃ ಇತರರು ಇವನೆಷ್ಟು ಕ್ರೂರ ಮನುಷ್ಯನಾಗಿದ್ದನು ಎಂಬುದನ್ನು ತಿಳಿಯುವಂತಾಗಬೇಕೆಂದು ಅವರಿಗೆ ಅದರ ಬಗ್ಗೆ ಪ್ರಕಟಿಸುವದಕ್ಕೆ ಬಯಸಿದ್ದನು.

**ವಚನ 24.** ತನ್ನ ಅಪರಾಧದ ಕುರಿತಾದ ಘಟನೆಯನ್ನು ತಿಳಿಸಿದ ಮೇಲೆ, ಲೆಮೆಕನು

ಹೀಗೆ ಹೇಳಿದನು, **ಕಾಯಿನನನ್ನು ಕೊಂದವನಿಗೆ ಏಳರಷ್ಟು ಪ್ರತಿದಂಡನೆ ಬರುವದಾದರೆ ಲೆಮೆಕನನ್ನು ಹೊಡೆಯುವವನಿಗೆ ಎಪ್ಪತ್ತೇಳರಷ್ಟಾಗುವದಲ್ಲವೇ.** ಪುನಃ, ಇಲ್ಲಿ ಆತನ ತಾತ್ಪರ್ಯವು ಏನಾಗಿತ್ತೆಂಬುದು ಸ್ಪಷ್ಟವಾಗಿಲ್ಲ. NLT ತರ್ಜುಮೆಯು ಆ ವಿಚಾರವನ್ನು ಗ್ರಹಿಸಿಕೊಂಡಿರಬಹುದಾಗಿದೆ, "ಕಾಯಿನನ್ನು ಕೊಂದವನೊಬ್ಬನಿಗೆ ಏಳರಷ್ಟು ದಂಡನೆಯಾಗುವದಾದರೆ [4:15], ನನ್ನನ್ನು ಕೊಲ್ಲುವವನಿಗೆ ಏಳು ಎಪ್ಪತ್ತು ಸಾರಿ ದಂಡನೆಯಾಗುವದಲ್ಲವೇ!" ಇದು ಸರಿಯೇ ಆಗಿರುವದಾದರೆ, ಲೆಮೆಕನು ತಾನು ಮಾಡಿದ ಅಪರಾಧಕ್ಕೆ ಯಾವನಾದರೂ ಇವನಿಗೆ ದಂಡನೆಯನ್ನು ಒದಗಿಸುವದಾಧರೆ ಅವನು ಶಾಪಗ್ರಸ್ತನಾಗಲಿ ಎಂದು ಹೇಳುತ್ತಿದ್ದಾನೆ.

ಹೇಗೂ, ಅವನ ಪ್ರಾಣವನ್ನು ತೆಗೆದುಕೊಳ್ಳಲು *ಪ್ರಯತ್ನಿಸುವ* ಯಾವನಿಗೇ ಆಗಲಿ ಪ್ರತೀಕಾರ ಸಲ್ಲಿಸುವವನು *ತಾನೇ* (ಹೊರತು ದೇವರಲ್ಲ) ಎಂಬುದಾಗಿ ಲೆಮೆಕನು ಭಾವಿಸಿಕೊಂಡಿರಬಹುದಾಗಿದೆ. ಈ ಪ್ರಕರಣದಲ್ಲಿ, ಕಾಯಿನನ್ನು ಕೊಲ್ಲುವ ಯಾವದೇ ವ್ಯಕ್ತಿಗೆ ದೇವರು ಬರಮಾಡುವ ದಂಡನೆಗಿಂತಲೂ ತಾನು ನೀಡುವ ದಂಡನೆಯು ಇನ್ನೂ ಎಷ್ಟೋ ಅಧಿಕವಾಗಿರಲಿದೆ ಎಂಬುದಾಗಿ ಆತನು ದುರಹಂಕಾರದಿಂದ ಹೇಳುತ್ತಿದ್ದಾನೆ. "ಎಪ್ಪತ್ತೇಳರಷ್ಟು" ಎಂಬುದು ಒಂದು ಅತಿಶಯೋಕ್ತಿಯಾಗಿದ್ದು, ಅದರರ್ಥವು ಅತ್ಯಂತ ಗರಿಷ್ಠ ಪ್ರಮಾಣದ ದಂಡನೆಯಾಗುವುದು ಎಂದಾಗಿದೆ.[26] ಯುವಕನನ್ನು ಕೊಂದಕ್ಕಾಗಿ ಇವನಿಗೆ ಯಾವನಾದರೂ ದಂಡನೆಯನ್ನು ನೀಡಲು ಪ್ರಯತ್ನಿಸಿದರೆ, ಈತನು ಅವನನ್ನು ನಾಶಗೊಳಿಸುವನು. "7" ಅಂಕೆಯ ಬಳಕೆಯು ಸಂಪೂರ್ಣತೆ ಮತ್ತು ಪರಿಪೂರ್ಣತೆಯನ್ನು ಪ್ರತಿನಿಧಿಸುವದಾಗಿದ್ದು, ಬಹುಶಃ ದೇವರು ವಿಶ್ರಾಂತಿಯನ್ನು ತೆಗೆದುಕೊಂಡ ದಿನವೂ ಸೇರಿದಂತೆ ಸೃಷ್ಟಿಯ ಕಾರ್ಯದ ಏಳು ದಿನಗಳ ಚರಿತ್ರೆಯ ಮೇಲೆ ಆಧಾರವಾಗಿರಬಹುದಾಗಿದೆ. ಹೇಗೂ, ಲೆಮೆಕನು ಅದನ್ನು ಅಂತಿಮ ದುಷ್ಟತನದ ಅರ್ಥದಲ್ಲಿ ಬಳಸಿದನು.

ಅತಿಶಯೋಕ್ತಿಯಿಂದ ಕೂಡಿದ ಭಾಷೆಯ ಅರ್ಥವು ಲೆಮೆಕನು ಕೊಲ್ಲುವ ಯಂತ್ರವಾಗಲಿದ್ದನು, ಆದಿಕಾಂಡ 6:4, 5, 11ರಲ್ಲಿನ ಹಿಂಸಾಚಾರದ ಪರಾಕ್ರಮಿ ಮನುಷ್ಯರಿಗೆ ಪೂರ್ವಗಾಮಿಯಾಗಲಿದ್ದನು ಎಂದರ್ಥವಾಗಿರಬಹುದಾಗಿದೆ. ಆ ಕಾರಣದಿಂದಲೇ ಕಾಯಿನನ ವಂಶಾವಳಿಯ ದಾಖಲೆಯು ಏಳರಲ್ಲಿಯೇ ನಿಂತು ಹೋಗಿರಬಹುದಾಗಿದೆ: ಬಹುಶಃ ಲೇಖಕನು ಒತ್ತಿ ಹೇಳುವದಕ್ಕೆ ಬಯಸಿದ್ದೇನೆಂದರೆ, ಆದಾಮನಿಂದ ಏಳು ಸಂತತಿಯರು ಬರುವಷ್ಟರಲ್ಲಿಯೇ ನೈತಿಕ ಹಾಗೂ ಆತ್ಮೀಕ ಅವನತಿಯು - ದ್ವೇಷ ಹಾಗೂ ಕೊಲೆ ಮಾಡಬೇಕೆನ್ನುವ ಬಯಕೆಯು ಸೇರಿದಂತೆ - ಸಂಪೂರ್ಣತೆಯ ಮಟ್ಟದ ವರೆಗೂ ಅಧಿಕಗೊಂಡಿತ್ತು; ಮತ್ತು ಲೆಮೆಕನು ಅದರ ಸಂಕ್ಷೇಪಕಾರನಾಗಿದ್ದನು. ಭೂಮಿಯ ಮೇಲೆ ಅಟ್ಟಹಾಸವನ್ನು ಮಾಡಿದ ಇತರರ ಹೆಸರುಗಳನ್ನು ತಿಳಿಸುವುದು ಅನಾವಶ್ಯಕವಾಗಿರುತ್ತದೆ, ಆದರೆ ಅವರ ಪಾಪವು ಅಂತಿಮವಾಗಿ ಮಹಾ ಪ್ರಳಯಕ್ಕೆ ದಾರಿ ಮಾಡಿತ್ತು (6-8 ಅಧ್ಯಾಯಗಳು).

## ಸೇತನು ಮತ್ತು ಆತನ ಕುಟುಂಬ (4:25, 26)

**25ಆದಾಮನು ತಿರಿಗಿ ತನ್ನ ಹೆಂಡತಿಯನ್ನು ಕೂಡಲು ಆಕೆ ಗಂಡುಮಗುವನ್ನು ಹೆತ್ತು - ಕಾಯಿನನು ಕೊಂದುಹಾಕಿದ ಹೇಬೆಲನಿಗೆ ಬದಲಾಗಿ ದೇವರು ನನಗೆ ಬೇರೆ ಸಂತಾನವನ್ನು ನೇಮಿಸಿದನೆಂದು ಆ ಮಗುವಿಗೆ ಸೇತನೆಂಬ ಹೆಸರಿಟ್ಟಳು. 26ತರುವಾಯ ಸೇತನು ಸಹ ಮಗನನ್ನು ಪಡೆದು ಅವನಿಗೆ ಎನೋಷ್ ಎಂಬ ಹೆಸರಿಟ್ಟನು; ಆ ಕಾಲದಲ್ಲಿ ಯೆಹೋವ ಎಂಬ**

**ಹೆಸರನ್ನು ಹೇಳಿಕೊಂಡು ಆರಾಧಿಸುವದಕ್ಕೆ ಪ್ರಾರಂಭವಾಯಿತು.**

**ವಚನ 25.** ಆದಾಮನಿಂದ ಲೆಮೆಕನ ವರೆಗೂ ಏಳು ಸಂತತಿಯವರನ್ನು ಕ್ಲುಪ್ತವಾಗಿ ಪಟ್ಟಿ ಮಾಡಿದ ಬಳಿಕ, ಈ ವಚನವು ಕಾಯಿನನ ಸಂತತಿಯವರು ಮತ್ತು ಸೇತನ ವಂಶದ ನಡುವೆ ಸ್ಥಿತ್ಯಂತರವನ್ನು ಒದಗಿಸುತ್ತದೆ, ಸೇತನ ವಂಶಾವಳಿಯು ಈ ಮುಂದಿನಂತೆ ಇರುತ್ತದೆ. ಒಬ್ಬ ಪುರುಷನು (**ಆದಾಮನು** ಎರಡು ಸಾರಿ ಮತ್ತು ಕಾಯಿನ ಒಂದು ಸಾರಿ) **ತಿರಿಗಿ ತನ್ನ ಹೆಂಡತಿಯನ್ನು ಕೂಡಲು ಆಕೆ ಗಂಡುಮಗುವನ್ನು ಹೆತ್ತಳು** ಎಂದು ಲೇಖಕನು ಮೂರನೆಯ ಬಾರಿಗೆ ಹೇಳುತ್ತಾನೆ (4:1, 17, 25). ಹವ್ವಳು ಈ ಮಗನಿಗೆ **ಸೇತನೆಂಬ** ಹೆಸರನ್ನಿಟ್ಟಳು. ಇಬ್ರಿಯ ವಾಕ್ಯದಲ್ಲಿ, "ಸೇತ" (שֵׁת, *ಶೇತ್)* ಮತ್ತು ಹವ್ವಳ ಹೇಳಿಕೆಯ ನಡುವೆ ಒಂದು ಶಬ್ದಾಡಂಬರವು ಸಂಭವಿಸುತ್ತದೆ, **ಕಾಯಿನನು ಕೊಂದುಹಾಕಿದ ಹೇಬೆಲನಿಗೆ ಬದಲಾಗಿ ದೇವರು ನನಗೆ ಬೇರೆ ಸಂತಾನವನ್ನು ನೇಮಿಸಿದನು** [שָׁת, *ಶಾತ್]*.

ಈ ಮಾತುಗಳು ಕಾಯಿನನು ಹುಟ್ಟಿದಾಗ ಹವ್ವಳು ನುಡಿದಿದ್ದ ಮಾತುಗಳಿಗಿಂತ (4:1) ವ್ಯತ್ಯಾಸವಾಗಿದ್ದವು, ಅಲ್ಲಿ ಆಕೆಯು ಮುಖ್ಯ ಗಮನವನ್ನು ತನ್ನ ಮೇಲೆ ("ನಾನು ...") ಹೊಂದಿದ್ದಳು. ಸೇತನು ಹುಟ್ಟಿದಾಗ, ಆಕೆಯ ಮುಖ್ಯ ಗಮನವು ಯೆಹೋವನ ಮೇಲೆ ಇತ್ತು ("ದೇವರು ..."). ಇದು ಹವ್ವಳಲ್ಲಿ ಒಂದಿಷ್ಟು ಆತ್ಮೀಕ ಬೆಳವಣಿಗೆ ಆಗಿತ್ತೆಂಬುದನ್ನು ಸೂಚಿಸಬಹುದಾಗಿದೆ. ಆಕೆಯು ಸೇತನ ಜನ್ಮವನ್ನು ಕಾಯಿನನು ಕೊಂದಿದ್ದ ಆಕೆಯ ನೀತಿಯುಳ್ಳ ಮಗನಾದ ಹೇಬೆಲನ ನಷ್ಟಕ್ಕೆ ಬದಲಾಗಿ ನೀಡಿದ ಪ್ರತ್ಯುತ್ತರವೆಂಬುದಾಗಿ ಕಂಡಳು. ಅದರ ಜೊತೆಗೆ, ಆಕೆಯು ಸೇತನನ್ನು ಬೇರೆ "ಸಂತಾನ" (זֶרַע, *ಝುರಾ*) ಎಂದು ಕರೆದಳು, ಅದರ ಅರ್ಥವು "ಸಂತತಿ" ಎಂದಾಗಿದೆ. ಈ ಪರಿಭಾಷೆಯು ಒಂದು ದಿನ ಸರ್ಪದ ತಲೆಯನ್ನು ಜಜ್ಜಲಿದ್ದ ವಾಗ್ದಾನ ಮಾಡಲ್ಪಟ್ಟ "ಸಂತಾನ"ವನ್ನು ಜ್ಞಾಪಿಸುವದಾಗಿದೆ (3:15). ಆಕೆಯು ಈ ಅಸ್ಪಷ್ಟವಾದ ವಾಗ್ದಾನವನ್ನು ಹೇಗೆ ವ್ಯಾಖ್ಯಾನಿಸಿದ್ದಳೋ ಎಂಬುದು ನಮಗೆ ತಿಳಿಯದಾದರೂ (3:15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಆಕೆಯು ಸೇತನ ಮೂಲಕವಾಗಿ ಹೇಬೆಲನಂತಹ ನೀತಿಯುಳ್ಳ ಸಂತತಿಯೊಂದು ಬರುವದೆಂಬುದಾಗಿ ನಿರೀಕ್ಷಿಸಿದ್ದಳೆಂಬುದು ಆಕೆಯ ಹೇಳಿಕೆಯಿಂದ ಸೂಚ್ಯಾರ್ಥವಾಗಿರುತ್ತದೆ. ಆದಿಕಾಂಡದ ಉಳಿದ ಭಾಗದಲ್ಲಿ ಬಣ್ಣಿಸಲಾಗಿರುವ ಅನೇಕರು ಈ ನಿರೀಕ್ಷೆಗೆ ತಕ್ಕಂತೆ ಇರುವ ಹಾಗೆ ತೋರುತ್ತದೆ.

**ವಚನ 26. ಸೇತನ** ಚೊಚ್ಚಲು ಮಗನಾದ **ಎನೋಷ್** ಹುಟ್ಟಿದ ಬಗ್ಗೆ ಸಾರುವಿಕೆಯು ವಾಗ್ದಾನ ಮಾಡಲ್ಪಟ್ಟ "ಸಂತಾನ"ದ ನಿರೀಕ್ಷೆಯು ಮುಂದುವರೆಯಿತು ಎಂದರ್ಥವಾಗುತ್ತದೆ. "ಎನೋಷ್" (אֱנוֹשׁ, *ಎನೋಷ್)* ಎಂಬುದು אָדָם (*ಆದಾಮ*; ನೋಡಿರಿ 1:26, 27; 5:1–5) ಎಂಬುದರಂತೆಯೇ ಇನ್ನೊಂದು ಪದವಾಗಿದೆ. ಸಾಮಾನ್ಯವಾಗಿ ಅದರ ಅರ್ಥವು "ಮನುಷ್ಯ" ಎಂದಾಗಿರಬಲ್ಲದು (ಯೋಬ 36:25; ಕೀರ್ತನೆ 8:4), ಮತ್ತು ಇದು (ಇಲ್ಲಿ ಮತ್ತು 5:6–11ರಲ್ಲಿ) ಒಬ್ಬ ನಿರ್ದಿಷ್ಟವಾದ ವ್ಯಕ್ತಿಯ ಹೆಸರಾಗಿರುತ್ತದೆ. ಎನೋಷನ ಪ್ರಭಾವದ ಮೂಲಕವಾಗಿ, ಜನರು **ಆ ಕಾಲದಲ್ಲಿ ಯೆಹೋವ ಎಂಬ ಹೆಸರನ್ನು ಹೇಳಿಕೊಂಡು ಆರಾಧಿಸುವದಕ್ಕೆ ಪ್ರಾರಂಭವಾಯಿತು.** ಈ ಮಾತುಗಳು ಆದಿಕಾಂಡದಲ್ಲಿ ಪೂರ್ವಜರ ಧಾರ್ಮಿಕ ಚಟುವಟಿಕೆಯನ್ನು ಸಾರಾಂಶಗೊಳಿಸುವದಕ್ಕೆ ಸಾಮಾನ್ಯವಾಗಿ ಬಳಸಲ್ಪಡುತ್ತವೆ (12:8; 13:4; 21:33; 26:25). ಇದು ಆರಾಧನೆಯನ್ನು, ಸಾಮಾನ್ಯವಾಗಿ ಪ್ರಾರ್ಥನೆ ಮತ್ತು ಯೆಹೋವನಿಗೆ ಯಜ್ಞವನ್ನು ಅರ್ಪಿಸುವದರ ಕುರಿತು ಸೂಚಿಸುತ್ತದೆ. ಲೇಖಕನು ಕುರಿಕಾಯುವಿಕೆ, ಸಂಗೀತ, ಮತ್ತು ಲೋಹಗಳ ಬಳಕೆಯ ಮೂಲೋತ್ಪತ್ತಿಗಳ ಬಗ್ಗೆ ಹೇಳಿದ್ದ ಪ್ರಕಾರವೇ, ಇಲ್ಲಿ ಆತನು ದೇವರನ್ನು ನಿಯತಕ್ರಮವಾಗಿ ಆರಾಧಿಸುವದರ ಬಗ್ಗೆ ಉಲ್ಲೇಖಿಸುತ್ತಿದ್ದಾನೆ.[27]

# ಅನ್ವಯಿಸುವಿಕೆ

**ಪಾಪದ ಅಗಲುವಿಕೆ (4:1-16)**

ದೇವರ ಧರ್ಮಶಾಸ್ತ್ರವನ್ನು ಮೀರುವದೇ ಪಾಪವಾಗಿರುತ್ತದೆ (1 ಯೋಹಾನ 3:4), ಅದು ಮೌಖಿಕ ಧರ್ಮಶಾಸ್ತ್ರವಾಗಿರಬಹುದು, ಲಿಖಿತ ಧರ್ಮಶಾಸ್ತ್ರವಾಗಿರಬಹುದು, ಅಥವಾ ಮನುಷ್ಯನ ಹೃದಯದಲ್ಲಿ ಬರೆದಿರುವ ಧರ್ಮಶಾಸ್ತ್ರವಾಗಿರಬಹುದು (ರೋಮಾ 2:12–15). ದೇವರ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟವನಾಗಿ, ಪ್ರತಿಯೊಬ್ಬ ವ್ಯಕ್ತಿಯು ತನ್ನೊಳಗೆ ಅಂತರ್ಗತವಾಗಿರುವ ನೈತಿಕ ಮನಸ್ಸಾಕ್ಷಿಯನ್ನು ಹೊಂದಿದ್ದಾನೆ. ಅತ್ಯಂಥ ಆರಂಭಿಕ ಕಾಲದಿಂದಲೇ, ಬರವಣಿಗೆಯು ಆವಿಷ್ಕರಿಸಲ್ಪಡುವ ಮುನ್ನವೇ, ದೇವರು ತನ್ನ ಚಿತ್ತವನ್ನು ಮನುಷ್ಯರಿಗೆ ಮೌಖಿಕವಾಗಿ ತಿಳಿಯಪಡಿಸಿದ್ದನು, ಆತನು ಆದಾಮ ಮತ್ತು ಹವ್ವ, ಕಾಯಿನ, ನೋಹ, ಹಾಗೂ ಇತರರಿಗೆ ಹಾಗೆಯೇ ತಿಳಿಸಿದ್ದನು.

ದೇವರ ಕಟ್ಟಳೆಗಳು ಜನರಿಗೆ ಜೀವನದಲ್ಲಿ ಸಂತೋಷದಿಂದ ವಂಚಿತರಾಗುವಂತೆ ಮಾಡುವದಕ್ಕೋಸ್ಕರ ಸ್ವೇಚ್ಛಾನುಸಾರವಾಗಿ ನೀಡಲ್ಪಟ್ಟಿರುವ ನಿಯಮಗಳು ಮತ್ತು ನಿಷೇಧಾಜ್ಞೆಗಳು ಆಗಿರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ದೇವರು ಒಂದು ಸಮೃದ್ಧವಾದ, ಸಾರ್ಥ ಜೀವನವನ್ನು ನಡಿಸುವದಕ್ಕೆ ಮಾರ್ಗಸೂಚಿಗಳ ರೂಪದಲ್ಲಿ ತನ್ನ ಆಜ್ಞೆಗಳನ್ನು ಅನುಗ್ರಹಿಸಿದ್ದನು ಪಾಪವು ಎಂದಿಗೂ ವೈಯಕ್ತಿಕವಲ್ಲದ ಕಟ್ಟಳೆಗಳನ್ನು ಉಲ್ಲಂಘಿಸುವದರ ಕುರಿತು ಆಗಿರಲೇ ಇಲ್ಲ; ಪಾಪಿಗಳು ಅಂತಿಮವಾಗಿ ದೈವಿಕ ಆಜ್ಞೆಗಳಿಗೆ ಅವಿಧೇಯರಾಗುವ ಮೂಲಕವಾಗಿ ತಮ್ಮನ್ನೇ ಉಲ್ಲಂಘಿಸಿಕೊಳ್ಳುತ್ತಾರೆ.

*ತಮ್ಮೊಳಗೆ ಅಗಲುವಿಕೆ.* ಪಾಪವು ಮಾನವ ಮನಃಸ್ಥಿತಿಯ ಮೇಲೆ ವಿನಾಶಕಾರಿ ಪರಿಣಾಮಗಳನ್ನು ಹೊಂದಿರುತ್ತದೆ. ಅದು ಮಾನವನ ವ್ಯಕ್ತಿತ್ವದ ಅತಿ ಆಳವಾದ ಮಟ್ಟದಲ್ಲಿ ಅಗಲುವಿಕೆಯನ್ನುಂಟು ಮಾಡುತ್ತದೆ. ಪಾಪಿಯು ಸ್ವತಃ ಹೃದಯಂತರಾಳದಲ್ಲಿ ಒಂದು ಆಂತರೀಕ ಯುದ್ಧವನ್ನು ಅನುಭವಿಸುತ್ತಿರುತ್ತಾನೆ. ಪೌಲನು ಈ ಹೋರಾಟದ ಬಗ್ಗೆ ಬಣ್ಣಿಸುತ್ತಾನೆ:

> ನಾನು ಮೆಚ್ಚುವ ಒಳ್ಳೇ ಕಾರ್ಯವನ್ನು ಮಾಡದೆ ಮೆಚ್ಚದಿರುವ ಕೆಟ್ಟ ಕಾರ್ಯವನ್ನೇ ಮಾಡುವವನಾಗಿದ್ದೇನೆ ... ಆದರೆ ನನ್ನ ಅಂಗಗಳಲ್ಲಿ ಬೇರೊಂದು ನಿಯಮ ಉಂಟೆಂದು ನೋಡುತ್ತೇನೆ. ಅದು ನನ್ನ ಮನಸ್ಸಿನಲ್ಲಿರುವ ನಿಯಮಕ್ಕೆ ವಿರುದ್ಧವಾಗಿ ಕಾದಾಡಿ ನನ್ನನ್ನು ಸೆರೆಹಿಡಿದು ನನ್ನ ಅಂಗಗಳಲ್ಲಿರುವ ಪಾಪದ ನಿಯಮಕ್ಕೆ ವಶಮಾಡುವಂಥದಾಗಿದೆ. ಅಯ್ಯೋ, ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! (ರೋಮಾ 7:19, 23 24).

ಈ ವಿಧವಾದ ಹೋರಾಟವು, ಚಿಕ್ಕವರಿಂದ ದೊಡ್ಡವರ ತನಕ, ಒಬ್ಬನು ಪಾಫದ ವಿಷಯದಲ್ಲಿ ಹೇಗೆ ಕ್ರಮ ತೆಗೆದುಕೊಳ್ಳುವನು ಎಂಬುದನ್ನಾಧರಿಸಿ ಎಲ್ಲಾ ಮಾನವರಲ್ಲಿಯೂ ನಡೆಯುತ್ತದೆ. ಪಾಪವನ್ನು ಮುಚ್ಚಿಕೊಳ್ಳುವದಕ್ಕೆ ಪ್ರಯತ್ನಿಸುವ, ಪಾಪಭರಿತ ಹಾಗೂ ವಿನಾಶಕಾರಿ ಜೀವನಶೈಲಿಯಲ್ಲಿ ಮುಂದುವರೆಯುತ್ತಲೇ ತಾನು ನೀತಿವಂತನೆಂಬಂತೆ ನಟಿಸುವ ವ್ಯಕ್ತಿಯು, ಮುಂದೆ ಆತ್ಮೀಕವಾಗಿ ಒಬ್ಬ ಛಿದ್ರಮನಸ್ಕನಾಗುತ್ತಾನೆ. ಕಾಯಿನನಿಗೆ ಹೀಗೆಯೇ ಸಂಭವಿಸಿರುವಂತೆ ಕಾಣುತ್ತದೆ: ಕಠಿಣ ಪರಿಶ್ರಮದಿಂದ ಒಬ್ಬ ಕೃಷಿಕನಾಗಿ ದುಡಿದು ತನ್ನ ಬೆಳೆಯಲ್ಲಿ ಕೆಲವನ್ನು ದೇವರಿಗೆ ಕಾಣಿಕೆಯಾಗಿ ತರುವ ಮೂಲಕ, ಆತನು ಜವಾಬ್ದಾರಿಯುಳ್ಳವನೂ ಧಾರ್ಮಿಕವಾದವನೂ ಆಗಿರುವ ಒಬ್ಬ ಒಳ್ಳೇ ಮಗನಂತೆ ನಟಿಸಿದನು.

ಹೇಗೂ, ಆದರೆ ಸ್ವಲ್ಪ ತಳಭಾಗದಲ್ಲಿ ಅವನ ತಮ್ಮನಾದ ಹೇಬೆಲನ ವಿರುದ್ಧವಾಗಿದ್ದ ಎಲ್ಲಾ ವಿಧವಾದ ಹಗೆತನ, ದ್ವೇಷ, ಹೊಟ್ಟೆಕಿಚ್ಚುಗಳಿಂದ ತುಂಬಿದ ಭಾವಗಳು ಸುಳಿದಾಡುತ್ತಿದ್ದವು. ಆತನು ದೇವರ ಕಡೆಗೆ ಸಹ ಕೋಪವುಳ್ಳವನಾಗಿದ್ದನು, ಬಹುಶಃ ಅವನ ಹೆತ್ತವರನ್ನು ಏದೆನ್ ತೋಟದಿಂದ ಹೊರಕ್ಕೆ ಹಾಕಿ ಅವರೆಲ್ಲರಿಗಾಗಿ ಜೀವನವನ್ನು ಕಠಿಣಗೊಳಿಸಿದ ಕಾರಣದಿಂದ ಆತನಿಗೆ ಕೋಪವಿದ್ದಿರಬಹುದಾಗಿದೆ. ಖಂಡಿತವಾಗಿಯೂ, ದೇವರು ಅವನ ತಮ್ಮನ ಯಜ್ಞವನ್ನು ಅಂಗೀಕರಿಸಿಕೊಂಡು ತನ್ನ ಯಜ್ಞವನ್ನು ತಿರಸ್ಕರಿಸಿದ್ದರ ನಿಮಿತ್ತ ಅವನಿಗೆ ಕೋಪವಿತ್ತು. ಆತನು ಅವನ ಆತ್ಮಕ್ಕೆ ಸೌಖ್ಯವನ್ನುಂಟಾಗಿರಬಹುದಾದ ರೀತಿಯಲ್ಲಿ ತನ್ನ ಪಾಪವನ್ನು ಅರಿಕೆ ಮಾಡಿ ಕ್ಷಮಾಪಣೆಯನ್ನು ಕೋರುವದರ ಬದಲಾಗಿ, ಕಾಯಿನನು ತನ್ನ ವ್ಯಕ್ತಿತ್ವವು ಒಂದು ಕೋಪದ ಸ್ಫೋಟದಲ್ಲಿ ವಿಭಜನೆಗೊಳ್ಳುವಂತೆ ಅನುಮತಿಸಿದ್ದನು. ಕಾಯಿನನಿಗೆ ತನ್ನ ಛಿದ್ರ ವ್ಯಕ್ತಿತ್ವದ, ತನ್ನ ಕಪಟತನದ ಒತ್ತಡ ಹಾಗೂ ಅಗಲುವಿಕೆಯನ್ನು ಇನ್ನು ಮೇಲೆ ತಾಳಿಕೊಳ್ಳುವದಕ್ಕಾಗದೆ ಹೋದಾಗ, ಆತನು ತನ್ನ ತಮ್ಮನನ್ನು ಕೊಲೆ ಮಾಡಿದನು. ಆತನು ತನ್ನ ದುಷ್ಕೃತ್ಯವನ್ನು ಮರೆಮಾಡಿಕೊಳ್ಳಲು ಪ್ರಯತ್ನಿಸಿದನು ಮತ್ತು ದೇವರಿಗೆ ಸುಳ್ಳು ಹೇಳಿದನು, ತಾನು ಮಾಡಿದ ಕೃತ್ಯದ ಕುರಿತು ತನಗೆ ಏನೂ ಗೊತ್ತಿಲ್ಲವೆಂದು ಹೇಳಿದನು.

*ಒಬ್ಬನ ಕುಟುಂಬದಲ್ಲಿ ಅಗಲುವಿಕೆ.* 3ನೇ ಅಧ್ಯಾಯವು ಪ್ರಥಮ ದಂಪತಿಗಳಾದ ಆದಾಮ ಮತ್ತು ಹವ್ವಳ ಜೀವಿತದಲ್ಲಿ ಪಾಪವು ಉಂಟು ಮಾಡಿದ ಅಗಲುವಿಕೆಯನ್ನು ದೃಷ್ಟಾಂತಪಡಿಸುತ್ತದೆ. ಅವರು ಪಾಪ ಮಾಡಿದಾಗ ಮತ್ತು ದೇವರು ಅದರ ಬಗ್ಗೆ ವಿಚಾರಿಸಿದಾಗ, ಅವರು ನೆಪಗಳನ್ನು ಹೇಳಲಾರಂಭಿಸಿದರು. ಆದಾಮನು ಮೊದಲು ತನ್ನ ಹೆಂಡತಿಯಾದ ಹವ್ವಳ ಮೇಲೆ ಆರೋಪ ಮಾಡಿದನು, ಮತ್ತು ಬಳಿಕ ಆಕೆಯನ್ನು ತನಗೆ ಕೊಟ್ಟದ್ದಕ್ಕಾಗಿ ದೇವರ ಮೇಲೆಯೇ ತಪ್ಪು ಹೊರಿಸಿದನು. ಆಕೆಗೆ ಇದರಿಂದ ನೋವುಂಟಾಗಿದ್ದರಲ್ಲಿ ಸಂದೇಹವಿಲ್ಲ, ಮತ್ತು ಆಕೆಯು ತನ್ನನ್ನು ದೋಷವಿಲ್ಲದವಳೆಂದು ತೋರಿಸಿಕೊಳ್ಳಲು ಸರ್ಪದ ಮೇಲೆ ತಪ್ಪು ಹೊರಿಸಿದಳು. ಕನಿಷ್ಠ ಆ ಕ್ಷಣದಲ್ಲಿ, ಆದಾಮನು ಹವ್ವಳನ್ನು ಒಬ್ಬ "ಸಹಕಾರಿ" ಎಂದು ಕಾಣಲಿಲ್ಲ, ಆದರೆ ತನಗೆ ಒಂದು ಅಡೆತಡೆ ಅಥವಾ ವಿಘ್ನವೆಂಬಂತೆ ಕಂಡನು. ಪ್ರಥಮ ಪಾಪ ಮತ್ತು ಅದರ ನಂತರದ ಸ್ಥಿತಿಯು ನಿಶ್ಚಯವಾಗಿಯೂ ಅವರ ಸಂಬಂಧವನ್ನು ಸ್ವಲ್ಪ ಮಟ್ಟಿಗೆ ಹಾನಿಗೊಳಿಸಿತ್ತು, ವಿಶೇಷವಾಗಿ ಪರದೈಸನ್ನು ಕಳೆದುಕೊಂಡದ್ದಕ್ಕೆ ಆಕೆಯೇ ಕಾರಣವೆಂದು ಆದಾಮನು ಆಕೆಯ ಮೇಲೆ ತಪ್ಪು ಹೊರಿಸುವದನ್ನು ಮುಂದುವರೆಸಿದ್ದಲ್ಲಿ ಅದು ಸಂಬಂಧವನ್ನು ಹಾನಿಗೊಳಿಸಿರಬಲ್ಲದು. ಅವರು ತೋಟದಿಂದ ಹೊರಕ್ಕೆ ಕಳುಹಿಸಲ್ಪಟ್ಟು ಬಹಳಷ್ಟು ಕಾಲದ ತನಕವೂ ಅವರೊಳಗೆ ಕಹಿಭಾವಗಳು ಹಾಗೆಯೇ ಉಳಿದಿರಬಹುದಾಗಿದೆ.

ಪಾಪವು ಹುಟ್ಟುವಾಗಲೇ ಜನರು ಬಾಧ್ಯವಾಗಿ ಪಡೆಯುವಂಥ ಸಂಗತಿಯಲ್ಲ (ನೋಡಿರಿ 4:6-8); ಹೇಗೂ, ಕೆಟ್ಟ ಮನೋಭಾವಗಳನ್ನು ಮತ್ತು ದೇವರ ಕಡೆಗಿರುವ ಹಗೆತನಗಳನ್ನು ಮಕ್ಕಳು ತಮ್ಮ ಮನೆಯಲ್ಲಿ ಹೆತ್ತವರ ನುಡಿಗಳಿಂದಲೂ ನಡೆಗಳಿಂದಲೂ ಕಲಿತುಕೊಳ್ಳುವ ಸಾಧ್ಯತೆಯಿರುತ್ತದೆ. ಖಂಡಿತವಾಗಿಯೂ, ಅದರಿಂದ ತಾವು ಮಾಡುವ ಪಾಪಗಳಿಗಾಗಿ ಮಕ್ಕಳಿಗಿರುವ ಸ್ವಂತ ಜವಾಬ್ದಾರಿಯನ್ನೇನೂ ಕಡಿಮೆಯಾಗುವದಿಲ್ಲ, ಅಲ್ಲದೆ ತಮ್ಮ ಕೃತ್ಯಗಳಿಗೆ ಹೆತ್ತವರ (ಅಥವಾ ದೇವರ) ತಪ್ಪು ಎಂಬುದಾಗಿ ದಂಡನೆಯಿಂದ ತಪ್ಪಿಸಿಕೊಳ್ಳಲೂ ಆಗುವದಿಲ್ಲ. ಆದಾಮ ಮತ್ತು ಹವ್ವಳರು ಕಾಯಿನನಿಗೆ ಏನು ಕಲಿಸಿದರೆಂದಾಗಲಿ ಅಥವಾ ಕಾಯಿನನು ಬೆಳೆಯುತ್ತಿರುವ ಸಂದರ್ಭದಲ್ಲಿ ಜೀವನ ಹಾಗೂ ದೇವರ ಕಡೆಗೆ ಅವನ ಹೆತ್ತವರು

ಹೊಂದಿದ್ದ ಮನೋಭಾವಗಳ ಮೂಲಕವಾಗಿ ಏನನ್ನು ಕಲಿತುಕೊಂಡನೆಂದಾಗಲಿ ಶಾಸ್ತ್ರಗಳು ತಿಳಿಸುವದಿಲ್ಲ.

ಅದೇ ರೀತಿಯಲ್ಲಿಯೇ, ಹೇಬೆಲನು ಹುಟ್ಟುವ ತನಕ ಎಷ್ಟು ಕಾಲವಾಗಿತ್ತೆಂದು ನಮಗೆ ಗೊತ್ತಿರುವದಿಲ್ಲ. ಅನೇಕ ವರ್ಷಗಳು ಗತಿಸಿರಬಹುದಾಗಿದೆ, ಯಾಕೆಂದರೆ 5:3ನೇ ವಚನವು ಆದಾಮನಿಗೆ ಸೇತನು ಹುಟ್ಟಿದ ವೇಳೆ 130 ವರ್ಷ ವಯಸ್ಸಾಗಿತ್ತೆಂದು ಹೇಳುತ್ತದೆ. ಹೇಬೆಲನ ಜನನದ ಹೊತ್ತಿಗೆ ಆದಾಮ ಮತ್ತು ಹವ್ವಳರು ತಮ್ಮ ಮನೋಭಾವಗಳನ್ನು ಮತ್ತು ಕ್ರಿಯೆಗಳನ್ನು ಬದಲಾಯಿಸಿಕೊಂಡಿದ್ದರೋ? ಅದು ನಿಜವಾಗಿದ್ದಲ್ಲಿ, ಚೊಚ್ಚಲ ಮಗನಿಗೆ ಗೊತ್ತಿದ್ದದಕ್ಕಿಂತಲೂ ವ್ಯತ್ಯಾಸವಾದ ವಾತಾವರಣವನ್ನು, ಅದೇ ಮನೆಯಲ್ಲಿ ಸಹ ಎರಡನೆಯ ಹಾಗೂ ಮೂರನೆಯ ಮಕ್ಕಳು ಅನುಭವಿಸಿರಬಹುದಾಗಿದೆ. ವಿಷಯವು ಏನೇ ಆಗಿದ್ದರೂ ಸರಿಯೇ, ಕಾಯಿನನು ಹೇಬೆಲ ಅಥವಾ ಸೇತನಿಗಿಂತಲೂ ಭಿನ್ನವಾಗಿದ್ದನು. ಆತನ ವಿಧಿಯು ದೇವರಿಂದಾಗಲಿ, ಅವನ ಹೆತ್ತವರಿಂದಾಗಲಿ, ಅಥವಾ ಅವನ ಬೆಳೆದ ಪರಿಸರದಿಂದಾಗಲಿ ನಿರ್ಧರಿಸಲ್ಪಟ್ಟಿರಲಿಲ್ಲ. ಆತನಿಗೆ ನಿರ್ಣಯಗಳನ್ನು ಮಾಡಿಕೊಳ್ಳುವ ಸಾಮರ್ಥ್ಯವಿತ್ತು, ಮತ್ತು ಆತನ ತೀರ್ಮಾನಗಳಿಗೆ ಅವನೇ ಜವಾಬ್ದಾರನಾಗಿದ್ದನು.

ಬಹುಶಃ ಕಿರಿಯ ಮಗನಾದ ಹೇಬೆಲನು ಯಾವಾಗಲೂ ಒಬ್ಬ "ಒಳ್ಳೇ ಹುಡುಗ" ಆಗಿರುತ್ತಿದ್ದ ಕಾರಣದಿಂದ ತನ್ನ ಹೆತ್ತವರ ಕಟಾಕ್ಷಕ್ಕೆ ಒಳಗಾಗಿದ್ದನು. ಆ ರೀತಿಯಿದ್ದ ಪಕ್ಷದಲ್ಲಿ, ದೇವರು ಅವನ ಯಜ್ಞವನ್ನು ಸ್ವೀಕರಿಸಿಕೊಂಡು ಕಾಯಿನನ ಯಜ್ಞವನ್ನು ತಿರಸ್ಕರಿಸಿದಾಗ, ಅದು ಅಣ್ಣನ ಅಹಂಭಾವಕ್ಕೆ ಸಹಿಸಲಾರದಷ್ಟು ಅಧಿಕವಾಗಿರಬಹುದಾಗಿದೆ. ಪ್ರಕರಣವು ಏನೇ ಆಗಿದ್ದರೂ ಸರಿಯೇ, ಕಾಯಿನನು ತನ್ನ ತಮ್ಮನ ಕಡೆಗೆ ಕೋಪದಿಂದ ಕುದಿಯುತ್ತಿದ್ದನು. ಕಾಯಿನನ ಹೃದಯದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅರಿತವನಾಗಿ, ದೇವರು ಅವನಿಗೆ ಪಾಪವು ಒಂದು ಕಾಡು ಮೃಗದಂತೆ ಬಾಗಿಲಲ್ಲಿ ಹೊಂಚು ಹಾಕುತ್ತಿದೆ ಎಂದು ಎಚ್ಚರಿಸಿ ಅದನ್ನು ಅವನು ವಶಮಾಡಿಕೊಳ್ಳಬೇಕೆಂದು ಬೇಡಿಕೊಂಡನು (4:7). ಹೇಗೂ, ಅದು ಕಾಯಿನನಿಂದ ಮಾಡಲಿಕ್ಕೆ ಸಾಧ್ಯವಿಲ್ಲದ ಕೆಲಸ ಎಂಬುದು ಸಾಭಿತಾಗಿತ್ತು. ಅವನು ತನ್ನಲ್ಲಿದ್ದ ದ್ವೇಷ ಮತ್ತು ಹಗೆತನಗಳಿಗೆ ಸೋತು ಹೋಗಿ, ಹೇಬೆಲನನ್ನು ಕೊಲೆ ಮಾಡಿದನು ಮತ್ತು ಅವನನ್ನ ಭೂಮಿಯಲ್ಲಿ ಹೂತಿಟ್ಟನು. ದೇವರು ಅವನನ್ನು ಅದರ ಬಗ್ಗೆ ಖಂಡಿಸಿ, "ನಿನ್ನ ತಮ್ಮನಾದ ಹೇಬೆಲನು ಎಲ್ಲಿ" ಎಂದು ಪ್ರಶ್ನಿಸಿದಾಗ ಅವನ ಪ್ರತ್ಯುತ್ತರವು ಹೀಗಿತ್ತು, "ನಾನರಿಯೆ; ನನ್ನ ತಮ್ಮನನ್ನು ಕಾಯುವವನು ನಾನೋ" (4:9).

ಕಾಯಿನನ ದ್ವೇಷ ಮತ್ತು ಹೊಟ್ಟೆಕಿಚ್ಚುಗಳು ಅವನನ್ನು ತನ್ನ ತಮ್ಮನನ್ನೇ ಕೊಲ್ಲುವಂತೆ ನಡಿಸಿದ್ದವು. ಈ ಮನೋಭಾವವು ದೇವರು ತನ್ನ ಜನರಿಂದ ಬಯಸುವಂಥ ಮನೋಭಾವಕ್ಕೆ ವಿರುದ್ಧವಾಗಿರುತ್ತದೆ. ಯೋಹಾನನು ಹೀಗೆ ಬರೆಯುತ್ತಾನೆ, "ನಾವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದೇ ನೀವು ಮೊದಲಿನಿಂದಲೂ ಕೇಳಿದ ವಾಕ್ಯವಾಗಿದೆ. ಕೆಡುಕನಿಂದ ಹುಟ್ಟಿ ತನ್ನ ತಮ್ಮನನ್ನು ಕೊಂದುಹಾಕಿದ ಕಾಯಿನನಂತೆ ನಾವು ಇರಬಾರದು ..." (1 ಯೋಹಾನ 3:11, 12). ಹೇಬೆಲನು ಎಲ್ಲಿದ್ದಾನೆ ಎಂಬುದರ ಬಗ್ಗೆಯಾಗಲಿ ಅಥವಾ ಅವನ ಹಿತಾಸಕ್ತಿಯ ಬಗ್ಗೆಯಾಗಲಿ ತನಗೆ ಯಾವ ಜವಾಬ್ದಾರಿಯೂ ಇರುವದಿಲ್ಲ ಎಂದು ಕಾಯಿನನು ಹೇಳಿದನು. ಆತನ ಪಾಪಭರಿತ, ಅಹಂಭಾವದಿಂದ ಕೂಡಿದ ಹೃದಯವು, ದುರಂತರಕವಾದ ಫಲಿತಗಳುಂಟು ಮಾಡುವದಾಗಿ ಅವನ ಮನಸ್ಸಾಕ್ಷಿಯ ಕೃತ್ಯಗಳನ್ನು ವಿಭಜನೆಗೊಳಿಸಿತ್ತು: ತನ್ನ ತಮ್ಮನ ನಿರಪರಾಧಿ ಜೀವಿತವನ್ನು ಇಚ್ಚಾಪೂರ್ವಕವಾಗಿ ತೆಗೆದುಹಾಕಿದ್ದು.

*ಒಬ್ಬನ ಕುಟುಂಬ ಮತ್ತು ಸಮಾಜದಿಂದ ಅಗಲುವಿಕೆ.* ಹೇಬೆಲನ ಘೋರ ಹತ್ಯೆಯ

ಮೂಲಕವಾಗಿ ಕಾಯಿನನು ತನ್ನ ತಂದೆ ಹಾಗೂ ತಾಯಿಗೆ ಎಷ್ಟೊಂದು ನೋವನ್ನುಂಟು ಮಾಡಿರಬಹುದೆಂಬುದನ್ನು ಒಬ್ಬನು ಊಹಿಸಿಕೊಳ್ಳಲು ಸಾಧ್ಯ. 3ನೇ ಅಧ್ಯಾಯವು ಶುದ್ಧರೂಪದಲ್ಲಿದ್ದ ನಿರ್ಮಲತೆಯಿಂದ ಮಾನವರು ಬಿದ್ದು ಹೋಗುವದನ್ನು ತಿಳಿಯಪಡಿಸುತ್ತದೆ, 4ನೇ ಅಧ್ಯಾಯವು ದೇವರು ಉದ್ದೇಶಿಸಿದ್ದ ಹಾಗೆ ಇರದೆ ಕುಟುಂಬವು ಬಿದ್ದು ಹೋಗುವದರ ಕುರಿತು ಚಿತ್ರಿಸುತ್ತದೆ. ಹತ್ಯೆಯು ಕುಟುಂಬದಲ್ಲಿ ಗೂಟವನ್ನು ಎಷ್ಟೊಂದು ಆಳಕ್ಕೆ ಹೊಡೆದಿತ್ತೆಂದರೆ ಅದನ್ನು ತೆಗೆದು ಹಾಕುವದು ಸಾಧ್ಯವಾಗಲಿಲ್ಲ. ಕಾಯಿನನು ಕ್ರೂರವಾದ, ಅರ್ಥವಿಲ್ಲದ ಹತ್ಯೆಯನ್ನು ಮಾಡಿದ್ದನು; ಮತ್ತು ಆತನು ಅದಕ್ಕಾಗಿ ಸ್ವಲ್ಪವೂ ವಿಷಾದವನ್ನು ವ್ಯಕ್ತಪಡಿಸಲಿಲ್ಲ, ಆದ್ದರಿಂದ ಆತನು ಮನೆಯಲ್ಲಿರುವದಕ್ಕೆ ಅನುಮತಿಸದಷ್ಟು ಅತ್ಯಂಥ ಅಪಾಯಕಾರಿ ಮನುಷ್ಯನಾಗಿದ್ದನೆಂದು ತೋರುತ್ತದೆ. ಕಾಯಿನನು ಮರಣಕ್ಕೆ ಯೋಗ್ಯನಾಗಿದ್ದನು, ಆದರೆ ದೇವರು ಕರುಣೆಯನ್ನು ತೋರಿಸಿ ಅವನನ್ನು ಒಬ್ಬ ಅಪರಾಧಿಯಾಗಿ ಮತ್ತು ಅಲೆದಾಡುವವನಾಗಿ ಬದುಕುವಂತೆ ಅನುಮತಿಸಿದನು. ಆತನಿಗೆ ಅವನ ಕುಟುಂಬದೊಂದಿಗೆ ಸಮಾಧಾನದಿಂದ ಬದುಕುವದಕ್ಕೆ ಆಗಲಿಲ್ಲವಾದರೆ, ಆತನು ಅವರಿಂದ ದೂರವಾಗಿಯೇ ಜೀವಿಸಬೇಕಾಗುವದು.

ತಾನು ಹೊರಡಿಸಲ್ಪಡುವನು ಎಂಬ ದೈವಿಕ ದಂಡನೆಯ ತೀರ್ಪಿನ ಸುದ್ದಿಯನ್ನು ಕೇಳಿದಾಗ, ಕಾಯಿನನು ವಿಚಲಿತಗೊಂಡು ತನ್ನನ್ನು ಕಾಣುವ ವ್ಯಕ್ತಿಯು ಕೊಲ್ಲುವನಲ್ಲಾ ಎಂದು ದೂರು ಹೇಳಿದನು (4:14). ಆತನು ತನ್ನ ನೀತಿಯುಳ್ಳ ತಮ್ಮನನ್ನು ಕೊಂದಿದ್ದನು ಮತ್ತು ಅವನ ಅಪರಾಧಕ್ಕಾಗಿ ಅವನನ್ನು ಹೊಡೆದು ಸಾಯಿಸುವ ಸಕಲ ಅಧಿಕಾರವು ದೇವರಿಗೆ ಇತ್ತಾದರೂ, ಅವನನ್ನು ಬದುಕುವಂತೆ ಬಿಟ್ಟದ್ದಕ್ಕಾಗಿ ಕಾಯಿನನು ದೇವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಲಿಲ್ಲ. ಆತನಿಗೆ ಯಾರಿಂದಲೂ ಕೇಡು ಸಂಭವಿಸದಿರಲೆಂದು ಅವನ ಮೇಲೆ ದೇವರು ಭದ್ರತೆಯನ್ನೊದಗಿಸುವ ಗುರುತನ್ನು ಇಟ್ಟದ್ದಕ್ಕಾಗಿ ಕಾಯಿನನು ಕೃತಜ್ಞನಾಗಿರಲಿಲ್ಲ. ವಾಸ್ತವಿಕದಲ್ಲಿ, ಭೂಮಿಯ ಮೇಲೆ ತನ್ನನ್ನು ಅಲೆದಾಡುವವನಾಗಿ ಜೀವಿಸುವಂತೆ ದಂಡನೆಯನ್ನು ನೀಡಿದ್ದರಲ್ಲಿ ದೇವರು ಬಹಳ ಕಠೋರತೆಯನ್ನು ತೋರಿದ್ದಾನೆಂದು ಕಾಯಿನನು ಆತನ ಮೇಲೆ ದೋಷ ಹೊರಿಸಿದನು. ಕಾಯಿನನ ಹೃದಯವನ್ನು ಯಾವದೂ ಮೃದುಗೊಳಿಸಲಿಲ್ಲ ಅಥವಾ ಪಶ್ಚಾತ್ತಾಪ ಪಡುವಂತೆ ನಡಿಸಲಿಲ್ಲ. ಆತನು ತನ್ನ ಜೀವಿತ ಕಾಲವೆಲ್ಲಾ ತನ್ನನ್ನು ಒಬ್ಬ ನತದೃಷ್ಟನೆಂದು ಭಾವಿಸಿಕೊಳ್ಳುವವನಾಗಿ ದೇವರು ಮತ್ತು ಮಾನವರು ತನಗೆ ಅನ್ಯಾಯ ಮಾಡಿದ್ದರೆಂಬ ಕಲ್ಪನೆಯಿಂದ ಅವರ ವಿರುದ್ಧ ಹಗೆತನವನ್ನು ಸಾಧಿಸುತ್ತಿದ್ದನೆಂದು ಸ್ಪಷ್ಟವಾಗಿರುತ್ತದೆ.

ಈ ಪ್ರತೀಕಾರದ ಮನೋಭಾವವೇ ಕಾಯಿನನು ತನ್ನ ಸಂತತಿಯವರಿಗೆ ನೀಡಿದ ಪರಂಪರೆಯಾಗಿತ್ತು, ಮತ್ತು ಲೆಮೆಕನು ಒಬ್ಬ ಯುವಕನನ್ನು ಕೊಂದದ್ದರಲ್ಲಿ ಹೆಚ್ಚಳಪಟ್ಟುಕೊಂಡನು ಎಂಬುದರಲ್ಲಿ ಇದು ಸ್ಪಷ್ಟವಾಗಿ ಕಾಣಿಸುತ್ತದೆ (4:23, 24). ಯಾವಾಗ ಒಬ್ಬ ಪಾಪಿಯು ತನ್ನ ಪಾಪವನ್ನು ಒಪ್ಪಿಕೊಳ್ಳಲು ಮತ್ತು ತನ್ನ ಕೃತ್ಯಗಳಿಗೆ ಜವಾಬ್ದಾರಿಯನ್ನು ತೆಗೆದುಕೊಳ್ಳಲು ವಿಫಲನಾಗುತ್ತಾನೋ, ಆಗ ಪರಿಣಾಮಗಳು ತಲೆಮಾರುಗಳ ವರೆಗೂ ಮುಂದುವರೆಯಬಹುದಾಗಿದೆ.

*ದೇವರಿಂದ ಅಗಲುವಿಕೆ.* ಆದಾಮ ಮತ್ತು ಹವ್ವಳರು ತೋಟದಲ್ಲಿ ಪಾಪವನ್ನು ಮಾಡಿದಾಗ, ಆತ್ಮೀಕ ಅಗಲುವಿಕೆ ಸಂಭವಿಸಿತು; ಅವರು ದೇವರಿಂದ ಬೇರ್ಪಟ್ಟಿದ್ದರು. ಅವರು ಆತನ ಸನ್ನಿಧಿಗೆ ಹೆದರಿದ್ದರು ಮತ್ತು ಆತನಿಂದ ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸಿದರು. ಕಾಯಿನನ ವಿಷಯದಲ್ಲಿಯೂ ಹಾಗೆಯೇ ಆಗಿತ್ತು: ಯೆಹೋವನು ಅವನಿಗೆ ಅವನ ಅಪರಾಧದ ಕುರಿತು

ಗದರಿಸಿ ಅವನಿಗೆ ಆಗುವ ದಂಡನೆಯನ್ನು ತಿಳಿಸಿದ ವೇಳೆ, ತಾನು ಒಬ್ಬ ತಪ್ಪಿಸಿಕೊಂಡ ಅಪರಾಧಿಯಾಗಿ ನಿನ್ನ "ಸಾನಿಧ್ಯ"ದಿಂದ ಮರೆಯಾಗಿರುವೆನು ಮತ್ತು ಲೋಕದಲ್ಲಿ ಅಲೆದಾಡುವವನಾಗುವೆನಲ್ಲಾ ಎಂದು ಕಾಯಿನನು ಯೆಹೋವನಿಗೆ ದೂರು ಹೇಳಿದನು (4:14). ವಾಕ್ಯವು ಹೇಳುವದೇನೆಂದರೆ, "ಕಾಯಿನನು ಯೆಹೋವನ ಸನ್ನಿಧಾನದಿಂದ ಹೊರಟು ನೋದು ['ಅಲೆದಾಡುವ'] ಎಂಬ ದೇಶದಲ್ಲಿ ವಾಸಿಸಿದನು; ಅದು ಏದೆನ್ ಸೀಮೆಗೆ ಮೂಡಲಲ್ಲಿರುವದು" (4:16). (ವಾಕ್ಯದಲ್ಲಿರುವ "ಸಾನಿಧ್ಯ" ಮತ್ತು "ಸನ್ನಿಧಾನ" ಎಂಬ ಎರಡು ಪದಗಳು, פָּנִים [*ಪಾನಿಮ*] ಎಂಬ ಇಬ್ರಿಯ ಭಾಷೆಯ ಒಂದೇ ಪದದಿಂದ ಅನುವಾದಿಸಲ್ಪಟ್ಟಿರುತ್ತವೆ.)

4:14, 16ರ ಪರಿಭಾಷೆಯು ಶಾರೀರಿಕ ಅಂತರವನ್ನು ಸೂಚಿಸುತ್ತದೆ, ಯಾಕೆಂದರೆ ಕಾಯಿನನು ಏದೆನ್ ತೋಟದಿಂದ ಇನ್ನಷ್ಟು ದೂರಕ್ಕೆ ಸಾಗಿದನು. ಈ ಶಾರೀರಿಕ ಅಂತರವು ದೇವರ ವಿರುದ್ಧ ಅವಿಧೇಯನಾದ ಕಾರಣದಿಂದಾಗಿ ಒಬ್ಬನು ಆತನಿಂದ ಬಿದ್ದು ಹೋಗಿರುವಂಥ ಆತ್ಮೀಕವಾದ ಅಂತರಕ್ಕೆ ಸಂಕೇತವಾಗಿರುತ್ತದೆ (ಯೋಬ 13:24; ಕೀರ್ತನೆ 13:1; 44:24; 88:14; 132:10). ಕಾಯಿನನ ಪಾಪದ ನಿಮಿತ್ತವಾಗಿ, ಆತನು ದೇವರ "ಸಾನಿಧ್ಯ" ಅಥವಾ "ಸನ್ನಿಧಾನ"ದಿಂದ ದೂರಕ್ಕೆ ತಿರುಗಿಕೊಂಡಿದ್ದನು.

ಒಬ್ಬ ಪಾಪಿಯು ಪಶ್ಚಾತ್ತಾಪ ಪಟ್ಟು, ದೇವರ ಕೃಪೆ ಮತ್ತು ಕ್ಷಮಾಪಣೆಯನ್ನು ಕೋರುವದಾದರೆ, ಮತ್ತು ಅವನು ಪುನಃ ಸನ್ಮಾರ್ಗಕ್ಕೆ ಬರುವದಾದರೆ, ದೇವರು ಅವನನ್ನು ಪುನಃ "ಪ್ರಸನ್ನಮುಖದಿಂದ ನೋಡುವನು" ಎಂದು ಹೇಳಲಾಗಿರುತ್ತದೆ (ಕೀರ್ತನೆ 80:19). ಸರಳವಾಗಿ ಹೇಳುವದಾದರೆ, ಅಗಲುವಿಕೆ (ಬೇರ್ಪಡುವಿಕೆ) ನಿಂತು ಹೋಗುವದು, ಮತ್ತು ವ್ಯಕ್ತಿಯು ಮತ್ತೊಂದಾವರ್ತಿ ದೇವರ ಕಟಾಕ್ಷವನ್ನು ಆಶೀರ್ವಾದಗಳನ್ನು ಅನುಭವಿಸುವನು (ಅರಣ್ಯಕಾಂಡ 6:24-27; ಕೀರ್ತನೆ 4:6; 44:3; 80:3, 7, 19; 89:15).

ಕಾಯಿನನು ಅನುಭವಿಸಿದ ಅಗಲುವಿಕೆಯು ಆತನ ಮೊಂಡುತನ, ಪಶ್ಚಾತ್ತಾಪವಿಲ್ಲದ ಮನೋಭಾವದ ನಿಮಿತ್ತದಿಂದಲೇ ಆಗಿತ್ತು. ದೇವರು ತನ್ನ ಕಡೆಗೆ ವಿಧೇಯತೆಯುಳ್ಳವರಾಗಿ ಪುನಃ ತಿರುಗಿಕೊಳ್ಳುವ ಪಾಪಿಗಳನ್ನು ಸೇರಿಸಿಕೊಳ್ಳಲು ಸದಾ ಸಿದ್ಧನಿರುತ್ತಾನೆ. ಪೌಲನು ಒಂದು ಕಾಲದಲ್ಲಿ ಯೇಸುವನ್ನು ದ್ವೇಷಿಸುತ್ತಿದ್ದವನು ಮತ್ತು ಕ್ರೈಸ್ತರನ್ನು ಹತ್ಯೆಗೈಯುತ್ತಿದ್ದವನಾಗಿದ್ದನು (1 ತಿಮೊಥೆ 1:12-16). ಪಂಚಾಶತ್ತಮ ದಿನದಂದು ಪರಿವರ್ತನೆಗೊಂಡಿದ್ದ ಯೆಹೂದ್ಯರೊಳಗೆ ಅನೇಕರು ಯೇಸುವನ್ನು ಶಿಲುಬೆಗೇರಿಸಿರಿ (ಕೊಲೆ ಮಾಡಿರಿ) ಎಂಬುದಾಗಿ ಕೂಗಿದ್ದವರೇ ಆಗಿದ್ದರು (ಅಪೊಸ್ತಲರ ಕೃತ್ಯಗಳು 2:22, 23, 36-41). ಕೆಲವು ಕ್ರೈಸ್ತರು ಹಿಂದಿನ ಕಾಲದಲ್ಲಿ ವಿಗ್ರಹಾರಧನೆಯಲ್ಲಿ ಮತ್ತು ಅನ್ಯಜನರ ನಡಿಸುವಂಥ ದುಷ್ಟತನದಲ್ಲಿ ಜೀವಿಸಿದವರಾಗಿದ್ದರು (ಅಪೊಸ್ತಲರ ಕೃತ್ಯಗಳು 26:17, 18; ಎಫೆಸ 2:11-16). ಹೇಗೂ, ಇವರು ಪಶ್ಚಾತ್ತಾಪ ಪಟ್ಟಿದ್ದರು, ಮತ್ತು ದೇವರು ಅವರನ್ನು ಕ್ಷಮಸಿದ್ದನು. ಕಾಯಿನನು ತನ್ನ ಉಳಿದ ಜೀವಿತ ಕಾಲವೆಲ್ಲಾ ದೇವರ ಸನ್ನಿದಾನದಿಂದ ದೂರವಾಗಿ ಜೀವಿಸಿದ್ದರೆ ಮತ್ತು ದೇವರ "ಪ್ರಸನ್ನಮುಖವು" ಅವನ ಮೇಲೆ ಇನ್ನೆಂದಿಗೂ ಪ್ರಕಾಶಿಸದೆ ಇರುವದಾಗಿದ್ದಲ್ಲಿ, ಅದಕ್ಕೆ ಆತನ ಮೊಂಡುತನದ ಗರ್ವವೇ ಕಾರಣವಾಗಿತ್ತು. ದೇವರು ಅವನಿಗೆ ಕೊಡಬೇಕೆಂದಿದ್ದ ರಕ್ಷಣೆ ಮತ್ತು ಆಶೀರ್ವಾದಗಳನ್ನು ಪಡೆದುಕೊಳ್ಳದಂತೆ ಕಾಯಿನನ ಕಠಿಣವಾದ ಹೃದಯವು ಅವನನ್ನು ತಡೆಗಟ್ಟಿತ್ತು.

### "ಯೆಹೋವ ಎಂಬ ಹೆಸರು" (4:26)

ಆದಿಕಾಂಡ 4:26; 12:8; ಮತ್ತು 26:25 ವಾಕ್ಯಭಾಗಗಳಲ್ಲಿ ಜನರು "ಯೆಹೋವ ಎಂಬ

ಹೆಸರನ್ನು" ಹೇಳಿಕೊಂಡರೆಂದು ತಿಳಿಸಲಾಗಿರುತ್ತದೆ.

ಆದಿಕಾಂಡದಲ್ಲಿನ ವಾಕ್ಯಭಾಗಗಳು ಬೇರೆ ಬೇರೆ ವ್ಯಕ್ತಿಗಳು "ಯೆಹೋವ ಎಂಬ ಹೆಸರನ್ನು" (יהוה, *ಯಾಹವೇ*) ಅಥವಾ "ಯೆಹೋವ" ಹೇಳಿಕೊಂಡರು ಎಂಬುದು, ವಿಮೋಚನಕಾಂಡ 6:3ರಲ್ಲಿನ ಹೇಳಿಕೆಗೆ ವಿರುದ್ಧವಾಗಿರುತ್ತದೆ. ಆ ವಾಕ್ಯದಲ್ಲಿ, ಯೆಹೋವನು ಹೀಗೆ ಹೇಳಿದನು, "ನಾನು ಯೆಹೋವನು; ಅಬ್ರಹಾಮ ಇಸಾಕ ಯಾಕೋಬರಿಗೆ ನಾನು ಸರ್ವಶಕ್ತನಾದ ದೇವರೆಂಬ ಹೆಸರುಳ್ಳವನಾಗಿ ಕಾಣಿಸಿಕೊಂಡೆನೇ ಹೊರತು ಯೆಹೋವನು ಎಂಬ ನನ್ನ ಹೆಸರಿನಿಂದ ಅವರಿಗೆ ಗೋಚರವಾಗಲಿಲ್ಲ." ಈ ವಾದದಲ್ಲಿ ಸ್ವಲ್ಪ ಮಟ್ಟಿಗೆ ಶ್ರೇಯಸ್ಸು ಇರುತ್ತದೆಂದು ಆರಂಭದಲ್ಲಿ ತೋರಬಹುದಾಗಿದೆ. ಹೇಗೂ, ವಿಮೋಚನಕಾಂಡದಲ್ಲಿನ ಪರಾಕ್ರಮದ ವಿಮೋಚನಾತ್ಮಕ ಕೃತ್ಯಗಳಲ್ಲಿ, ದೇವರು ಮೋಶೆ ಮತ್ತು ಇಸ್ರಾಯೇಲ್ಯರಿಗೆ ಆತನ ವೈಯಕ್ತಿಕ ಹೆಸರಿನ ಅರ್ಥದೊಂದಿಗೆ ತನ್ನ ವಿಶಿಷ್ಟ ಸ್ವಭಾವವನ್ನು ಪ್ರಕಟಪಡಿಸಿಕೊಂಡನು. ಮೊದಲನೆಯದಾಗಿ, ಆತನು ಮೋಶೆಗೆ ತನ್ನ ಹೆಸರನ್ನು "ಇರುವಾತನು" (ಇಬ್ರಿಯ ಭಾಷೆಯ "ಇರುವವನು," הָיָה, *ಹಾಯಾಹ* ಎಂಬ ಕ್ರಿಯಾಪದದ ಉತ್ತಮಪುರುಷ ಬಹುವಚನವಾಗಿರುತ್ತದೆ; ವಿಮೋಚನಕಾಂಡ 3:14). ಇಸ್ರಾಯೇಲ್ಯರು ತನ್ನನ್ನು ಐಗುಪ್ತರ ನಿರ್ಜೀವವಾದ ದೇವರುಗಳಂತಲ್ಲದೆ, ತಾನು ಒಬ್ಬ ಸಜೀವನಾದ, ಜೀವವುಳ್ಳಂಥ ಮತ್ತು ಅಸ್ತಿತ್ವದಲ್ಲಿರುವ ದೇವರು ಎಂಬುದನ್ನು ಅರಿತುಕೊಳ್ಳಬೇಕೆಂಬುದು ದೇವರ ಬಯಕೆಯಾಗಿತ್ತು. ಎರಡನೆಯದಾಗಿ, "ಯೆಹೋವ" ಇಬ್ರಿಯ ಕ್ರಿಯಾಪದವಾದ "ಇರುವವನು" ಎಂಬುದರ ಕಾರಣಾರ್ಥಕ ಪದವಾಗಿರಬಹುದಾಗಿದ್ದು, ಅದರ ಅರ್ಥವು ದೇವರು ಕೇವಲ "ಇರುವಾತನು" ಮಾತ್ರವೇ ಅಲ್ಲ, ಆದರೆ "ಸಂಗತಿಗಳನ್ನು ಸಂಭವಿಸುವಂತೆ ಮಾಡುವವನು" ಸಹ ಆಗಿರುತ್ತಾನೆ ಎಂಬದೆ. ಆತನು ತನ್ನ ಜನರನ್ನು ವಿಮೋಚಿಸುವದಕ್ಕಾಗಿ ಇತಿಹಾಸದಲ್ಲಿ ಕಾರ್ಯ ಮಾಡಬಲ್ಲ ದೇವರು ಆಗಿರುವನು. ಆತನು ಶೀಘ್ರದಲ್ಲಿಯೇ ಹತ್ತು ಉಪದ್ರವಗಳನ್ನು ಬರಮಾಡಿ, ಕೆಂಪು ಸಮುದ್ರವನ್ನು ಇಬ್ಭಾಗಿಸಿ ಇಸ್ರಾಯೇಲ್ಯರಿಗೆ ತಪ್ಪಿಸಿಕೊಳ್ಳಲು ದಾರಿ ಮಾಡಿ ಅವರನ್ನು ಸುರಕ್ಷಿತವಾಗಿ ವಾಗ್ದಾನದ ದೇಶಕ್ಕೆ ಬರಮಾಡುವವನಾಗಿ ಐಗುಪ್ತದ ದೇವರುಗಳನ್ನು ಸೋಲಿಸುವ ಮೂಲಕ ಇದನ್ನು ತೋರ್ಪಡಿಸಲಿದ್ದನು.

ಮೋಶೆಯು ತನ್ನ ಸಂದೇಶವು ಇಸ್ರಾಯೇಲ್ಯರಿಗೆ ನಂಬಿಕೆಯೋಗ್ಯವಾಗಿರುವಂತೆ ಮಾಡುವದಕ್ಕೆ ಇದ್ದ ಏಕೈಕ ದಾರಿಯೆಂದರೆ ತನ್ನನ್ನು ಪುನಃ ಐಗುಪ್ತಕ್ಕೆ ಕಳುಹಿಸಿ ಕೊಟ್ಟಿರುವ ದೇವರು ಪೂರ್ವಜರ ದೇವರಾಗಿರುತ್ತಾನೆಂಬುದನ್ನು ಸಾರುವದೇ ಆಗಿತ್ತು. "ಯೆಹೋವ" ಎಂಬ ಹೆಸರು ಮಂದವಾದ ನೆನಪುಗಳನ್ನು ಹುಟ್ಟಿಸುವದಾಗಿತ್ತು ಮತ್ತು ದೇವರು ಇಸ್ರಾಯೇಲ್ಯರಿಗೆ ತನ್ನ ಪ್ರೀತಿಯನ್ನು ಮತ್ತು ಐಗುಪ್ತದ ಮೇಲೆ ತನ್ನ ಶಕ್ತಿಯನ್ನು ತೋರ್ಡಿಸುವದನ್ನು ನೋಡುವದಕ್ಕೆ ಕಾಯುತ್ತಿದ್ದ ಜನರಿಗೆ ಭವಿಷ್ಯದ ನಿರೀಕ್ಷೆಯನ್ನು ನೀಡುವದಾಗಿತ್ತು.

ದೇವರು ಮೋಶೆಗೆ ಹೀಗೆ ಅಪ್ಪಣೆ ಕೊಟ್ಟನು, "ನೀನು ಇಸ್ರಾಯೇಲ್ಯರಿಗೆ ನಿಮ್ಮ ಪಿತೃಗಳಾದ ಅಬ್ರಹಾಮ ಇಸಾಕ ಯಾಕೋಬರ ದೇವರಾಗಿರುವ ಯೆಹೋವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳಬೇಕು. ಇದು ಸದಾಕಾಲಕ್ಕೂ ನನ್ನ ಹೆಸರು; ಇದು ತಲತಲಾಂತರಕ್ಕೂ ನನ್ನನ್ನು ಸ್ಮರಿಸಬೇಕಾದ ನಾಮ" (ವಿಮೋಚನಕಾಂಡ 3:15). ದೇವರು ಮೋಶೆಗೆ ಮತ್ತು ಇಸ್ರಾಯೇಲ್ಯರಿಗೆ ಪ್ರಕಟಗೊಳಿಸುತ್ತಿದ್ದದ್ದು ಆತನ ಒಂದು ಹೊಸ ಹೆಸರನ್ನು ಆಗಿರಲಿಲ್ಲ; ಅಲ್ಲದೆ ಅದು "ಯೆಹೋವ" ಎಂಬುದರ ಹೊಸ ಅಕ್ಷರ ಅಥವಾ ಉಚ್ಚಾರಣೆಯೂ ಆಗಿರಲಿಲ್ಲ. ಆತನು ಮೊಟ್ಟಮೊದಲ ಬಾರಿಗೆ, ತನ್ನ ಹೆಸರಿನಿಂದ ವ್ಯಕ್ತಪಡಿಸಲ್ಪಡುವಂಥ

ದೈವಿಕ ಸ್ವಭಾವ ಹಾಗೂ ಗುಣಲಕ್ಷಣದ ಕುರಿತು ಅಂತರ್ದೃಷ್ಟಿಯನ್ನು ಒದಗಿಸುತ್ತಿದ್ದಾನೆ. ಈ ವಿಧದಲ್ಲಿ, ಈ ಹಿಂದೆ ಮೂಲಪಿತೃಗಳಿಗೆ ಕೊಡಲ್ಪಟ್ಟಿದ್ದಕ್ಕಿಂತಲೂ ಅತ್ಯಧಿಕವಾದ ತಿಳುವಳಿಕೆಯನ್ನು ತನ್ನ ವಿಷಯವಾಗಿ ದೇವರು ಮೋಶೆಗೆ ಕೊಡುತ್ತಿದ್ದಾನೆ.

## ಪಾಪ ಮತ್ತು ರಕ್ಷಣೆ

ಕಾಯಿನನ ಹಾಗೆಯೇ, ಆದಾಮ ಮತ್ತು ಹವ್ವಳರ ಹಾಗೆಯೇ, ಎಲ್ಲಾ ಜನರು ಪಾಪ ಮಾಡಿದ್ದಾರೆ; ಆದರೆ ಕ್ಷಮಾಪಣೆ ಮತ್ತು ವಿಮೋಚನೆಗಳು ಕ್ರಿಸ್ತ ಯೇಸುವಿನಲ್ಲಿ ಲಭ್ಯವಿರುತ್ತವೆ (ರೋಮಾ 3:23, 24). ಯೇಸುವು "ಪಾಪಗಳನ್ನು ಹೋಗಲಾಡಿಸುವದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂಬದು ನಿಮಗೆ ಗೊತ್ತಾಗಿದೆ; ಆತನಲ್ಲಿ ಪಾಪವಿಲ್ಲ" (1 ಯೋಹಾನ 3:5). "ಕ್ರಿಸ್ತನಲ್ಲಿ" ಇರುವದಕ್ಕೆ ಬಯಸುವವರು ಮತ್ತು ನಿತ್ಯಜೀವವನ್ನು ಹೊಂದಲಿಚ್ಛಿಸುವವರು ಅವನು ನಮ್ಮ ಪಾಪಗಳಿಗೋಸ್ಕರ ಪರಿಹಾರವಾಗುವದಕ್ಕೆ ಅಥವಾ ಪ್ರಾಯಶ್ಚಿತ್ತವಾಗುವದಕ್ಕೆ ಲೋಕದೊಳಗೆ ಬಂದಂಥ (1 ಯೋಹಾನ 2:2; 4:10; ನೋಡಿರಿ ರೋಮಾ 3:25; NIV) ದೇವರ ದೈವಿಕ ಮಗನು ಎಂಬುದಾಗಿ ಆತನಲ್ಲಿ ನಂಬಿಕೆಯನ್ನಿಡತಕ್ಕದ್ದು (1 ಯೋಹಾನ 5:13). "ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು" (1 ಕೊರಿಂಥ 15:3), ಮತ್ತು "ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ" ಕೇಳಲ್ಪಟ್ಟಿದ್ದೇವೆ (1 ಪೇತ್ರ 2:24). ಇದಕ್ಕೆ ಪಶ್ಚಾತ್ತಾಪ ಪಡುವುದು ಅಗತ್ಯವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 2:38; 17:30).

ಹಿಂದಿನ ಪಾಪಗಳನ್ನು ತೊಲಗಿಸಿಕೊಳ್ಳುವದಕ್ಕೆ ಇರುವ ಏಕೈಕ ದಾರಿಯೆಂದರೆ ಅವುಗಳನ್ನು ದೀಕ್ಷಾಸ್ನಾನದ ಕ್ರಿಯೆಯಲ್ಲಿ ತೊಳೆದುಕೊಳ್ಳುವುದೇ ಆಗಿರುತ್ತದೆ (ಅಪೊಸ್ತಲರ ಕೃತ್ಯಗಳು 22:16). ಇಬ್ರಿಯ 9:22 ಹೇಳುವದೇನೆಂದರೆ "ರಕ್ತಧಾರೆಯಿಲ್ಲದೆ ಪಾಪಪರಿಹಾರ ಉಂಟಾಗುವದಿಲ್ಲ," ಆದರೆ ವಾಕ್ಯವು ಮುಂದುವರೆದು ವಿವರಿಸುವದೇನೆಂದರೆ "ಪಾಪನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿದನು" (ಇಬ್ರಿಯ 10:12). "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವು" (ರೋಮಾ 6:3), "ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು" (ಎಫೆಸ 1:7). ಕ್ರೈಸ್ತರು - ಕ್ರಿಸ್ತನಲ್ಲಿ ದೀಕ್ಷಾಸ್ನಾನವನ್ನು ಮಾಡಿಸಿಕೊಂಡಿರುವವರು - "ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ" ಆಗಿದ್ದಾರೆ (ರೋಮಾ 6:11) ಮತ್ತು "ಹೊಸಬರಾಗಿ ನಡೆದುಕೊಳ್ಳುವ" (ರೋಮಾ 6:4) ಸದವಕಾಶವನ್ನು ಹೊಂದಿರುತ್ತಾರೆ.

---

ಅಡಿಟಿಪ್ಪಣಿಗಳು

[1]Leonard J. Coppes, "קַיִן," in *TWOT*, 2:797–98. [2]John E. Hartley, *Genesis*, New International Biblical Commentary (Peabody, Mass.: Hendrickson Publishers, 2000), 79. [3]"Targum of Onkelos," in *The Targums*, trans. J. W. Etheridge (New York: KTAV Publishing House, 1968), 42. [4]Walter C. Kaiser, Jr., *Toward an Old Testament Theology* (Grand Rapids, Mich.: Zondervan Publishing House, 1978), 37. [5]"Targum of Palestine," in *The Targums*, 170. [6]Victor P. Hamilton, "הֶבֶל," in *TWOT*, 1:204–5. [7]"ಹೇಬೆಲ" ಎಂಬ ಹೆಸರಿಗೆ ಇರುವ ಅರ್ಥದ ಬಗ್ಗೆ ಇನ್ನಷ್ಟು ಸಲಹೆಗಳು ಕೊಡಲ್ಪಟ್ಟಿರುತ್ತವೆ. ಕೆಲವರು ಇದು ಅಕ್ಕಾದಿಯನ್ ಭಾಷೆಯ ಅಪ್ಲು ಎಂಬ ಪದದಷ್ಟು ಹಿಂದಕ್ಕೆ

ಸಾಗುವದಾಗಿದ್ದು, ಅದರ ಅರ್ಥವು "ಮಗ" ಅಥವಾ "ಬಾಧ್ಯನು" ಎಂದಾಗಿರುತ್ತದೆಂದು ಯೋಚಿಸುತ್ತಾರೆ. ಇನ್ನು ಕೆಲವರು ಇದೊಂದು "ಜಬಾಲ್" ಎಂಬುದರ ಇನ್ನೊಂದು ಪದವಾಗಿದ್ದು, ಅದರ ಅರ್ಥವು "ಕುರುಬ" ಅಥವಾ "ಮಂದೆಯವನು" ಎಂದಾಗಿದೆ ಎಂದು ವಾದಿಸುತ್ತಾರೆ (ನೋಡಿರಿ 4:20). ಹೇಗೂ, ಬಹುಶಃ *ಹಾಬಾಲ್* ಎಂಬುದನ್ನು "ಹಬೆ" ಅಥವಾ "ಉಸಿರು" ಎಂಬುದಾಗಿ ಅರ್ಥಮಾಡಿಕೊಳ್ಳುವದು ಉತ್ತಮವಾಗಿರಬಹುದಾಗಿದೆ. (Richard S. Hess, "Abel," in *The Anchor Bible Dictionary*, ed. David Noel Freedman [New York: Doubleday, 1992], 1:10.) [8]ಅನಂತರದಲ್ಲಿ, ಮಂದೆಗಳನ್ನು ಕಾಯುವುದು ಯಾಕೋಬ (30:36), ಮೋಶೆ (ವಿಮೋಚನಕಾಂಡ 3:1), ಮತ್ತು ದಾವೀದ (1 ಸಮುವೇಲ 16:11) ಇವರಂತಹ ಪ್ರಖ್ಯಾದ ವ್ಯಕ್ತಿಗಳ ವೃತ್ತಿಯಾಗಿತ್ತು. [9]ಕಾಯಿನನು ತನ್ನ ತಂದೆಯಾದ ಆದಾಮನ ವೃತ್ತಿಯನ್ನು ಅನುಸರಿಸಿದನು (3:17-19). [10]ಯಾಜಕಕಾಂಡ 2ರಲ್ಲಿ (ಮತ್ತು ಇತರ ವಾಕ್ಯಭಾಗಗಳಲ್ಲಿ), KJVಯು *ಮಿಂಚಾಹ* ಎಂಬುದನ್ನು "ಮಾಂಸದ ಕಾಣಿಕೆ" ಎಂಬುದಾಗಿ ತಪ್ಪು ಅನುವಾದ ಮಾಡುತ್ತದೆ, ಅಲ್ಲಿ ಸನ್ನಿವೇಶವು "ಧಾನ್ಯದ ಕಾಣಿಕೆ"ಯು ಚರ್ಚೆಯಲ್ಲಿರುತ್ತೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ (ನೋಡಿರಿ NKJV; NASB; NRSV; ESV).

[11]ಈ ಪದವು, ಸಾಕು ಪ್ರಾಣಿಗಳು ಅಥವಾ ಮನುಷ್ಯರಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ "ಮಲಗಿಕೋ" ಎಂಬ ಅರ್ಥವನ್ನು ಕೊಡುತ್ತದೆ (ಆದಿಕಾಂಡ 29:2; ಕೀರ್ತನೆ 23:2; ಯೆಶಾಯ 13:20; 14:30; ಯೆಹೆಜ್ಕೇಲ 34:14); ಹೇಗೂ, ಆದಿಕಾಂಡ 4:7 ಮತ್ತು 49:9ರಲ್ಲಿ, ಇದು "ಜಿಗಿಯುವದಕ್ಕೆ ಸಿದ್ಧವಾಗಿರುವ ಒಂದು ಕ್ರೂರ ಮೃಗ" ಎಂಬ ಅರ್ಥ ಕೊಡುವಂತೆ ಕಾಣಿಸುತ್ತದೆ ಮತ್ತು ಅದನ್ನು ಸಾಂಕೇತಿಕವಾಗಿ ಬಳಸತಕ್ಕದ್ದು. (William White, "רָבַץ," in *TWOT*, 2:830.) [12]John E. Hartley, "שָׁמַר," in *TWOT*, 2:939–40. [13]ಯೋಬನು ತನ್ನ ಮೇಲೆ ಬಂದಿದ್ದಂಥ ಎಲ್ಲಾ ವಿಪತ್ತುಗಳಲ್ಲಿ ಸೈತಾನನಿಗಿದ್ದ ಪಾತ್ರದ ಕುರಿತು ಸಂಪೂರ್ಣ ತಿಳುವಳಿಕೆಯಿಲ್ಲದವನಾಗಿದ್ದನು, ಆದ್ದರಿಂದ ತನ್ನ ದುಸ್ಥಿತಿಗೆ ದೇವರೇ ಜವಾಬ್ದಾರನೆಂದು ಆತನು ಆರೋಪ ಮಾಡಿದ್ದನು. ಉದಾಹರಣೆಗೆ, ಯೋಬ 16:12, 13ರಲ್ಲಿ, ತನ್ನನ್ನು ದೇವರು "ಗುರಿ" ಮಾಡಿಕೊಂಡು ತನ್ನೆಡೆಗೆ "ಬಾಣಗಳನ್ನು" ಹೊಡೆಯುವ ಮೂಲಕ, ಅವನ "ಅಂತರಂಗಗಳನ್ನು ಇರಿದು" ಅವನ "ಪಿತ್ತವನ್ನು" ಭೂಮಿಯ ಮೇಲೆ ಸುರಿಯುವ ಮೂಲಕ ಕರುಣೆಯಿಲ್ಲದವನಾಗಿದ್ದಾನೆಂದು ಆರೋಪಿಸಿದನು. ಪುಸ್ತಕದಲ್ಲಿ ಇನ್ನು ಅನೇಕ ಆರೋಪಗಳು ಸಿಕ್ಕುತ್ತವೆ. [14]Kenneth A. Mathews, *Genesis 1—11:26*, The New American Commentary, vol. 1A (Nashville: Broadman & Holman Publishers, 1996), 277. [15]Elmer B. Smick, "נָקַם," in *TWOT*, 2:598–99. [16]Helmer Ringgren, "נוּד," in *Theological Dictionary of the Old Testament*, trans. David E. Green, ed. G. Johannes Botterweck, Helmer Ringgren, and Heinz-Josef Fabry (Grand Rapids, Mich.: Wm. B. Eerdmans Publishing Co., 1998), 9:271. ಕ್ರಿಯಾಪದ ರೂಪವಾದ נוּד (*ನುದ್*) ಎಂಬುದು "ನೆಲೆಗೊಳ್ಳದ ಒಬ್ಬ ಅಲೆಮಾರಿ"ಯನ್ನು ಸೂಚಿಸುತ್ತದೆ. [17]Mathews, 285. [18]John E. Hartley, "צֹאן," in *TWOT*, 2:749. [19]Gordon J. Wenham, *Genesis 1—15*, Word Biblical Commentary, vol. 1 (Waco, Tex.: Word Books, 1987), 113. [20]Ludwig Koehler and Walter Baumgartner, *The Hebrew and Aramaic Lexicon of the Old Testament*, study ed., trans. and ed. M. E. J. Richardson (Boston: Brill, 2001), 1:528.

[21]Ibid., 1:691. [22]Gerhard F. Hasel, "Iron," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1982), 2:880. [23]"ನಾನು ಕೊಲ್ಲುವೆನು/ಹತಗೈಯುವೆನು" ಎಂಬುದು ಪರ್ಯಾಯವಾಗಿ ಕೆಲವು ಆವೃತ್ತಿಗಳ ಅಡಿಟಿಪ್ಪಣಿಗಳಲ್ಲಿ ಕೊಡಲ್ಪಟ್ಟಿರುತ್ತದೆ (ASV; NIV). "ನಾನು ಕೊಲ್ಲುವೆನು" ಎಂಬ ಅನುವಾದವು NEB ಮತ್ತು REB ತರ್ಜುಮೆಗಳಲ್ಲಿ ಸಿಕ್ಕುತ್ತದೆ. [24]ನೋಡಿರಿ KJV; NKJV; ASV; RSV; NRSV; NAB; JB; NJB; NIV; NJPSV; TEV; NLT; NCV; CEV; ESV. [25]See KJV; NKJV; ASV; RSV; NRSV; NEB; REB; NIV; TEV; NLT; NCV; CEV; ESV. *ಯೆಲೆದ* ಎಂಬ ಪದವು ಹಳೆಯ ಒಡಂಬಡಿಕೆಯಲ್ಲಿ ವಿವಿಧ ರೀತಿಯ ವಯಸ್ಸುಗಳನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿರುತ್ತದೆ, ಅದರಲ್ಲಿ ಶಿಶು (21:8), ಒಬ್ಬ ಹದಿಹರೆಯದವ (21:16), ಮತ್ತು ಪ್ರಾಯಸ್ಥರು (1 ಅರಸು 12:8) ಸೇರಿರುತ್ತಾರೆ. [26]ಈ ಸ್ವಾರ್ಥಚಿತ್ತವು ಮತ್ತು ಪ್ರತೀಕಾರದ ಮನೋಭಾವವು ಕ್ರಿಸ್ತನು ತನ್ನ ಜನರಿಂದ ಬಯಸುವಂಥ ಸಂಗತಿಗೆ ಸರಿಯಾಗಿ ತದ್ವಿರುದ್ಧವೇ ಆಗಿರುತ್ತದೆ. ಮತ್ತಾಯ 18:21, 22ರಲ್ಲಿ, ಆತನು ಪೇತ್ರನಿಗೆ ಅವನ ವಿರುದ್ಧ ಪಾಪ ಮಾಡುವವನನ್ನು "ಏಳೆಪ್ಪತ್ತು ಸಾರಿ" ಅಥವಾ "ಎಪ್ಪತ್ತೇಳು ಸಾರಿ" (NIV) ಕ್ಷಮಿಸಬೇಕೆಂದು ಹೇಳಿದನು. [27]Wenham, 116.